ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜನವರಿ 18, 2025

ಸಂಪುಟ : 51 ಸಂಚಿಕೆ : 246 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



## ಫ್ಲೆಕ್ಸ್, ಹೋರ್ಡಿಂಗ್ಸ್ ದಿಢೀರ್ ತೆರವು

### ತೆರವುಗೊಳಿಸುವಂತೆ ಪಾಲಿಕೆ ಆಯುಕ್ತರಿಗೆ ಪತ್ರ ಬರೆದು ಆದೇಶಿಸಿದ್ದ ಜಿಲ್ಲಾಧಿಕಾರಿ

ದಾವಣಗೆರೆ, ಜ. 17- ನಗರದ ಸೌಂದರ್ಯಕ್ಕೆ ಧಕ್ಕೆಯಾಗಿದ್ದ, ಪಾದಚಾರಿಗಳಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗಿದ್ದ ಎಲ್ಲಾ ಬೃಹತ್ ಫ್ಲೆಕ್ಸ್ ಹಾಗೂ ಹೋರ್ಡಿಂಗ್ಸ್ ತೆರವು ಕಾರ್ಯಾಚರಣೆ ಶುಕ್ರವಾರ ನಡೆದಿದೆ.

ಪಾಲಿಕೆ ಆಯುಕ್ತರ ಆದೇಶದ ಮೇರೆಗೆ ಬೆಳಿಗ್ಗೆ 6 ಗಂಟೆಯಿಂದಲೇ ನಾಲ್ಕು ತಂಡಗಳಿಂದ ನಗರದ ನಾಲ್ಕೂ ದಿಕ್ಕುಗಳಿಂದ ಹೋರ್ಡಿಂಗ್ಸ್ ತೆರವು ಆರಂಭವಾಯಿತು.

ಕ್ರೇನ್‌ಗಳನ್ನು ಬಳಸಿ ಅಕ್ರಮವಾಗಿ ಅಳವಡಿಸಲಾಗಿದ್ದ ಹೋರ್ಡಿಂಗ್ಸ್, ಫ್ಲೆಕ್ಸ್ ಗಳನ್ನು ತೆರವುಗೊಳಿಸಿ ಹೋರ್ಡಿಂಗ್ಸ್ ಬಳಸಲಾಗಿದ್ದ ಕಬ್ಬಿಣದ ಪರಿಕರಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು.

ಈ ವೇಳೆ ಫ್ಲೆಕ್ಸ್ ಹಾಗೂ ಹೋರ್ಡಿಂಗ್ಸ್ ಸಂಬಂಧಪಟ್ಟವರು, ತೆರವುಗೊಳಿಸದಂತೆ ಪಾಲಿಕೆ ಅಧಿಕಾರಿ ವರ್ಗಕ್ಕೆ ಮನವಿ ಮಾಡಿದರಾದರೂ, 'ನಮ್ಮ ಆದೇಶ ನಾವು ಪಾಲಿಸುತ್ತಿದ್ದೇವೆ' ಎಂಬ ಉತ್ತರ ಬರುತ್ತಿತ್ತು. ಪಾಲಿಕೆಯ ಮೂರು ವಲಯಗಳಲ್ಲೂ ತೆರವು ಕಾರ್ಯಾಚರಣೆ ಆರಂಭವಾಗಿತ್ತು. ಜನತೆ ತದೇಕಚಿತ್ತದಿಂದ ಈ ಕಾರ್ಯ ವೀಕ್ಷಿಸುತ್ತಿದ್ದರು.

ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ ಹಲವು ದಿನಗಳಿಂದ ಪರವಾನಿಗೆ ಪಡೆಯದೇ ಕಾನೂನು ಬಾಹಿರವಾಗಿ ಬೃಹತ್ ಗಾತ್ರದ ಜಾಹೀರಾತು ಹೋರ್ಡಿಂಗ್ಸ್ ನಿರ್ಮಾಣ ಮಾಡಲಾಗುತ್ತಿದೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿ ಬಂದಿತ್ತು. ಸಂಘ-ಸಂಸ್ಥೆಗಳೂ ಈ ಕುರಿತು ಅಧಿಕಾರಿಗಳ ಗಮನಕ್ಕೆ ತಂದಿದ್ದರು.

ಈ ಬಗ್ಗೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು ಶೀಘ್ರವೇ ಅನಧಿಕೃತ ಫ್ಲೆಕ್ಸ್, ಹೋರ್ಡಿಂಗ್ಸ್ ತೆರವುಗೊಳಿಸುವಂತೆ ಮಹಾನಗರ ಪಾಲಿಕೆ ಆಯುಕ್ತರಿಗೆ ಪತ್ರ ಬರೆದಿದ್ದರು. ಪಾಲಿಕೆ ವ್ಯಾಪ್ತಿಯಲ್ಲಿ ಪಾಲಿಕೆ, ದೂಡಾದಿಂದ ಅನುಮತಿ ಪಡೆಯದೇ, ಸುರಕ್ಷತಾ ಕ್ರಮ ಕೈಗೊಳ್ಳದೇ (2ನೇ ಪುಟಕ್ಕೆ)



### ಹೋರ್ಡಿಂಗ್ಸ್ ಸಂಘ ಆಕ್ರೋಶ

ನಗರದಲ್ಲಿ ಹೋರ್ಡಿಂಗ್ಸ್ ಅಸೋಸಿಯೇಷನ್‌ನಿಂದ ಅಧಿಕೃತ ವಾಗಿ ಅಳವಡಿಸಲಾಗಿದ್ದ ಹೋರ್ಡಿಂಗ್ಸ್ ತೆರವುಗೊಳಿಸಲಾಗಿದೆ ಎಂದು ದಾವಣಗೆರೆ ಹೋರ್ಡಿಂಗ್ಸ್ ಸಂಘದ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಆರೋಪಿಸಿದ್ದಾರೆ.

ಕಳೆದ 16 ವರ್ಷಗಳಿಂದ ಸಂಘದಿಂದ ಹೋರ್ಡಿಂಗ್ಸ್ ಅಳವಡಿಸುವ ಕೆಲಸ ಮಾಡಲಾಗುತ್ತಿತ್ತು. 2019ರವರೆಗೂ ಕಂದಾಯ ಕಟ್ಟುತ್ತಿದ್ದೆವು. ಪಾಲಿಕೆಯಿಂದ ತೆರಿಗೆ ನವೀಕರಿಸಿ ನಿರ್ಧರಿಸಬೇಕಿತ್ತು. ಈ ಬಗ್ಗೆ ನಾವೇ ಮನವಿಯನ್ನೂ ನೀಡಿದ್ದೆವು. ಇಲ್ಲಿಯವರೆಗೂ ನಮಗೆ ಯಾವುದೇ ಮಾಹಿತಿ ನೀಡಿರಲಿಲ್ಲ ಎಂದರು.

ಇಬ್ಬರು ಪಾಲಿಕೆ ಸದಸ್ಯರು ಗುಂಡಿ ವೃತ್ತದಲ್ಲಿ ಅನಧಿಕೃತವಾಗಿ ಹೋಲ್ಡಿಂಗ್ಸ್ ಅಳವಡಿಸಿದರು. ಇದನ್ನು ಬೇರೆ ಸದಸ್ಯರು ನಿನ್ನೆ ನಡೆದ ಸಾಮಾನ್ಯ ಸಭೆಯಲ್ಲೂ ಪ್ರಶ್ನಿಸಿದ್ದಾರೆ. ಜಿಲ್ಲಾಧಿಕಾರಿಗಳೂ ಸಹ ಅನಧಿಕೃತ ಹೋರ್ಡಿಂಗ್ಸ್ ತೆರವಿಗೆ (2ನೇ ಪುಟಕ್ಕೆ)

## ಬಿಪಿಎಲ್ ಸದಸ್ಯರಿಗೆ 'ಆರೋಗ್ಯ'

### ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಉಚಿತ ಆರೋಗ್ಯ ಸೇವೆ ಕಲ್ಪಿಸುವಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಆದೇಶ

ಬೆಂಗಳೂರು, ಜ.17- ಬಿಪಿಎಲ್ ಪಡಿತರ ದಾರರ ಕುಟುಂಬದ ಸದಸ್ಯರಿಗೆ ಇನ್ನು ಮುಂದೆ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಉಚಿತ ಆರೋಗ್ಯ ಸೇವೆ ಕಲ್ಪಿಸುವಂತೆ ಆದೇಶ ಮಾಡ ಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಪಡಿತರ ಚೀಟಿ ಇದ್ದವರಿಗೆ ಎಲ್ಲಾ ರೀತಿಯ ಆರೋಗ್ಯ ಸೇವೆಯನ್ನು ಉಚಿತವಾಗಿ ನೀಡ ಬೇಕೆನ್ನುವ ಸೂಚನೆಯನ್ನು ಈಗಾಗಲೇ ಹೊರಡಿಸಲಾಗಿದೆ.

ಎಪಿಎಲ್ ಪಡಿತರದಾರರಿಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ರಿಯಾಯಿತಿ ದರದಲ್ಲಿ ಆರೋಗ್ಯ ಸೇವೆ ಕಲ್ಪಿಸುವಂತೆ ಸೂಚಿಸಲಾಗಿದೆ, ಅವರ ಕುಟುಂಬದ ಆರ್ಥಿಕ ಸಾಮರ್ಥ್ಯ ಗಮನದ ಲ್ಲಿಟ್ಟುಕೊಂಡು ದರ ನಿಗದಿ ಮಾಡಬೇಕು ಎಂದರು.

ಬಡವರಿಗೂ ದೊಡ್ಡ ಕಾಯಿಲೆಗಳು ಬರುತ್ತವೆ, ಕಿಡ್ನಿ ಕಸಿ ಚಿಕಿತ್ಸೆಗಾಗಿ ಐದು ಸಾವಿರ ರೋಗಿಗಳು





ಸರದಿಯಲ್ಲಿದ್ದಾರೆ, ದಾನಿಗಳು ದೊರೆತರೆ ನಿತ್ಯ ಕಿಡ್ನಿ ಕಸಿ ಮಾಡುವ ನುರಿತ ವೈದ್ಯರ ತಂಡ ನಮ್ಮಲ್ಲಿದೆ ಎಂದರು.

ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭಿಸಬೇಕೆಂಬುದು ನಮ್ಮ ಗುರಿ, ಖಾಸಗಿ ವೈದ್ಯಕೀಯ ಆಸ್ಪತ್ರೆಗಳಿದ್ದರೂ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಹಂತ ಹಂತವಾಗಿ ಎಲ್ಲೆಡೆ ತೆರೆಯಲಾಗುವುದು. ಖಾಸಗಿ ಆಸ್ಪತ್ರೆಗಳ ಮಾದರಿಯಲ್ಲಿ ಶುಚಿತ್ವ, ನಿರ್ವಹಣೆ ಕಾಪಾಡುವ ಜೊತೆಗೆ ಗುಣಮಟ್ಟದ ಚಿಕಿತ್ಸಾ ಸೌಲಭ್ಯ ಸರ್ಕಾರಿ ಆಸ್ಪತ್ರೆಗಳಲ್ಲೂ ಸಿಗು ವಂತಾಗಬೇಕು. ಶ್ರೀಮಂತರು, ನಮ್ಮಂತಹ ರಾಜ ಕಾರಣಿಗಳು ಸರ್ಕಾರಿ ಆಸ್ಪತ್ರೆಗೆ ಬರುವಂತಾಗ ಬೇಕೆಂಬ ದಿಕ್ಕಿನಲ್ಲಿ ಕಾರ್ಯಕ್ರಮ ರೂಪಿಸಿ ಎಂದು ಸೂಚಿಸಿರುವುದಾಗಿ ರಾಜೀವ್ ಗಾಂಧಿ ಆರೋಗ್ಯ ವಿವಿಯ ಪ್ರಾದೇಶಿಕ ಕಚೇರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಾ ತಿಳಿಸಿದರು.

ಸಮಾಜದ ಎಲ್ಲ ವರ್ಗಕ್ಕೂ ಗುಣಮಟ್ಟದ ವೈದ್ಯಕೀಯ ಸೇವೆ ದೊರಕಿಸುವ ದಿಕ್ಕಿನಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ.

ರಾಜೀವ್ ಗಾಂಧಿ ವಿಶ್ವವಿದ್ಯಾಲಯ, ಏಷ್ಯಾದ ಅತ್ಯಂತ ದೊಡ್ಡ ಆರೋಗ್ಯ ವಿವಿಯಾಗಿದ್ದು, ಮೂರೂವರೆ ಲಕ್ಷ ವೈದ್ಯ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆಯುತ್ತಿದ್ದಾರೆ. ಆರೋಗ್ಯ ಸೇವೆ ಜನರಿಗೆ ಸರಳವಾಗಿ ಸಿಗುವಲ್ಲಿ ಸಂಶೋಧನೆಗಳನ್ನು ಹೆಚ್ಚೆಚ್ಚು (2ನೇ ಪುಟಕ್ಕೆ)

## ಮಂಗಳೂರು ಬ್ಯಾಂಕ್‌ನಲ್ಲಿ 10 ಕೋಟಿ ರೂ. ಲೂಟಿ

ಮಂಗಳೂರು, ಜ. 17-ಇಲ್ಲಿನ ಉಲ್ಲಾಳ ತಾಲ್ಲೂಕಿನ ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನಿಂದ ಸಶಸ್ತ್ರ ದರೋಡೆಕೋರರ ತಂಡ ಹತ್ತರಿಂದ ಹನ್ನೆರಡು ಕೋಟಿ ರೂ. ಮೌಲ್ಯದ ಸರಕುಗಳನ್ನು ಲೂಟಿ ಮಾಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿನ್ನೆಯಷ್ಟೇ ಬೀದರ್‌ನಲ್ಲಿ ಎ.ಟಿ.ಎಂ.ಗೆ ತುಂಬಲು ತೆಗೆದುಕೊಂಡು ಹೋಗಲಾಗುತ್ತಿದ್ದ 93 ಲಕ್ಷ ರೂ.ಗಳನ್ನು ಬೈಕ್‌ನಲ್ಲಿ ಬಂದ ಇಬ್ಬರು ದರೋಡೆಕೋರರು ಲೂಟಿ ಮಾಡಿದ್ದರು.

ಶುಕ್ರವಾರ ಬೆಳಗ್ಗೆ 11:30 ರಿಂದ 12:30 ರ ನಡುವೆ ಫಿಯೆಟ್ ಕಾರಿನಲ್ಲಿ ಬಂದ ದರೋಡೆಕೋರರು ಸರಕುಗಳನ್ನು ಲೂಟಿ ಮಾಡಿದ್ದಾರೆ ಎಂದು ಮಂಗಳೂರು ಪೊಲೀಸರು ತಿಳಿಸಿದ್ದಾರೆ.

ಮುಸುಕು ಧರಿಸಿದ್ದ ಐದರಿಂದ ಆರು ಜನರು ಪಿಸ್ತೂಲ್, ತಲವಾರ್ ಹಾಗೂ ಚಾಕು ಹಿಡಿದು ಬ್ಯಾಂಕಿಗೆ ನುಗ್ಗಿದ್ದಾರೆ. ಇವರ ವಯಸ್ಸು 25 ರಿಂದ 35 ಎಂದು ಪೊಲೀಸರು ತಿಳಿಸಿದ್ದಾರೆ. ದರೋಡೆಕೋರರು ಹಿಂದಿ ಹಾಗೂ ಕನ್ನಡದಲ್ಲಿ (2ನೇ ಪುಟಕ್ಕೆ)

## ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್‌ಗೆ 14 ವರ್ಷ ಜೈಲು ಶಿಕ್ಷೆ



ಇಸ್ಲಾಮಾಬಾದ್, ಜ.17-ಪಾಕಿಸ್ತಾನದ ಮಾಜಿ ಪ್ರಧಾನಮಂತ್ರಿ ಇಮ್ರಾನ್ ಖಾನ್ ಅವರಿಗೆ ನ್ಯಾಯಾಲಯ ಭ್ರಷ್ಟಾಚಾರ ಪ್ರಕರಣದಲ್ಲಿ 14 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

19 ದಶಲಕ್ಷ ಪೌಂಡ್‌ಗಳ ಅಲ್ - ಕಾದಿರ್ ಟ್ರಸ್ಟ್ ಪ್ರಕರಣದಲ್ಲಿ ಈ ಶಿಕ್ಷೆ ವಿಧಿಸಲಾಗಿದೆ. ಖಾನ್ ಅವರ ಪತ್ನಿ ಬುಶ್ರಾ ಬೀಬಿ ಅವರಿಗೆ ಇದೇ ಪ್ರಕರಣದಲ್ಲಿ ಏಳು ವರ್ಷಗಳ ಜೈಲು ಶಿಕ್ಷೆಯಾಗಿದೆ.

ನ್ಯಾಯಾಧೀಶ ನಾಸಿರ್ ಜಾವಿದ್ ರಾಣಾ ಅವರ ಭ್ರಷ್ಟಾಚಾರ ವಿರೋಧಿ ನ್ಯಾಯಾಲಯ ಈ ಶಿಕ್ಷೆ ಪ್ರಕಟಿಸಿದೆ. ಅಡಿಲ ಜೈಲಿನಲ್ಲಿರುವ ತಾತ್ಕಾಲಿಕ ನ್ಯಾಯಾಲಯದಲ್ಲಿ ಈ ಶಿಕ್ಷೆ ಪ್ರಕಟಿಸಲಾಗಿದೆ.

ಖಾನ್‌ಗೆ ದಶಲಕ್ಷ ರೂಪಾಯಿ ಹಾಗೂ ಬುಶ್ರಾ ಬೀಬಿಗೆ 5 ಲಕ್ಷ ರೂ. ದಂಡ ವಿಧಿಸಲಾಗಿದೆ. ಈ ದಂಡ ಪಾವತಿಸದೇ ಇದ್ದರೆ ಖಾನ್ ಆರು ತಿಂಗಳು ಹಾಗೂ ಬೀಬಿ ಮೂರು ತಿಂಗಳು ಹೆಚ್ಚಿನ ಶಿಕ್ಷೆ ಅನುಭವಿಸಬೇಕಿದೆ. (2ನೇ ಪುಟಕ್ಕೆ)





## ಕನಕ ಗುರುಪೀಠದ ಶ್ರೀ, ನಿಡುಮಾಮಿಡಿ ಶ್ರೀಗಳಿಂದ ಎಸ್ಸೆಸ್‌ಗೆ ಆಶೀರ್ವಾದ

ಬೆಂಗಳೂರು, ಜ. 17- ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳು ಹಾಗೂ ಶ್ರೀ ನಿಡುಮಾಮಿಡಿ ಜಗದ್ಗುರು ಮಠ, ಗೂಳೂರು ಮಹಾ ಸಂಸ್ಥಾನದ ಪರಮಪೂಜ್ಯ ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿಗಳು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಿವಾಸಕ್ಕೆ ತೆರಳಿ ಆಶೀರ್ವಾದ ಮಾಡಿದರು.

ಬೆಂಗಳೂರಿನ ನಿವಾಸದಲ್ಲಿ ಶಾಸಕರ ಆರೋಗ್ಯ ವಿಚಾರಿಸಿ ಕುಶಲೋಪರಿ ನಡೆಸಿದರು.

ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ಯುವ ನಾಯಕರಾದ ಸಮರ್ಥ್ ಶಾಮನೂರು, ಶಿವ ಶಾಮನೂರು ಮತ್ತಿತರರು ಉಪಸ್ಥಿತರಿದ್ದರು.

## ಕುಂಭ ಮೇಳದಲ್ಲಿ 45 ಕೋಟಿ ಜನ ಭಾಗಿ ನಿರೀಕ್ಷೆ

### ಪೊಲೀಸರಿಗೆ ಗುಂಪು ನಿಯಂತ್ರಣದ ಸವಾಲು

ಮಹಾಕುಂಭನಗರ, ಜ. 17- ಮಹಾ ಕುಂಭಮೇಳ ಆರಂಭವಾದ ಮೊದಲ ಆರು ದಿನಗಳಲ್ಲಿ ಏಳು ಕೋಟಿ ಭಕ್ತರು, ಕಲ್ಪವಾಸಿಗಳು ಹಾಗೂ ಸಂತರು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ಈ ಬಾರಿಯ ಮಹಾ ಕುಂಭಮೇಳದಲ್ಲಿ 45 ಕೋಟಿ ಜನ ಭಾಗಿಯಾಗುವ ನಿರೀಕ್ಷೆ ಇದೆ ಎಂದು ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಗುಂಪು ನಿಯಂತ್ರಣ ಪೊಲೀಸರಿಗೆ ಪ್ರಮುಖ ಸವಾಲಾಗಿದೆ. ಗುಂಪು ನಿಯಂತ್ರಣಕ್ಕಾಗಿ ಏಕೀಕೃತ ನಿಯಂತ್ರಣ ಕೇಂದ್ರವೊಂದನ್ನು ಸ್ಥಾಪಿಸಲಾಗಿದೆ. ಇದು ಜನರಿಗೆ ನೆರವಾಗುವ ನಿರೀಕ್ಷೆ ಇದೆ.

ಗುಂಪು ನಿಯಂತ್ರಣ ಅಷ್ಟೇ ಅಲ್ಲದೆ ಇಡೀ ಪ್ರದೇಶದ ಮೇಲೆ ನಿಗಾ ವಹಿಸಲು ಕೇಂದ್ರ ನೆರವಾಗುತ್ತಿದೆ. ಕುಂಭಮೇಳದ ಅಂಗವಾಗಿ 2750 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಕುಂಭ ಮೇಳದ ಪ್ರದೇಶವಷ್ಟೇ ಅಲ್ಲದೆ ಇಡೀ ನಗರದಲ್ಲಿ ಕ್ಯಾಮೆರಾಗಳನ್ನು ಅಳವಡಿಸ ಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಕುಮಾರ್ ತಿಳಿಸಿದ್ದಾರೆ. ಭದ್ರತೆ, ಗುಂಪು ನಿಯಂತ್ರಣ ಹಾಗೂ ಅಪರಾಧ ತಡೆಗಳ ಮೂರು (2ನೇ ಪುಟಕ್ಕೆ)

## ಮುಂದಿನ ಸಂಪುಟ ಸಭೆಯಲ್ಲಿ ಜಾತಿ ಗಣತಿ ವರದಿ ಮಂಡನೆ: ಸಿಎಂ

ಮಂಗಳೂರು, ಜ.17- ಜಾತಿಗಣತಿ ವರದಿಯನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ವಿಷಯ ಮಂಡಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪ್ರತಿ ಪಕ್ಷಗಳು ಜಾತಿ ಗಣತಿ ಯನ್ನು ವಿರೋಧಿಸುತ್ತಿರುವ ಬಗ್ಗೆ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ವರದಿಯಲ್ಲಿ ಏನಿದೆ ಎಂದು ತಿಳಿಯದೆ ಏಕೆ ವಿರೋಧ ಮಾಡುತ್ತಾರೆ. ವರದಿ ಇನ್ನೂ ಬಹಿರಂಗಗೊಳ್ಳದಿರುವುದರಿಂದ ಈ ಬಗ್ಗೆ ನನಗೂ ತಿಳಿದಿಲ್ಲ ಎಂದರು

ನಮ್ಮ ಪ್ರಣಾಳಿಕೆಯಲ್ಲಿ ಜಾತಿಗಣತಿಯನ್ನು ಮಂಡಿಸಲಾಗುವುದು ಎಂದು ಜನತೆಗೆ ಭರವಸೆ ನೀಡಲಾಗಿದೆ ಎಂದರು.

ಉಲ್ಲಾಳ್ ನಲ್ಲಿ ನಡೆದಿರುವ ದರೋಡೆ ಪ್ರಕರಣದ ಬಗ್ಗೆ ಮಾತನಾಡಿ ದರೋಡೆಕೋರರನ್ನು ಕೂಡಲೇ ಪತ್ತೆ ಹಚ್ಚಿ ಶಿಕ್ಷೆ ನೀಡುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

## ಮುಡಾ : ಜಾರಿ ನಿರ್ದೇಶನಾಲಯದಿಂದ 300 ಕೋಟಿ ರೂ. ಮೌಲ್ಯದ ಆಸ್ತಿ ವಶ

ನವದೆಹಲಿ, ಜ.17- ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ 300 ಕೋಟಿ ರೂ. ಮೌಲ್ಯದ 140 ಸ್ಥಿರಾಸ್ತಿಗಳನ್ನು ವಶಕ್ಕೆ ತೆಗೆದುಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತಿತರರು ಆರೋಪಿಗಳಾಗಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಯಲ್ಲಿ ನಡೆದಿದೆ (2ನೇ ಪುಟಕ್ಕೆ)

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ಶ್ರೀಮತಿ ಕೆ.ಎನ್. ಉಮಾ
ಶ್ರೀ ಕೆ.ಎನ್. ರವಿ, ಶ್ರೀ ಕೆ.ಎನ್. ಪ್ರಭು
# 571/2, 1ನೇ ಕ್ರಾಸ್, 1ನೇ ಮೇನ್,
ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 11.01.2025ನೇ ಶನಿವಾರ
ಬೆಳಿಗ್ಗೆ 6.00 ಗಂಟೆಗೆ
ನಮ್ಮ ಪೂಜ್ಯ ತಾಯಿಯವರಾದ
ದಿ|| ಶ್ರೀ ಕೆ. ನಾಗಕುಮಾರಸ್ವಾಮಿ, ವಕೀಲರು,
ಇವರ ಧರ್ಮಪತ್ನಿ

ಶ್ರೀಮತಿ ಕೆ.ಬಿ. ಕಲ್ಲಮ್ಮನವರು
(ಜನನ : 13.12.1954 - ನಿಧನ : 11.01.2025)

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 19.01.2025ನೇ ಭಾನುವಾರ ಬೆಳಿಗ್ಗೆ 10.30ಕ್ಕೆ, ನಮ್ಮ ಸ್ವಗೃಹ, 571/2, 1ನೇ ಕ್ರಾಸ್, 1ನೇ ಮೇನ್, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು :
ಮೃತರ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
ಹಾಗೂ ಬಂಧು-ಮಿತ್ರರು, ಫೋನ್ : 9845302194, 9880207167



# ಪ್ರಾಥಮಿಕ ಹಂತದಲ್ಲಿ ಉತ್ತಮ ಶಿಕ್ಷಣ ಲಭಿಸಿದರೆ ಮಕ್ಕಳ ಭವಿಷ್ಯ ಉತ್ತಮ



**ಚಂದ್ರಗುಪ್ತ ಮೌರ್ಯ ವಿದ್ಯಾಸಂಸ್ಥೆಯಲ್ಲಿ ನರ್ಸರಿ ತರಗತಿಗಳಿಗೆ ಚಾಲನೆ ನೀಡಿದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ**

ಹರಿಹರ, ಜ. 17- ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸುವ ಉದ್ದೇಶದಿಂದ ಪ್ರಾಥಮಿಕ ಹಂತದಲ್ಲಿ ಉತ್ತಮ ಶಿಕ್ಷಣ ಲಭಿಸಿದರೆ ಮಕ್ಕಳ ಬದುಕು ಭವಿಷ್ಯ ಉತ್ತಮವಾಗಿ ರೂಪಗೊಳ್ಳುತ್ತದೆ ಎಂಬ ಉದ್ದೇಶದಿಂದ ಸಂಸ್ಥೆಯಲ್ಲಿ ನರ್ಸರಿ ತರಗತಿಗಳನ್ನು ಪ್ರಾರಂಭ ಮಾಡಲಾಗಿದೆ ಎಂದು ಕಾಗಿನೆಲೆ ಗುರು ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ತಿಳಿಸಿದರು.

ಅವರು ಬೆಳ್ಳೂಡಿ ಕಾಗಿನೆಲೆ ಮಹಾ ಸಂಸ್ಥಾನ, ಕನಕ ಗುರು ಪೀಠ ಶಾಖಾ ಮಠದ ಆಶ್ರಯದಲ್ಲಿ ನಡೆಯುತ್ತಿರುವ ಚಂದ್ರಗುಪ್ತ ಮೌರ್ಯ ವಿದ್ಯಾ ಸಂಸ್ಥೆಯಲ್ಲಿ ನರ್ಸರಿ ತರಗತಿಗಳಿಗೆ ಚಾಲನೆ ಮಾಡಿ ಮಾತನಾಡುತ್ತಿದ್ದರು.

ಮಕ್ಕಳು ತಳಮಟ್ಟದಲ್ಲಿ ಉತ್ತಮವಾಗಿ ಕಲಿತಾಗ ಮಾತ್ರ ಅವರ ಮುಂದಿನ ವಿದ್ಯಾಭ್ಯಾಸ ಮತ್ತು ಕಲಿಕೆಗೆ ಅನುಕೂಲಕರವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ. ಮಂಜುನಾಥ್ ಮಾಗೋಡಿ, ನಿಂಗಪ್ಪ ಉಪ್ಪಾರ್, ಬಸವರಾಜ್ ತುಂಬಿಗಿ, ರವಿ ಆರ್., ಎಸ್. ನಿಂಗಪ್ಪ, ಶ್ರೀಮತಿ ಡಾ. ಶೃತಿ ಇನಾಮ್‌ದಾರ್, ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ನಗರದಲ್ಲಿ ನಾಳೆ ವಾಸ್ಕ್ಯುಲರ್ ಚಿಕಿತ್ಸೆ

ದಾವಣಗೆರೆ, ಜ. 17- ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ವಾಸ್ಕ್ಯುಲರ್ ತಜ್ಞ ಡಾ. ಬಿ. ರಾಜೇಂದ್ರ ಪ್ರಸಾದ್ ಅವರು ನಗರದ ಆರೈಕೆ ಆಸ್ಪತ್ರೆಯಲ್ಲಿ ಇದೇ ದಿನಾಂಕ 19ರ ಭಾನವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಸಮಾಲೋಚನೆಗೆ ಲಭ್ಯವಿರುತ್ತಾರೆ. ಕೈ ಮತ್ತು ಕಾಲುಗಳ ಊತ ಮತ್ತು ನೋವು, ಮಧುಮೇಹದ ಕಾಲು, ಡಯಾಲಿಸಿಸ್, ವಾಸಿಯಾಗದ ಗಾಯ, ಗ್ಯಾಂಗ್ರೀನ್ ಮುಂತಾದ ಸಮಸ್ಯೆಗಳ ಬಗ್ಗೆ 80505 65080 ಮೊಬೈಲ್ ನಂಬರ್‌ಗೆ ಸಂಪರ್ಕಿಸಿ.

# ಉಡಾಫೆ ಅಧಿಕಾರಿಗಳನ್ನು ಅಮಾನತ್ತು ಪಡಿಸಲು ಮಾನವ ಹಕ್ಕುಗಳ ಹಿತರಕ್ಷಣಾ ಸಮಿತಿ ಆಗ್ರಹ



ಹರಪನಹಳ್ಳಿ, ಜ. 17- ಉಡಾಫೆಯಿಂದ ಮಾತ ನಾಡುವ ಅಧಿಕಾರಿಗಳನ್ನು ಕೂಡಲೇ ಸೇವೆಯಿಂದ ಅಮಾನತ್ತು ಮಾಡಬೇಕು ಎಂದು ಭಾರತೀಯ ಮಾನವ ಹಕ್ಕುಗಳ ಹಿತರಕ್ಷಣಾ ಸಮಿತಿ ಸದಸ್ಯರು ಆಗ್ರಹಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀಲಗುಂದ ಗ್ರಾಮದ ಜಮೀನಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಿಂದ ತಹಶೀಲ್ದಾರ್ ಕಛೇರಿ ಹಾಗೂ ಸಹಾಯಕ ಆಯುಕ್ತರ ಕಛೇರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ನ್ಯಾಯ ಒದಗಿಸಿ ಕೊಡಲು ಲಿಖಿತ ಅರ್ಜಿಗಳನ್ನು ಸಲ್ಲಿಸಿದರೂ ಸಂಬಂಧಿಸಿದ ಅಧಿಕಾರಿಗಳು ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ ದಾರಿ ತಪ್ಪಿಸುವ ಕೆಲಸ ಮಾಡಿ, ತಮ್ಮ ಮನಬಂದಂತೆ ಮಾಹಿತಿ ಮತ್ತು ಆದೇಶ ನೀಡಿದ್ದು ದುರಂತ ಸಂಗತಿ ಎಂದು ದೂರಿದರು.

ಕೃಷಿಕ ರೈತ ಪರ ಹೋರಾಟಗಾರ ಇ. ಕರಿಬಸಪ್ಪ ಮಾತನಾಡಿ, ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೆ ಇರುವ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕು ಇದರ ಬಗ್ಗೆ ಜಿಲ್ಲಾಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ಸ್ಥಳ ಪರಿಶೀಲಿಸಿ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ಮುಖ್ಯಮಂತ್ರಿ ಮತ್ತು ಕಂದಾಯ ಮಂತ್ರಿಯವರಿಗೆ ದೂರು ಸಲ್ಲಿಸಿ, ವಿಧಾನಸೌಧದ ಮುಂದೆ ಪ್ರತಿಭಟನೆ ಮಾಡಲು ನಿರ್ಧರಿಸಿದ್ದೇವೆ ಎಂದರು.

ಗೋಷ್ಠಿಯಲ್ಲಿ ಸದಸ್ಯರಾದ ಇ. ಆನಂದಪ್ಪ, ಹಾಲಸ್ವಾಮಿ ಮಾಡಲಗೇರಿ, ಅನಂತ ರಾಜ, ತಿರುಪತೆಪ್ಪ, ದುರುಗಪ್ಪ, ಪ್ರಭು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಫ್ಲೆಕ್ಸ್, ಹೋರ್ಡಿಂಗ್ಸ್ ದಿಢೀರ್ ತೆರವು

**(1ನೇ ಪುಟದಿಂದ)** ಹೋರ್ಡಿಂಗ್ಸ್ ಮತ್ತು ಫ್ಲೆಕ್ಸ್ ಅಳವಡಿಸುವವರ ವಿರುದ್ಧ ಎಫ್.ಐ.ಆರ್ ದಾಖಲಿಸುವಂತೆಯೂ ಸೂಚಿಸಿದ್ದರು.

ಸಾರ್ವಜನಿಕ ರಸ್ತೆ, ಇತರೆ ಸ್ಥಳಗಳಲ್ಲಿ ಕಾನೂನುಬಾಹಿರವಾಗಿ ಯಾವುದೇ ಕಟ್ಟಡ ನಿರ್ಮಿಸುವುದು, ಅನಧಿಕೃತ ಕೆಲಸ ಮಾಡಬಾರದಂದು ನ್ಯಾಯಾಲಯ ಆದೇಶ ನೀಡಿದೆ. ಸಾರ್ವಜನಿಕ ಹಿತಾಸಕ್ತಿಗೆ ಸಂಬಂದಿಸಿದ ಮೊಕದ್ದಮೆಯಲ್ಲಿ ಹೈಕೋರ್ಟ್ ಬಿಬಿಎಂಪಿಗೆ ಸಂಬಂಧಿಸಿದಂತೆ ಹೋರ್ಡಿಂಗ್ಸ್ ಮತ್ತು ಜಾಹೀರಾತುಗಳನ್ನು ಪ್ರಚುರ ಪಡಿಸುವ ಬಗ್ಗೆ ಮತ್ತು ಅಕ್ರಮ ಜಾಹೀರಾತುಗಳನ್ನು ನಿಯಂತ್ರಿಸುವ ಸಂಬಂಧ ಸರ್ಕಾರ ಮತ್ತು ನಗರಾಭಿವೃದ್ಧಿ ಇಲಾಖೆಗೆ ಆದೇಶ ಸಹ ನೀಡಿದೆ. ಲೋಕಾಯುಕ್ತರು, ಉಪ ಲೋಕಾಯುಕ್ತರು ಸಹ ಅನೇಕ ಸೂಚನೆ, ಆದೇಶಗಳನ್ನು ಸರ್ಕಾರ, ನಗರಾಭಿವೃದ್ಧಿ ಇಲಾಖೆಗೆ ನೀಡಿದ್ದಾರೆ. ಕೆಲ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ ಎಂದು ಜಿಲ್ಲಾಧಿಕಾರಿ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದರು.

ನಗರದ ಕರ್ನಲ್ ಎಂ.ಬಿ.ರವೀಂದ್ರನಾಥ ವೃತ್ತ, ಶಾರದಾಂಬ ವೃತ್ತ, ಲಕ್ಷ್ಮೀ ಫ್ಲೋರ್‌ಮಿಲ್, ಶಾಬನೂರು ರಸ್ತೆ, ಡಾ.ಎಂ.ಸಿ. ಮೋದಿ ಸರ್ಕಲ್, ವಿದ್ಯಾರ್ಥಿ ಭವನ ವೃತ್ತ, ಡಾ.ಬಿ.ಆರ್.ಅಂಬೇಡ್ಕರ್ ಸರ್ಕಲ್, ಜಯದೇವ ಸರ್ಕಲ್, ಹದಡಿ ರಸ್ತೆ, ಅರಸು ಸರ್ಕಲ್, ಅಶೋಕ ಥಿಯೇಟರ್, ನರಸರಾಜ ರಸ್ತೆ, ಪಾಲಿಕೆ, ಕಿತ್ತೂರು ಚನ್ನಮ್ಮ ವೃತ್ತ ಇತರೆಡೆ ಯಾವುದೇ ಪರವಾನಿಗೆ ಮತ್ತು ಅನುಮತಿ ಪಡೆಯದೇ ಅನಧಿಕೃತವಾಗಿ ಫ್ಲೆಕ್ಸ್ ಮತ್ತು ಹೊರ್ಡಿಂಗ್ಸ್ ಅಳವಡಿಸಿರುವುದರಿಂದ ಮಹಾನಗರ ಪಾಲಿಕೆ ಮತ್ತು ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದು ಗಂಭೀರ ಸಂಗತಿ ಎಂದು ಅವರು ಹೇಳಿದ್ದರು.

ಹಸಿರು ನ್ಯಾಯಾಧೀಕರಣದ ಆದೇಶ ಉಲ್ಲಂಘಿಸಿ ಪ್ಲಾಸ್ಟಿಕ್ ಬಳಸುವುದು, ಕೆಲ ಕಡೆ ಜಾಹೀರಾತು ಫಲಕ ಅಳವಡಿಸಲು ಮರ ಕಡಿಯುತ್ತಿರುವುದೂ ಸಹ ವರದಿಯಾಗಿದೆ. ಅಂತಹವರ ವಿರುದ್ಧ ಅರಣ್ಯ ಕಾಯ್ದೆಯಡಿ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳಲು ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಸೂಚಿಸಿದ್ದೇವೆ. ಇನ್ನು 15 ದಿನದೊಳಗಾಗಿ ನಗರ ಮತ್ತು ಇತರೆಡೆ ಅನಧಿಕೃತವಾಗಿ ಸಾರ್ವಜನಿಕ ಪಾದಚಾರಿ ಮಾರ್ಗ, ಸರ್ಕಲ್ ಮತ್ತು ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಿರುವ ಅನಧೀಕೃತ ಫ್ಲೆಕ್ಸ್ ಮತ್ತು ಹೋರ್ಡಿಂಗ್ಸ್ ವಿವರ ಮತ್ತು ಅವುಗಳನ್ನು ತೆರವುಗೊಳಿಸಿರುವ ಛಾಯಾಚಿತ್ರಗಳೊಂದಿಗೆ ವರದಿ ನೀಡಬೇಕು ಎಂದು ಅವರು ಅಧಿಕಾರಿಗಳಿಗೆ ತಾಕೀತು ಮಾಡಿದ್ದರು.

ಈಗಾಗಲೇ ಅನಧಿಕೃತವಾಗಿ ಫ್ಲೆಕ್ಸ್, ಹೋರ್ಡಿಂಗ್ಸ್ ಅಳವಡಿಸಿರುವವರ ವಿರುದ್ಧ ಕಾನೂನು ಪ್ರಕಾರ ಸೂಕ್ತ ಕ್ರಮ ವಹಿಸಬೇಕು. ಅಂತಹವರಿಗೆ ಆರ್ಥಿಕ ನಷ್ಟಕ್ಕೆ ಸಂಬಂಧಿಸಿದಂತೆ ದಂಡ ವಿಧಿಸಿ, ಅಷ್ಟೂ ಹಣ ವಸೂಲಿ ಮಾಡಬೇಕು. ಅನಧಿಕೃತ ವ್ಯಕ್ತಿಗಳಿಗೆ ಅನುಮತಿ ಮತ್ತು ಸಹಕರಿಸಿದ ಸರ್ಕಾರಿ ಅಧಿಕಾರಿಗಳ ಮೇಲೆಯೂ ಶಿಸ್ತು ಕ್ರಮ ಜರುಗಿಸಲು ಇಲಾಖೆ ವಿಚಾರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಗಂಗಾಧರಸ್ವಾಮಿ ಹೊರಡಿಸಿರುವ ಆದೇಶದಲ್ಲಿ ಸೂಚಿಸಿದ್ದರು.


### ಸಂಘ ಆಕ್ರೋಶ

**(1ನೇ ಪುಟದಿಂದ)** ಆದೇಶಿಸಿದ್ದಾರೆ. ಅನಧಿಕೃತ ತೆರವಿಗೆ ನಮ್ಮ ಆಕ್ಷೇಪವಿಲ್ಲ. ಆದರೆ ಅಧಿಕೃತ ಇದ್ದವನ್ನೂ ತೆಗೆಸಲಾಗಿದೆ ಎಂದರು.

ಸಂಜೆ ನಮ್ಮ ಸಂಘದಿಂದ ಅಳವಡಿಸಿದ್ದ ಹೋರ್ಡಿಂಗ್ಸ್ ಸಾಮಗ್ರಿಗಳನ್ನು ನಮಗೆ ಮರಳಿಸಿದ್ದಾರೆ. ಅನಧಿಕೃತವಾಗಿದ್ದವುಗಳನ್ನು ಪಾಲಿಕೆ ವಶಕ್ಕೆ ತೆಗೆದುಕೊಳ್ಳಲಾಗಿದೆ. ನಗರದ ಸ್ವಚ್ಛತೆ ಹಿತದೃಷ್ಟಿಯಿಂದ ಎಲ್ಲವನ್ನೂ ತೆರವುಗೊಳಿಸುತ್ತಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ನಾವೂ ಸಹಕರಿಸಿದ್ದೇವೆ.

ಈ ಕುರಿತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನೂ ಸಂಪರ್ಕಿಸಿದ್ದೇವೆ. ನಗರಕ್ಕೆ ಬಂದ ಮೇಲೆ ಮಾತನಾಡೋಣ ಎಂದಿದ್ದಾರೆ. ಸಚಿವರು ಏನು ಹೇಳಿದರೂ ಅವರ ಮಾತಿಗೆ ಬದ್ಧರಾಗಿದ್ದೇವೆ ಎಂದು ಶಿವಕುಮಾರ್ ಹೇಳಿದರು.

## ರಾಣೇಬೆನ್ನೂರು: ನಾಳೆ ವೇಮನ ಜಯಂತಿ



ರಾಣೇಬೆನ್ನೂರು, ಜ.17- ನಾಡಿದ್ದು ದಿನಾಂಕ 19ರ ಭಾನುವಾರ ನಗರದ ವೇಮನ ವಿದ್ಯಾವರ್ಧಕ ಸಂಘದ ಕಾರ್ಯಾಲಯದಲ್ಲಿ 613ನೇ ವೇಮನ ಜಯಂತಿ ಹಾಗೂ ವೇಮನ ಇತಿಹಾಸ ಕುರಿತ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ಅಧ್ಯಕ್ಷತೆ ವಹಿಸುವರು ಎಂದು ವೈದ್ಯ ಮನೋಜ ಸಾವುಕಾರ ತಿಳಿಸಿದ್ದಾರೆ.

ಜಿಲ್ಲಾ ರಡ್ಡಿ ಸಂಘದಿಂದ ನಡೆಯುವ ಈ ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ. ಪಾಟೀಲ, ಉಪಸಭಾಪತಿ ರುದ್ರಪ್ಪ ಲಮಾಣಿ, ಶಾಸಕರಾದ ಬಸವರಾಜ ಶಿವಣ್ಣನವರ, ಶ್ರೀ ನಿವಾಸ ಮಾನೆ, ಯು. ಬಿ. ಬಣಕಾರ, ಯಾಸೀರ್ ಅಹ್ಮದ್ ಖಾನ್ ಪಠಾಣ, ಜಿ.ಎಸ್. ಪಾಟೀಲ, ಎನ್.ಎಚ್.ಕೋನರಡ್ಡಿ ಮತ್ತು ಜಿ.ಟಿ ಪಾಟೀಲ ಮತ್ತಿತರರು

## ಮುಡಾ : ಮೌಲ್ಯದ ಆಸ್ತಿ ವಶ

**(1ನೇ ಪುಟದಿಂದ)** ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಸಹ ಅಕ್ರಮ ಹಣದ ಬಗ್ಗೆ ತನಿಖೆ ನಡೆಸುತ್ತಿದೆ.

ರಿಯಲ್ ಎಸ್ಟೇಟ್ ವಲಯದಲ್ಲಿ ಕೆಲಸ ಮಾಡುವವರು ಹಾಗೂ ಏಜೆಂಟರುಗಳಿಗೆ ಸೇರಿದ ಆಸ್ತಿಗಳನ್ನು ವಶಕ್ಕೆ ತೆಗೆದುಕೊಂಡಿರುವದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ.

## ನಗರದಲ್ಲಿ ನಾಳೆ ಉಚಿತ ಕೀಲು ಮೂಳೆ ಸಲಹಾ ತಪಾಸಣಾ ಶಿಬಿರ

ದಾವಣಗೆರೆ, ಜ. 17- ನಗರದ ಪಿ.ಜೆ. ಬಡಾವಣೆಯ ಈಶ್ವರ ಆರ್ಥೋಪೆಡಿಕ್ ಮತ್ತು ಟ್ರಾಮಾ ಸೆಂಟರ್‌ನಲ್ಲಿ ನಾಡಿದ್ದು ದಿನಾಂಕ 19ರ ಭಾನುವಾರ ಬೆಳಿಗ್ಗೆ 9.15 ರಿಂದ ಮಧ್ಯಾಹ್ನ 3.30ರವರೆಗೆ ಉಚಿತ ಕೀಲು ಮೂಳೆ ಸಲಹಾ ತಪಾಸಣಾ ಶಿಬಿರ, ಮೂಳೆ ಸಾಂದ್ರತಾ ಪರೀಕ್ಷೆ ಶಿಬಿರವು ನಡೆಯಲಿದೆ. ಡಾ. ಎಂ.ಎಂ. ದೀಪಕ್ ಕುಮಾರ್ ಸಮಾಲೋಚನೆಗೆ ಲಭ್ಯವಿರುತ್ತಾರೆ. ವಿವರಕ್ಕೆ 94813 76363ಗೆ ಸಂಪರ್ಕಿಸಬಹುದಾಗಿದೆ.

# ವಿಶ್ವದಲ್ಲಿ ಲಕ್ಷಾಂತರ ಜಾತಿ ಹೊಂದಿರುವ ಏಕೈಕ ದೇಶ ಭಾರತ



ಹೊನ್ನಾಳಿ, ಜ. 17- ವಿಶ್ವದಲ್ಲಿ ಲಕ್ಷಾಂತರ ಜಾತಿಗಳನ್ನು ಹೊಂದಿರುವ ಏಕೈಕ ದೇಶವೆಂದರೆ ಅದು ಭಾರತ ಮಾತ್ರ. ಇಂತಹ ದೇಶದಲ್ಲಿ ಜನಿಸಿದ ನಾವುಗಳೆಲ್ಲಾ ಧನ್ಯರು ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ತಾಲ್ಲೂಕು ಕ್ರೈಸ್ತ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪಟ್ಟಣದ ಹೊರ ವಲಯದಲ್ಲಿರುವ ವಾಲ್ಮೀಕಿ ಸಮುದಾಯ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಒಂದು ದಿನದ ಭಕ್ತಿ ಸಂಜೀವಿನಿ ಕೂಟ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಭಾರತ ದೇಶ ಪರ್ವತ ಶ್ರೇಣಿ, ಸಾಗರಗಳಿಂದ ಸುತ್ತುವರಿದು ಅತ್ಯಂತ ಸುರಕ್ಷತೆಯಲ್ಲಿ ಇದೆ. ಇದರಿಂದ ನೈಸರ್ಗಿಕ ಹಾಗೂ ಪ್ರಕೃತಿ ಸಹಾಯವೂ ನಮ್ಮ ದೇಶದ ಮೇಲಿದೆ ಎಂದರು.

ಜಾತ್ಯತೀತ ರಾಷ್ಟ್ರವಾಗಿದ್ದ ಭಾರತ ಇತ್ತೀಚಿನ ದಿನಗಳಲ್ಲಿ ಜಾತಿ ದೇಶವಾಗಿ ಮಾರ್ಪಾಡಾಗುತ್ತಿದೆ. ಇದಕ್ಕೆ ಸಂಕುಚಿತ ಮನೋಭಾವನೆ ಕಾರಣವಾಗಿದೆ ಎಂದ ಅವರು, ದೇಶದ ಎಲ್ಲಾ ಪ್ರಜೆಗಳು ವಿಶಾಲ ಮನೋಭಾನವೆಯನ್ನು ಬೆಳೆಸಿಕೊಂಡು ದೇಶದ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಹೇಳಿದರು.

ತಾಲ್ಲೂಕಿನ ಕ್ರೈಸ್ತ ಬಾಂಧವರು ನನ್ನ ಮುಂದೆ ಅನೇಕ ಬೇಡಿಕೆಗಳನ್ನು ಇಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಈಡೇರಿಸಲು ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

**ಶಾಸಕ ಡಿ.ಜಿ. ಶಾಂತನಗೌಡ**

ಕ್ರೈಸ್ತ ಸಂಘಟನೆಯ ಜಿಲ್ಲಾ ಪರಿಷತ್ ಅಧ್ಯಕ್ಷ ಪ್ರೇಮ್‌ಕುಮಾರ್ ಮಾತನಾಡಿ, ಹೊನ್ನಾಳಿ ತಾಲ್ಲೂಕು ಕೇಂದ್ರದಲ್ಲಿ ಕ್ರೈಸ್ತ ಸಮಾಜಕ್ಕೆ ಒಂದು ಸಮುದಾಯಭವನ ನಿರ್ಮಿಸಿಕೊಡಬೇಕು ಎಂದು ಶಾಸಕರಿಗೆ ಮನವಿ ಮಾಡಿದರು.

ಮುಖ್ಯ ಸಂದೇಶಕಾರ ಪ್ರವಾದಿ ಡೇನಿಯಲ್ ಡೇವಿಡ್, ಪಾಸ್ಟರ್‌ಗಳಾದ ಮಾಲತೇಶ್, ಸುಂದರ್‌ರಾವ್, ಪ್ರಕಾಶ್ ಹಲ್ಮಡಿ ಇತರರು ಇದ್ದರು.

## ಬಿಪಿಎಲ್ ಸದಸ್ಯರಿಗೆ 'ಆರೋಗ್ಯ'

**(1ನೇ ಪುಟದಿಂದ)** ನಡೆಸಬೇಕು, ದೇಶದ ಅತ್ಯುತ್ತಮ ಆರೋಗ್ಯ ಸೇವೆ ಬಡವರಿಗೂ ಸುಲಭವಾಗಿ ಸಿಗುವಂತೆ ಮಾಡಬೇಕು ಎಂದು ಕರೆ ನೀಡಿದರು. ವೈದ್ಯಕೀಯ ಡಿಪ್ಲೊಮಾ ಮತ್ತು ಇತರೆ ಕೋರ್ಸ್‌ಗಳ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಲಾಗುತ್ತಿದೆ, ವೈದ್ಯ ವಿಜ್ಞಾನ ಪದವೀಧರರೂ ಯುವನಿಧಿಗೆ ಅರ್ಹತೆ ಗಳಿಸಿದ್ದಾರೆ.

ವೈದ್ಯ ವಿದ್ಯಾರ್ಥಿಗಳು ಇತರೆ ಕ್ಷೇತ್ರಗಳಿಗೆ ವಲಸೆ ಹೋಗದೆ ಆರೋಗ್ಯ ಕ್ಷೇತ್ರದಲ್ಲೇ ತಮ್ಮ ಸೇವೆ ಸಲ್ಲಿಸಬೇಕು ಎಂದು ಕರೆ ನೀಡಿದರು.

## ಮಂಗಳೂರು ಬ್ಯಾಂಕ್‌ನಲ್ಲಿ 10 ಕೋಟಿ ರೂ. ಲೂಟಿ

**(1ನೇ ಪುಟದಿಂದ)** ಮಾತನಾಡುತ್ತಿದ್ದರು. ಅವರು ಸಿಬ್ಬಂದಿಗೆ ಬೆದರಿಕೆ ಹಾಕಿ ಬಂಗಾರ ಹಾಗೂ ಇತರೆ ಅಮೂಲ್ಯ ವಸ್ತುಗಳಿದ್ದ ತಿಜೋರಿಯನ್ನು ತೆರೆಸಿದ್ದಾರೆ ಎಂದು ಉಲ್ಲಾಳ ಕೋಟೆಕಾರ್ ಮಂಗಳೂರು ಪೊಲೀಸರು ತಿಳಿಸಿದ್ದಾರೆ. ಘಟನೆ ನಡೆದಾಗ ಬ್ಯಾಂಕಿನಲ್ಲಿ ನಾಲ್ಕರಿಂದ ಐದು ಜನ ಸಿಬ್ಬಂದಿ ಇದ್ದರು. ಆದರೆ ಯಾವುದೇ ಭದ್ರತಾ ಸಿಬ್ಬಂದಿ ಇರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಹತ್ತರಿಂದ ಹನ್ನೆರಡು ಕೋಟಿ ರೂ. ಮೌಲ್ಯದ ವಸ್ತುಗಳನ್ನು ಲೂಟಿ ಮಾಡಲಾಗಿದೆ ಎಂಬುದು ಪ್ರಾಥಮಿಕ ಅಂದಾಜಿನಿಂದ ತಿಳಿದು ಬಂದಿದೆ. ವಿವರವಾದ ಪರಿಶೀಲನೆ ಇನ್ನೂ ನಡೆಯಬೇಕಿದೆ ಎಂದು ಪೊಲೀಸರು ಹೇಳಿದ್ದಾರೆ. ದುಷ್ಕರ್ಮಿಗಳ ಪತ್ತೆಗಾಗಿ ಪೊಲೀಸರು ಹಲವು ತಂಡಗಳನ್ನು ರಚಿಸಿದ್ದಾರೆ.

ಘಟನೆ ನಡೆದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳೂರಿನಲ್ಲಿ ಇದ್ದರು. ಅವರಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದೆ.

ಘಟನೆಯ ಬಗ್ಗೆ ಉನ್ನತ ಪೊಲೀಸ್ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಸಭೆ ನಡೆಸಿದ್ದಾರೆ.

ಈ ಸಂದರ್ಭದಲ್ಲಿ ವಿಧಾನಸಭಾಧ್ಯಕ್ಷ ಹಾಗೂ ಸ್ಥಳೀಯ ಶಾಸಕ ಯು.ಟಿ. ಖಾದರ್ ಅವರೂ ಸಹ ಉಪಸ್ಥಿತರಿದ್ದರು.

ದುಷ್ಕರ್ಮಿಗಳ ವಿರುದ್ಧ ತಕ್ಷಣವೇ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಂಕಿತರು ಸ್ಥಳದಿಂದ ತಪ್ಪಿಸಿಕೊಂಡ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಟೋಲ್ ಸಿಬ್ಬಂದಿ ಲೋಪ ಎಸಗಿರುವ ಬಗ್ಗೆಯೂ ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ ಹಾಗೂ ಎಲ್ಲಾ ಮಾರ್ಗಗಳಲ್ಲಿ ಪರಿಶೀಲನೆ ಬಿಗಿ ಮಾಡುವಂತೆ ಸೂಚನೆ ನೀಡಿದ್ದಾರೆ.

ಕೇರಳದ ಗಡಿಯುದ್ದಕ್ಕೂ ಸಿಸಿ ಟಿವಿಗಳ ಮೇಲೆ ಪೊಲೀಸರು ನಿಗಾ ವಹಿಸಿದ್ದಾರೆ.

ಉಡುಪಿ, ಉತ್ತರ ಕನ್ನಡ, ಹಾಸನ ಹಾಗೂ ಶಿವಮೊಗ್ಗ ಪೊಲೀಸರಿಗೆ ಕಟ್ಟೆಚ್ಚರ ವಹಿಸಲು ತಿಳಿಸಲಾಗಿದೆ. ಕೇರಳ, ಗೋವಾ ಹಾಗೂ ಬೆಂಗಳೂರು ಕಡೆ ತೆರಳುವ ಪ್ರಮುಖ ರಸ್ತೆಗಳ ಮೇಲೆ ನಿಗಾ ವಹಿಸಲಾಗಿದೆ.

## ನಗರದಲ್ಲಿ ಇಂದು ಬಿಸಿಯೂಟ ತಯಾರಕರಿಂದ ಪ್ರತಿಭಟನೆ

ಬರುವ ಬಜೆಟ್‌ನಲ್ಲಿ ಬಿಸಿಯೂಟ ತಯಾರಕರಿಗೆ ವೇತನ ಹೆಚ್ಚಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿ ಇಂದು ಎಸಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಗುವುದು ಎಂದು ಬಿಸಿಯೂಟ ತಯಾರಕರ ಫೆಡರೇಶನ್ ಜಿಲ್ಲಾಧ್ಯಕ್ಷ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

ದಾವಣಗೆರೆ ತಾಲ್ಲೂಕಿನ ಎಲ್ಲಾ ಬಿಸಿಯೂಟ ತಯಾರಕರು ಇಂದು ಮಧ್ಯಾಹ್ನ 1.30 ಗಂಟೆಗೆ ದಾವಣಗೆರೆ ರೈಲ್ವೆ ನಿಲ್ದಾಣದ ಪಕ್ಕದಲ್ಲಿರುವ ಎಸಿ ಕಚೇರಿ ಬಳಿ ಆಗಮಿಸಿ, ಬರುವ ಬಜೆಟ್‌ನಲ್ಲಿ ಬಿಸಿಯೂಟ ತಯಾರಕರಿಗೆ ವೇತನ ಹೆಚ್ಚಿಸುವಂತೆ ಪ್ರತಿಭಟನೆ ನಡೆಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮತ್ತು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ದಾವಣಗೆರೆ ಎಸಿಯವರ ಮೂಲಕ ಮನವಿ ಸಲ್ಲಿಸಲಾಗುವುದು.

ದಾವಣಗೆರೆ ತಾಲ್ಲೂಕಿನ ಎಲ್ಲಾ ಬಿಸಿಯೂಟ ತಯಾರಕರು ಶಾಲೆಯಲ್ಲಿ ಅಡುಗೆ ಮಾಡಿಟ್ಟು ದಾವಣಗೆರೆ ಎಸಿ ಕಚೇರಿ ಹತ್ತಿರ ಬರಬೇಕೆಂದು ಬಿಸಿಯೂಟ ತಯಾರಕರ ಫೆಡರೇಶನ್ ತಾಲ್ಲೂಕು ಅಧ್ಯಕ್ಷರಾದ ಮಳಲ್ಕೆರೆ ಜಯಮ್ಮ, ಕಾರ್ಯದರ್ಶಿ ಜ್ಯೋತಿಲಕ್ಷ್ಮಿ, ಖಜಾಂಚಿ ಪದ್ಮಾ, ಉಪಾಧ್ಯಕ್ಷರಾದ ಅಣಜಿ ನಾಗರತ್ನಮ್ಮ ಮತ್ತಿತರರು ತಿಳಿಸಿದ್ದಾರೆ.

# ನಾಳೆ ಅಲೆಮಾರಿ, ಅರೆ ಅಲೆಮಾರಿ ಜನಾಂಗದ ಸಾಂಸ್ಕೃತಿಕ ಕಲೋತ್ಸವ

ದಾವಣಗೆರೆ, ಜ.17- ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಒಕ್ಕೂಟ ಬೆಂಗಳೂರು ಇವರ ವತಿಯಿಂದ ನಾಡಿದ್ದು ದಿನಾಂಕ 19 ರ ಭಾನುವಾರ ಬೆಳಿಗ್ಗೆ 9 ಕ್ಕೆ ನಗರದ ಕುವೆಂಪು ಕನ್ನಡ ಭವನದಲ್ಲಿ ಜನಾಂಗದ ರಾಜ್ಯಮಟ್ಟದ ಸಾಹಿತ್ಯ, ಸಾಂಸ್ಕೃತಿಕ ಕಲೋತ್ಸವ, ಪ್ರತಿಭಾ ಪುರಸ್ಕಾರ, ಸಂತ ಸಂದೇಶ, ವಿಚಾರಗೋಷ್ಠಿ ಮತ್ತು ಸಾಧಕರ ಸನ್ಮಾನ ಸಮಾರಂಭ ಜರುಗಲಿದೆ ಎಂದು ಸಂಘದ ಗೌರವಾಧ್ಯಕ್ಷ ಕೆ. ರವೀಂದ್ರ ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶೇ. 85 ಕ್ಕಿಂತ ಹೆಚ್ಚು ಅಂಕ ಗಳಿಸಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ಪ್ರತಿ ಜಿಲ್ಲೆಯ ತಲಾ ಮೂರು ವಿದ್ಯಾರ್ಥಿಗಳಿಗೆ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಂತ ಸಂದೇಶ, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ಬದುಕು ಮತ್ತು ಭವಿಷ್ಯದ ಚಿಂತನೆಗಳು ಎಂಬ ವಿಚಾರಗೋಷ್ಠಿ, ಸಾಧಕರಿಗೆ 'ಸಾಧಕ ರತ್ನ' ಪ್ರಶಸ್ತಿ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಸಚಿವ ಶಿವರಾಜ್ ತಂಗಡಗಿ, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ ಎಂದು ಹೇಳಿದರು.

ಶಾಸಕ ಬಿ.ಪಿ. ಹರೀಶ್ ಒಕ್ಕೂಟದ ಕ್ಯಾಲೆಂಡರ್ ಬಿಡುಗಡೆ ಮಾಡುವರು. ಒಕ್ಕೂಟದ ರಾಜ್ಯಾಧ್ಯಕ್ಷ ಎಂ. ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಉಪಾಧ್ಯಕ್ಷ ಬಿ.ಕೆ. ನಾರಾಯಣಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆಂದರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ, ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಜಿ.ಪಂ. ಮಾಜಿ ಅಧ್ಯಕ್ಷ ಸಿ. ಮಹಾಲಿಂಗಪ್ಪ, ಕೊಪ್ಪಳ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ತುಕಾರಾಮ್ ಸುರ್ವೆ ಭಾಗವಹಿಸಲಿದ್ದಾರೆ.

ದಾವಣಗೆರೆ ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ, ಬೆಂಗಳೂರು ನೆಲಮಂಗಲದ ಶ್ರೀ ವನಕಲ್ಲು ಮಲ್ಲೇಶ್ವರ ಮಹಾಸಂಸ್ಥಾನದ ಶ್ರೀ ಬಸವ ರಾಮಾನಂದ ಸ್ವಾಮೀಜಿ, ಬೆಂಗಳೂರು ಆಂಧ್ರಹಳ್ಳಿ ಶ್ರೀ ರಂಗಸ್ವಾಮಿ ಆಶ್ರಮ ದೊಂಬಿದಾಸರ ಸಮುದಾಯದ ಶ್ರೀ ಕರುಣಾಕರ ಸ್ವಾಮಿ, ಹಂಡಿಬಡಂಗನಾಥ ಮಠದ ಶ್ರೀ ಸಾಗರನಾಥಜೀ, ಬೀದರ್ ಹುಮನಾಬಾದ್ ದುಮ್ಮನೂರು ಹೆಳವ ಸಮಾಜದ ಮುಕ್ತಿನಾಥ ಜನ ಕಲ್ಯಾಣ ಟ್ರಸ್ಟ್ ಗುರುಪೀಠದ ಶ್ರೀ ಶಂಕರಲಿಂಗ ಸ್ವಾಮೀಜಿ, ಅತಿ ಹಿಂದುಳಿದ ಮಠಾಧೀಶರ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಚಲವಾದಿ ಮಹಾಸಂಸ್ಥಾನದ ಶ್ರೀ ಬಸವ ನಾಗೀದೇವ ಸ್ವಾಮೀಜಿ ಸಂತ ಸಂದೇಶ ನೀಡಲಿ ಎಂದರು.

ಬೆಳಿಗ್ಗೆ 11.30 ಕ್ಕೆ ಶಿವಮೊಗ್ಗ ಕುವೆಂಪು ವಿವಿ ಉಪನ್ಯಾಸಕ, ಎನ್.ಎಸ್.ಎಸ್ ವಿಭಾಗದ ಸಂಯೋಜನಾಧಿಕಾರಿ ಡಾ. ಶುಭಾ ಮರವಂತೆ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಲೆಮಾರಿ, ಅರೆ ಅಲೆಮಾರಿ ಸಮುದಾಯದ ಬದುಕು ಮತ್ತು ಭವಿಷ್ಯದ ಚಿಂತನೆಗಳು ವಿಷಯ ಕುರಿತು ವಿಚಾರ ಗೋಷ್ಠಿ ನಡೆಯಲಿದೆ. ನಿವೃತ್ತ ಆಯ್ಕೆ ಶ್ರೇಣಿ ಗ್ರಂಥಪಾಲಕರೂ, ಕುವೆಂಪು ವಿವಿ ಸಮಾಜಶಾಸ್ತ್ರ ಅಧ್ಯಯನದ ಉಪನ್ಯಾಸಕ ಡಾ. ವಿಮೋಚನಾ ಅಲೆಮಾರಿ ಜನರ ಭವಿಷಯದ ಚಿಂತನೆಗಳು ಕುರಿತು ವಿಷಯ ಮಂಡನೆ ಮಾಡಲಿದ್ದಾರೆ.


ನಂತರ ಮನೋರಂಜನಾ ಕಾರ್ಯಕ್ರಮ, ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ನಡೆಯಲಿದೆ. ಸಂಜೆ 5 ಗಂಟೆಗೆ ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ರಾಜ್ಯ ಒಕ್ಕೂಟದ ದಾವಣಗೆರೆ ಜಿಲ್ಲಾ ಸಮಿತಿಯ ಗೌರವಾಧ್ಯಕ್ಷ ತಿಪ್ಪೇಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ.

ಶಾಸಕರಾದ ಕೆ.ಎಸ್. ಬಸವಂತಪ್ಪ, ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಅಖಿಲ ಕರ್ನಾಟಕ ಶಿಕ್ಕಲಿಗರ ಸಮಾಜ ಕೇಂದ್ರ ಸಮಿತಿ ರಾಜ್ಯಾಧ್ಯಕ್ಷ ದಶರಥ ವಾಲಿ, ಕರ್ನಾಟಕ ರಾಜ್ಯ ಬೈಲ್ ಪತ್ತಾರ್ ಸಂಘದ ರಾಜ್ಯಾಧ್ಯಕ್ಷ ರಾಜೇಂದ್ರ ಲಕ್ಷಣ ಪತ್ತಾರ್, ಗೊಂದಲಿ ಸಮಾಜದ ಮುಖಂಡರೂ, ಗೊಂದಲಿ ಐಕ್ಯತಾ ವೇದಿಕೆಯ ಸಂಸ್ಥಾಪಕ ಜಿ. ವೀರೇಶ್ ರಾವ್ ಪಾಚಂಗೆ, ಕರ್ನಾಟಕ ದೊಂಬಿದಾಸರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಕುಮಾರ್ ವೈ. ಮೈಸೂರು, ಗೋಸಾಯಿ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಎ. ರಾಮು ಗೋಸಾಯಿ, ಕರ್ನಾಟಕ ನಾಥಪಂಥಿ ಮಹಾಸಭಾದ ರಾಜ್ಯಾಧ್ಯಕ್ಷ ನಾರಾಯಣ ರಾವಳ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆಂದು ತಿಳಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದ ನಂತರ ಕಲೋತ್ಸವ ಮುಕ್ತಾಯಗೊಳ್ಳಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಎಂ.ಪ್ರಕಾಶ್, ತಿಪ್ಪೇಸ್ವಾಮಿ, ಡಿ. ಏಕಾಂತಪ್ಪ, ಚೌಡೋಜಿರಾವ್ ಲಾಗವೆ, ವೀರೇಶ್ ಪಾಚಂಗಿ ಉಪಸ್ಥಿತರಿದ್ದರು.

## ಕುಂಭ ಮೇಳದಲ್ಲಿ 45 ಕೋಟಿ ಜನ ಭಾಗಿ ನಿರೀಕ್ಷೆ



**(1ನೇ ಪುಟದಿಂದ)** ಉದ್ದೇಶಕ್ಕಾಗಿ ಈ ನಿಗಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ವಾಹನ ನಿಲುಗಡೆ ಸ್ಥಳದ ಮೇಲೂ ವಿಶೇಷ ನಿಗಾ ವಹಿಸಲಾಗಿದೆ. ಒಂದು ವಾಹನ ನಿಲುಗಡೆ ತಾಣ ಭರ್ತಿಯಾದ ನಂತರ ಮುಂದಿನ ಲಭ್ಯವಿರುವ ತಾಣಕ್ಕೆ ವಾಹನಗಳನ್ನು ಕಳಿಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿ ಕುಮಾರ್ ಹೇಳಿದ್ದಾರೆ.

ಕೃತಕ ಬುದ್ಧಿವಂತಿಕೆ ಕ್ಯಾಮೆರಾಗಳು ಈ ವಿಷಯದಲ್ಲಿ ಹೆಚ್ಚು ನೆರವಾಗಿವೆ. ಆದರೆ ನಾವು ಸಂಪೂರ್ಣವಾಗಿ ಕ್ಯಾಮೆರಾಗಳನ್ನೇ ಅವಲಂಬಿಸಿಲ್ಲ ಎಂದವರು ತಿಳಿಸಿದ್ದಾರೆ.

**ಸವಿನೆನಪು**



**ದಿ|| ಬಸಾಪತಿ ಸೌಭಾಗ್ಯಮ್ಮ**

*ನಿಧನ : 18.01.2024*

*ನೀವು ನಮ್ಮನ್ನಗಲಿ ಒಂದು ವರ್ಷವಾಯಿತು... ಸದಾ ನಿಮ್ಮ ನೆನಪಿನಲ್ಲಿ ಇರುವ*

ಪತಿ : **ಬಸಾಪತಿ ತಿಪ್ಪೇಸ್ವಾಮಿ**

**ಮಗಳು, ಅಳಿಯ, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು**

# ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್‌ಗೆ 14 ವರ್ಷ ಜೈಲು ಶಿಕ್ಷೆ

**(1ನೇ ಪುಟದಿಂದ)** ಖಾನ್ ಹಾಗೂ ಬೀಬಿ ಸ್ಥಾಪಿಸಿದ್ದ ಅಲ್ ಕಾದಿರ್ ವಿಶ್ವವಿದ್ಯಾಲಯದ ಜಮೀನು ವಶಪಡಿಸಿಕೊಳ್ಳಲು ನ್ಯಾಯಾಲಯ ಆದೇಶಿಸಿದೆ. ಖಾನ್ ಈಗಾಗಲೇ ಜೈಲಿನಲ್ಲಿದ್ದಾರೆ ಹಾಗೂ ನ್ಯಾಯಾಲಯದಲ್ಲಿದ್ದ ಬೀಬಿ ಅವರನ್ನು ಬಂಧಿಸಲಾಗಿದೆ.

ಈ ಶಿಕ್ಷೆಯ ಬಗ್ಗೆ ಪ್ರತಿಕ್ರಿಯೆ ನೀಡಿರುವ ಖಾನ್, ಇಂದಿನ ತೀರ್ಪು ನ್ಯಾಯಾಲಯದ ಪ್ರತಿಷ್ಠೆಗೆ ಮಸಿ ತಂದಿದೆ. ಇದರಿಂದ ನನಗೆ ಯಾವುದೇ ಲಾಭವಿಲ್ಲ ಹಾಗೂ ಸರ್ಕಾರಕ್ಕೆ ಯಾವುದೇ ನಷ್ಟವಿಲ್ಲ. ನಾನು ಯಾವುದೇ ಪರಿಹಾರ ಬಯಸುವುದಿಲ್ಲ ಹಾಗೂ ಎಲ್ಲಾ ಪ್ರಕರಣಗಳನ್ನು ಎದುರಿಸುತ್ತೇನೆ. ಸರ್ವಾಧಿಕಾರಿ ಒಬ್ಬರು ಇದೆಲ್ಲ ಮಾಡುತ್ತಿದ್ದಾರೆ ಎಂದಿದ್ದಾರೆ.

ಈ ಪ್ರಕರಣದಲ್ಲಿ ಸರ್ಕಾರಕ್ಕೆ 190 ದಶಲಕ್ಷ ಪೌಂಡ್ ನಷ್ಟವಾಗಿದೆ ಎಂದು ಭ್ರಷ್ಟಾಚಾರ ನಿಗ್ರಹ ದಳ 2023ರ ಡಿಸೆಂಬರ್ ತಿಂಗಳಲ್ಲಿ ಪ್ರಕರಣ ದಾಖಲಿಸಿತ್ತು.

ಖಾನ್ ಹಾಗೂ ಬೀಬಿ ಅವರಲ್ಲದೆ ಇತರ ಆರು ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ಆದರೆ ಖಾನ್ ಮತ್ತು ಬೀಬಿ ವಿರುದ್ಧ ಮಾತ್ರ ದೋಷಾರೋಪ ಮಾಡಲಾಗಿದೆ. ಉಳಿದ ಎಲ್ಲಾ ಆರೋಪಿಗಳು ದೇಶದಿಂದ ಹೊರಗಿದ್ದಾರೆ.

ಉದ್ಯಮಿಯೊಬ್ಬರ ಜೊತೆಗಿನ ಪ್ರಕರಣದ ಇತ್ಯರ್ಥದ ಭಾಗವಾಗಿ ಬ್ರಿಟನ್‌ನ ನ್ಯಾಷನಲ್ ಕ್ರೈಂ ಏಜೆನ್ಸಿಯು 190 ದಶಲಕ್ಷ ಪೌಂಡ್ ಹಣವನ್ನು ಪಾಕಿಸ್ತಾನಕ್ಕೆ ಮರಳಿಸಿತ್ತು.

ಆದರೆ ಸರ್ಕಾರಿ ಬೊಕ್ಕಸಕ್ಕೆ ಸೇರಬೇಕಾಗಿದ್ದ ಈ ಹಣವನ್ನು ಬಳಸಿಕೊಂಡು ಖಾನ್ ಹಾಗೂ ಬೀಬಿ ಅವರು ಅಲ್ ಕಾದಿರ್ ಟ್ರಸ್ಟ್ ಮೂಲಕ ವಿಶ್ವವಿದ್ಯಾಲಯ ಸ್ಥಾಪಿಸಿದ್ದಾರೆ ಎಂದು ಆರೋಪಿಸಲಾಗಿತ್ತು.

# ಚಿತ್ರದುರ್ಗದಲ್ಲಿ ಇಂದು-ನಾಳೆ 13 ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ

ದಾವಣಗೆರೆ, ಜ. 17- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ಇವರ ವತಿಯಿಂದ ನಾಡಿದ್ದು ದಿನಾಂಕ 18 ಮತ್ತು 19 ರಂದು ಎರಡು ದಿನಗಳ ಕಾಲ ಐತಿಹಾಸಿಕ ಚಿತ್ರದುರ್ಗ ನಗರದಲ್ಲಿ 13 ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್ ಜಿಲ್ಲಾ ಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

1986 ರಲ್ಲಿ ಸ್ಥಾಪಿತವಾದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಿರಂತರ ಜನಪರ ವಿಚಾರಗಳನ್ನು ಇಟ್ಟುಕೊಂಡು ಅರಿವು ಮೂಡಿಸುವ ಕೆಲಸವನ್ನು ಸಮಾಜದಲ್ಲಿ ಮಾಡುತ್ತಾ ಬಂದಿದೆ ಎಂದರು.

ಸುಮಾರು 12 ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನಗಳನ್ನು ನಡೆಸುತ್ತಾ ಬಂದಿದ್ದು, ಪ್ರಸ್ತುತ 13 ನೇ ಸಮ್ಮೇಳನವನ್ನು ಚಿತ್ರದುರ್ಗದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಸಮ್ಮೇಳನದ ಮೊದಲ ದಿನವಾದ ನಾಳೆ ದಿನಾಂಕ 18 ರಂದು ಬೆಳಿಗ್ಗೆ 8.30 ಕ್ಕೆ ಧ್ವಜಾರೋಹಣ ನೆರವೇರಿಸಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ನಾಡಿನ ವಿವಿಧ ಮಠಾಧೀಶರು, ಮುರುಘಾ ಮಠದ ಅಧ್ಯಕ್ಷ ಶಿವಯೋಗಿ ಕಳಸದ ಅವರು ಧ್ವಜಾರೋಹಣ ನೆರವೇರಿಸುವರು. ಪರಿಷತ್ ಧ್ವಜಾರೋಹಣವನ್ನು ಡಾ. ಸಿ. ಸೋಮಶೇಖರ್ ನೆರವೇರಿಸುವರು ಎಂದರು.

ನಾಳೆ (18) ಬೆಳಿಗ್ಗೆ 9.45 ಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಹೆದ್ದಾರಿ-50 ರಿಂದ ಆರಂಭಗೊಂಡು ವೇದಿಕೆ ಬಳಿ ಅಂತ್ಯಗೊಳ್ಳಲಿದೆ. ಜಿಲ್ಲಾಧಿಕಾರಿ ಟಿ. ವೆಂಕಟೇಶ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಸಮ್ಮೇಳನಾಧ್ಯಕ್ಷರಾದ ಡಾ. ಸಿದ್ಧರಾಮ ಬೇಲ್ದಾಳ ಶರಣರು, ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಪುರಿ ಸ್ವಾಮೀಜಿ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ತೋಂಟದ ಸಿದ್ಧರಾಮ ಸ್ವಾಮೀಜಿ, ಶ್ರೀ ಇಮ್ಮಡಿ ಸಿದ್ಧರಾಮ ಸ್ವಾಮೀಜಿ, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಶ್ರೀ ಶಿವಲಿಂಗಾನಂದ ಸ್ವಾಮೀಜಿ, ಡಾ. ಬಸವಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ಧರಾಮಯ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆಂದರು.

ಸಮ್ಮೇಳನಾಧ್ಯಕ್ಷರಾದ ಡಾ. ಸಿದ್ಧರಾಮ ಬೇಲ್ದಾಳ ಶರಣರು ಉಪಸ್ಥಿತರಿರುವರು. ನಿಕಟ ಪೂರ್ವ ಅಧ್ಯಕ್ಷ ಡಾ.ಎಸ್.ಆರ್. ಗುಂಜಾಳ ಮಾತನಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಚಿವರಾದ ಎಂ.ಬಿ. ಪಾಟೀಲ್, ಡಿ. ಸುಧಾಕರ್, ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಗೋವಿಂದ ಕಾರಜೋಳ, ಬಿ.ವೈ. ರಾಘವೇಂದ್ರ, ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಶಾಸಕ ಎನ್. ವೈ.ಗೋಪಾಲಕೃಷ್ಣಪಾಲ್ಗೊಳ್ಳಲಿದ್ದಾರೆಂದು ಮಾಹಿತಿ ನೀಡಿದರು.

ಎರಡು ದಿನಗಳ ಕಾಲ ಡಾ. ಸಿದ್ಧರಾಮ ಬೇಲ್ದಾಳ ಶರಣರ ಅಧ್ಯಕ್ಷತೆಯಲ್ಲಿ ನಡೆಯುವ ಸಮ್ಮೇಳನದಲ್ಲಿ ನಾಡಿನ ಸಾಹಿತಿಗಳು, ಚಿಂತಕರು, ಹೋರಾಟಗಾರರು ಚಿಂತನಾಗೋಷ್ಠಿಗಳಲ್ಲಿ ಭಾಗವಹಿಸಿ ವಿಚಾರಗಳನ್ನು ಮಂಡಿಸಲಿದ್ದಾರೆ ಎಂದರು.

ನಾಡಿದ್ದು ದಿನಾಂಕ 19 ರಂದು ಸಂಜೆ 6 ಗಂಟೆಗೆ ನಡೆಯುವ ಸಮಾರೋಪ ಸಮಾರಂಬದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಗುರು ಮಹಾಂತ ಸ್ವಾಮೀಜಿ, ಶ್ರೀ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವ ವಿ. ಸೋಮಣ್ಣ, ಸಂಸದ ಬಸವರಾಜ್ ಬೊಮ್ಮಾಯಿ, ಡಾ. ಎಂ.ಪ್ರಭಾಕರ್ ಕೋರೆ ಮತ್ತಿರರು ಭಾಗವಹಿಸಲಿದ್ದಾರೆ. ಡಾ. ಶಿವರಾಜ್ ವಿ. ಪಾಟೀಲ್ ಸಮಾರೋಪ ನುಡಿಗಳನ್ನಾಡಲಿದ್ದಾರೆ. ಡಾ. ಸಿದ್ಧರಾಮ ಬೇಲ್ದಾಳ ಶರಣರು ಸಮ್ಮೇಳನಾಧ್ಯಕ್ಷರ ನುಡಿಗಳನ್ನಾಡಲಿದ್ದಾರೆ ಎಂದು ಹೇಳಿದರು. ಸಮ್ಮೇಳನದಲ್ಲಿ ಭಾಗವಹಿಸುವ ಆಸಕ್ತರು ಪರಿಷತ್ ಪ್ರಧಾನ ಕಾರ್ಯ ದರ್ಶಿ ಭರ್ಮಪ್ಪ ಮೈಸೂರು (99003 69585) ಇವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಪರಿಷತ್ತಿನ ಪದಾಧಿಕಾರಿಗಳಾದ ಹೆಚ್.ಕೆ. ಲಿಂಗರಾಜ್, ಮೈಸೂರು ಭರ್ಮಪ್ಪ, ಎನ್.ಎಸ್. ರಾಜು ಉಪಸ್ಥಿತರಿದ್ದರು.

# ಮಲೇಬೆನ್ನೂರು : ಇಂದು ಶಾಲಾ ವಾರ್ಷಿಕ ಸ್ನೇಹಕೂಟ



ಪಟ್ಟಣದ ಶ್ರೀಮತಿ ಬಸಮ್ಮ ಕೆಂಚಪ್ಪ ಮಡಿವಾಳರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು 2024-25ನೇ ಸಾಲಿನ ಶಾಲೆಯ ವಾರ್ಷಿಕ ಸ್ನೇಹಕೂಟ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಲಾ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ತಿಳಿಸಿದ್ದಾರೆ.

ಬೆಳಿಗ್ಗೆ 10.30ಕ್ಕೆ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹೆಚ್.ಜಿ. ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ನಡೆಯುವ ಬಹುಮಾನ ವಿತರಣಾ ಕಾರ್ಯಕ್ರಮವನ್ನು ಸಂಸ್ಥೆಯ ನಿರ್ದೇಶಕ ಹೆಚ್.ಎಸ್. ವೀರಭದ್ರಯ್ಯ ಉದ್ಘಾಟಿಸಲಿದ್ದಾರೆ.

ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶಾಸಕ ಬಿ.ಪಿ. ಹರೀಶ್ ಉದ್ಘಾಟಿಸಲಿದ್ದು, ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ. ವಿಜಯರಾಘವ ಅಧ್ಯಕ್ಷತೆ ವಹಿಸುವರು. ಯುವ ಮುಖಂಡರಾದ ಚಂದ್ರಶೇಖರ್ ಪೂಜಾರ್, ನಂದಿಗಾವಿ ಶ್ರೀನಿವಾಸ್, ಪುರಸಭೆ ಅಧ್ಯಕ್ಷ ಹನುಮಂತಪ್ಪ, ಉಪಾಧ್ಯಕ್ಷ ನಪ್ಸಿಯಾಬಾನು, ಬಿಇಓ ದುರುಗಪ್ಪ,, ಬಿ. ಚಿದಾನಂದಪ್ಪ, ಡಾ. ಬಿ. ಚಂದ್ರಶೇಖರ್, ಜಿಗಳಿ ಇಂದೂಧರ್ ಸೇರಿದಂತೆ ಇನ್ನೂ ಅನೇಕರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

# ನಗರದ ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

ಮಾಮಾಸ್ ಜಾಯಿಂಟ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಶಾಬನೂರು ರಸ್ತೆ, ಎಸ್.ಎಸ್. ಲೇಔಟ್ ಎ. ಬ್ಲಾಕ್, ಕುವೆಂಪು ನಗರ, ಬಾಟ್ಲಿ ಬಿಲ್ಡಿಂಗ್ ಸುತ್ತಮುತ್ತ, ಸಿದ್ದವೀರಪ್ಪ ಬಡಾವಣೆ 1ನೇ ಅಡ್ಡ ರಸ್ತೆಯಿಂದ 7ನೇ ಅಡ್ಡ ರಸ್ತೆವರೆಗೆ, ಗ್ಲಾಸ್‌ಹೌಸ್, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗದ ಪ್ರದೇಶ, ಬಿ.ಐ.ಇ.ಟಿ. ಕಾಲೇಜು ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಮಂಡಿಪೇಟೆ, ಬಿನ್ನಿ ಕಂಪನಿ ರಸ್ತೆ, ಎಮ್.ಜಿ ರಸ್ತೆ, ಎನ್.ಆರ್ ರಸ್ತೆ, ಬೆಳ್ಳೂಡಿಯಲ್ಲಿ, ಮಹಾವೀರ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಮಂಡಕ್ಕಿ ಭಟ್ಟಿ, 1 ರಿಂದ 10 ನೇ ಕ್ರಾಸ್, ಇಂದಿರಾನಗರ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್ ಮಾರ್ಕ್ಸ್ ನಗರ, ಕೋಳಿ ಚನ್ನಪ್ಪ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು. ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ, ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ, ಹಾಗೂ ಇ.ಎಸ್.ಐ ಆಸ್ಪತ್ರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಪಿ.ಬಿ. ರಸ್ತೆ., ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳ ಮಠ, ಜಾಧವ್ ಕ್ಲಿನಿಕ್ ಸುತ್ತ ಮುತ್ತ, ಶಿವಪ್ಪ ವೃತ್ತದಿಂದ ಜಯದೇವ ವೃತ್ತದವರೆಗೆ ಹಾಗೂ ಸುತ್ತಮುತ್ತ ಪ್ರದೇಶಗಳು.

ಪೊಲೀಸ್ ಕ್ವಾಟ್ರಸ್, ತುಂಗ, ಭದ್ರ, ಸರಸ್ವತಿ, ಕೃಷ್ಣ ಬ್ಲಾಕ್, ಅರುಣಾ ಸರ್ಕಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು. ಎಮ್.ಸಿ.ಸಿ. ಎ ಬ್ಲಾಕ್, ನ್ಯಾಯಾಧೀಶರ ವಸತಿ ಗೃಹಗಳು, ತೊಗಟವೀರ ಕಲ್ಯಾಣ ಮಂದಿರ, ವಿನೋಬ ನಗರ 1ನೇ ಮುಖ್ಯ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ಎಸ್.ಎಸ್. ಬಡಾವಣೆ, ಎ ಬ್ಲಾಕ್, ಶಾಂತಿನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮೀ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಪಿ.ಬಿ ರೋಡ್, ರಿಲಯನ್ಸ್ ಮಾರ್ಕೆಟ್, ಸುಲ್ತಾನ್ ಡೈಮಂಡ್ಸ್, ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು ಡೆಂಟಲ್ ಕಾಲೇಜ್ ರಸ್ತೆ, ಮ್ಯಾಕ್ಸ್, ಕೆಎಸ್‌ಪಿ, ಕಡ್ಲಿ ಬಿಲ್ಡಿಂಗ್, ಬಿಎಸ್‌ಸಿ, ಎಆರ್‌ಜಿ ಕಾಲೇಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್, ಕುಂದುವಾಡ ರಸ್ತೆ, ಯಲ್ಲಮ್ಮನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತಮುತ್ತಲ ಪ್ರದೇಶಗಳು.

ಎ.ವಿ.ಕೆ ಕಾಲೇಜ್ ರಸ್ತೆ, ರತ್ನಮ್ಮ ಮಹಿಳಾ ಹಾಸ್ಟೆಲ್, ಸೀತಮ್ಮ ಕಾಲೇಜ್ ಮತ್ತು ಬಡಾವಣೆ ಪೊಲೀಸ್ ಠಾಣೆ, ಹದಡಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಎಂ.ಬಿ. ಕೇರಿ, ಹೊಂಡದ ಸರ್ಕಲ್, ಕಾಯಿಪೇಟೆ, ಜಾಲಿನಗರ, ಟೀಚರ್ಸ್ ಕಾಲೋನಿ, ಶಿವಾಜಿನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇ.ಡಬ್ಲ್ಯೂ.ಎಸ್. ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಶಕ್ತಿನಗರ, ಬನಶಂಕರಿ ದೇವಸ್ಥಾನದ ಸುತ್ತಮುತ್ತ, ರಾಜೇಂದ್ರ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಮೀನು ಮಾರುಕಟ್ಟೆ, ಜೋಗಲ್ ಬಾಬಾ ಲೇಔಟ್, ಮುಸ್ತಾಫಾ ನಗರ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# 79 ರ ಸಂಭ್ರಮದಲ್ಲಿ ಡಾ. ಅಥಣಿ ವೀರಣ್ಣ



ಕರ್ನಾಟಕ ರಾಜ್ಯದ ದೊಡ್ಡ ನಗರಗಳಲ್ಲೊಂದು ದಾವಣಗೆರೆ, ಇದು ರಾಜ್ಯದ ಹೃದಯ ಭಾಗದಲ್ಲಿದ್ದು ಉತ್ತರ ಮತ್ತು ದಕ್ಷಿಣ ಕರ್ನಾಟಕಗಳಿಗೆ ಸೇತುವೆ ಎಂಬಂತಿದೆ, ಎರಡು ಶತಮಾನಗಳ ಹಿಂದೆ ಸಾಮಾನ್ಯ ಊರಾಗಿದ್ದ ಈ ಸ್ಥಳ 20ನೇ ಶತಮಾನದ ಆರಂಭದಿಂದ ಈಚೆಗಿನ ಕೆಲವು ದಶಕಗಳಲ್ಲಿ ಬೃಹದಾಕಾರವಾಗಿ ಬೆಳೆದು, ರಾಜ್ಯದ ಬಹುದೊಡ್ಡ ವ್ಯಾಪಾರ, ಕೈಗಾರಿಕೋದ್ಯಮ ಮತ್ತು ಶಿಕ್ಷಣ ಕೇಂದ್ರಗಳಲ್ಲಿ ಒಂದಾಗಿ ಪ್ರಸಿದ್ಧಿ ಪಡೆದಿದೆ.

ದಾವಣಗೆರೆಯ ಪ್ರಸಿದ್ಧ ಮನೆತನಗಳಲ್ಲಿ ಒಂದಾದ ಅಥಣಿ ಮನೆತನದ ಶ್ರೀಮತಿ, ವೀರಮ್ಮ, ಶ್ರೀಯುತ ಅಥಣಿ ಶಾಂತವೀರಪ್ಪ ದಂಪತಿಯ ಪುತ್ರರಾಗಿ ಜನಿಸಿ, ನಾಡಿನೆಲ್ಲೆಡೆ ಪ್ರಖ್ಯಾತಿ ಗಳಿಸಿರುವ ಡಾ.ಅಥಣಿ ವೀರಣ್ಣನವರು ದಾನಿಗಳಾಗಿ, ಸಮಾಜ ಸೇವಕರಾಗಿ, ನಿಸ್ವಾರ್ಥ ಸೇವೆಯಲ್ಲಿ ತೊಡಗಿರುವ ನಗರದ ಮುಂಚೂಣಿಯಲ್ಲಿರುವ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ, ಅವರ ಹುಟ್ಟುಹಬ್ಬದ ಸುಸಂದರ್ಭದಲ್ಲಿ ಅವರ ಕುರಿತು ಕೆಲವು ವಿಚಾರಗಳನ್ನು ತಿಳಿಸಲಿಚ್ಛಿಸುತ್ತೇನೆ.

**ಹುಟ್ಟುವನು ನೂರ್ವರಲಿ ಒಬ್ಬನೇ ಶೂರ;**
**ಹುಟ್ಟುವನು ಸಾವಿರದಿ ಒಬ್ಬ ಪಂಡಿತನು;**
**ಹತ್ತು ಸಾವಿರದೊಳಗೆ ಒಬ್ಬನೇ ವಾಗ್ಮಿ;**
**ಲಕ್ಷದೊಳ್ ಹುಟ್ಟುವನೋ ಇಲ್ಲವೋ ಒಬ್ಬನೂ ದಾನಿ!**

ಎಂಬ ಅರ್ಥ ಬರುವ ಸಂಸ್ಕೃತ ಶ್ಲೋಕವೊಂದಿದೆ, ದಾನಿಗಳು ಎಷ್ಟು ದುರ್ಲಭ ಎಂದು ಈ ನುಡಿ ತಿಳಿಸುತ್ತದೆ,

ಡಾ. ಅಥಣಿ ವೀರಣ್ಣನವರಿಗೆ 78 ತುಂಬಿ 79ರ ಸಂಭ್ರಮ, ಅವರ ಸಾಧನೆ, ಸಿದ್ಧಿ, ಕನಸು ನನಸಾದ ತೃಪ್ತಿ ತುಂಬಿ ತುಳುಕುತ್ತಿದೆ, ಫಲಪ್ರದ ಬದುಕನ್ನು ನೆನೆದು ನೂರು ವರ್ಷ ಬಾಳಲಿ ಎಂದು ಮನತುಂಬಿ ಹಾರೈಸುವ ಸಮಯ ನಮ್ಮೆಲ್ಲರಿಗೆ ಈಗ ಒದಗಿ ಬಂದಿದೆ.

ಕಳೆದ 25 ವರ್ಷಗಳಿಂದ ಶ್ರೀಯುತರನ್ನು ಚೆನ್ನಾಗಿ ಬಲ್ಲೆ, ಲೆಕ್ಕ ಪರಿಶೋಧಕರು, ಕೈಗಾರಿಕೋದ್ಯಮಿಗಳು, ಶೈಕ್ಷಣಿಕ ತಜ್ಞರು, ಸಾಮಾಜಿಕ-ಧಾರ್ಮಿಕ ಮುಖಂಡರು, ಅವರದು ಬಹುಮುಖ ವ್ಯಕ್ತಿತ್ವ, ಬಾಪೂಜಿ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖ್ಯಸ್ಥರು ಮತ್ತು ವಿವಿಧ ಸಂಘಗಳ ಪದಾಧಿಕಾರಿಗಳು, ಎಲ್ಲಕ್ಕಿಂತ ಮುಖ್ಯವಾಗಿ ಸರಳ-ಸಜ್ಜನರು, ಆದರ್ಶ ವ್ಯಕ್ತಿಗಳು, ದಾವಣಗೆರೆಯ ಶ್ರೇಷ್ಠ ವ್ಯಕ್ತಿಗಳಲ್ಲಿ ಡಾ.ಅಥಣಿ ವೀರಣ್ಣನವರು ಒಬ್ಬರು.

ದಾವಣಗೆರೆಯ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಶ್ರೀಯುತರದು ಆರು ದಶಕಗಳ ಸಾಧನೆ, ಒಬ್ಬ ವ್ಯಕ್ತಿಯಿಂದ ಒಂದು ನಗರಕ್ಕೆ, ಸಮಾಜಕ್ಕೆ ಬೆಲೆ ಬರುತ್ತದೆ ಎನ್ನುವುದಕ್ಕೆ ಡಾ. ಅಥಣಿ ವೀರಣ್ಣನವರು ಸಾಕ್ಷಿಯಾಗಿದ್ದಾರೆ.

ಶ್ರೀಯುತರು ಇಂದು ನಗರದ ಎಲ್ಲಾ ಕ್ಷೇತ್ರಗಳಲ್ಲೂ ಬಹುದೊಡ್ಡ ರೀತಿಯಿಂದ ಬೆಳೆದಿರುತ್ತಾರೆ, ಅವರು ಏನು ಎನ್ನುವುದನ್ನು ಒಂದೇ ಮಾತಿನಿಂದ ವರ್ಣಿಸಿ ಹೇಳುವುದಕ್ಕೆ ಆಗುವುದಿಲ್ಲ, ಅವರು ಅನೇಕ ಶಕ್ತಿಗಳು ಸಂಯೋಜಿತವಾಗಿರುವ ಒಬ್ಬ ಸಮೀಕೃತ ವ್ಯಕ್ತಿ, ಇಂಥ ವ್ಯಕ್ತಿಗಳು ನಗರದ ಅಭಿವೃದ್ಧಿಗೆ, ಶ್ರೇಷ್ಠತೆಗೆ ದಾರಿದೀಪವಾಗುತ್ತಾರೆ, ತಮ್ಮ ವೃತ್ತಿ ಹಾಗೂ ಪ್ರವೃತ್ತಿಯ ತಮ್ಮ ಕಾರ್ಯ ಜೀವನದ ಉದ್ದಕ್ಕೂ ಸಾರ್ವಜನಿಕ ಜೀವನದಲ್ಲಿ ಎಲ್ಲಾ ವರ್ಗಗಳ ಜನರೊಂದಿಗೂ ಬೆಲ್ಲವಾಗಿ ಬದುಕಿಕೊಂಡು ಬಂದಿರುವ ಅವರು ದಾವಣಗೆರೆಯ ಅಮೂಲ್ಯ ಆಸ್ತಿ ಎನಿಸಿದ್ದಾರೆ,

ಶ್ರೀಯುತರಲ್ಲಿ ಒಳ್ಳೆಯದನ್ನು ಮಾಡಬೇಕೆನ್ನುವ ಸತ್ ಸಂಕಲ್ಪ ಇದೆ, ಕಳೆದ 55 ವರ್ಷಗಳಿಂದ ನಗರದ ಉನ್ನತಿಗೆ, ಮುನ್ನಡೆಯ ಹಾದಿಗೆ ಮಾರ್ಗದರ್ಶಕರಾಗಿದ್ದಾರೆ, ದೈವ ಭಕ್ತಿಯಿಂದ ಪೂಜ್ಯರ, ಗುರುಗಳ, ಹಿತೈಷಿಗಳ ಆಶೀರ್ವಾದವನ್ನು ಪಡೆದು ಬೆಳೆದಿರುವ ಅವರು, ಒಳ್ಳೆಯವರಾಗಿದ್ದುಕೊಂಡು, ಒಳ್ಳೆಯದನ್ನು ಮಾಡುತ್ತಾ ಸೋಲರಿಯದ ಸಾಹಸಿಗರಾಗಿ ದಿಟ್ಟ ಹೆಜ್ಜೆ ಇಟ್ಟು ಮುನ್ನಡೆದಿದ್ದಾರೆ.

ಸಜ್ಜನರು ನಿಸ್ವಾರ್ಥವಾಗಿ ಎಲ್ಲರನ್ನೂ ಪ್ರೀತಿಸುತ್ತಾರೆ, ಕಷ್ಟ-ಕಾರ್ಪಣ್ಯಗಳಲ್ಲಿ ಸ್ಪಂದಿಸುತ್ತಾರೆ, ಮುಖ್ಯವಾಗಿ ದಯೆ, ಕರುಣೆ, ಪ್ರೀತಿ-ವಿಶ್ವಾಸ, ಕ್ಷಮಾಗುಣ, ಗುರುನಿಷ್ಠೆ, ಆಶಾರಹಿತ ನಿಸ್ವಾರ್ಥ ಜೀವನ ನಡೆಸುತ್ತಾರೆ, ಇಂತಹ ಎಲ್ಲಾ ಸದ್ಗುಣಗಳನ್ನು ಶ್ರೀಯುತ, ಡಾ. ಅಥಣಿ ವೀರಣ್ಣನವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ.

ಶ್ರೀಯುತರು ಇತರರ ಏಳಿಗೆಯನ್ನು ಸಹನೆಯಿಂದ ಕೇಳಿಕೊಳ್ಳುವ ತಾಳ್ಮೆಯನ್ನು ಬೆಳೆಸಿಕೊಂಡಿದ್ದಾರೆ, ಸಾಧಿಸುವವರ ಸಾಧನೆಯನ್ನು ಮುಕ್ತ ಮನಸ್ಸಿನಿಂದ ಹಾಡಿ ಹೊಗಳುತ್ತಾರೆ, ಉನ್ನತವಾದುದನ್ನು ಸಾಧಿಸಬೇಕು, ದಿಟ್ಟ ಹೆಜ್ಜೆಗಳನ್ನು ಇಟ್ಟು ಮುಂದೆ ಸಾಗಬೇಕು, ಜೀವನದಲ್ಲಿ ನಯ-ವಿನಯ ರೂಢಿಸಿಕೊಂಡು ನಾವು ಕೂಡ ಮುಂದುವರಿಯಬೇಕು, ದೊಡ್ಡವರಂತೆ ಬೆಳೆಯಬೇಕು ಎನ್ನುವ ಮನೋಧರ್ಮ ವನ್ನು ಹೊಂದಿದ್ದಾರೆ, ಪ್ರೀತಿ-ಕರುಣೆ-ನಂಬಿಕೆಯನ್ನು ಉಳಿಸಿಕೊಂಡು ಮುಂದೆ ಸಾಗಿದಾಗ ನಾವು ಏನನ್ನಾದರೂ ಸಾಧಿಸಲು ಸಾಧ್ಯ, ಎಲ್ಲಕ್ಕಿಂತ ಮುಖ್ಯವಾಗಿ ತಾಳ್ಮೆಯೂ ಬದುಕಿನ ಮೂಲ ಬುನಾದಿ ಎಂದು ಮರೆಯಬಾರದು ಎಂದು ಶ್ರೀಯುತರು ತಮ್ಮ ಜೀವನದ ಅನುಭವದ ಸಾರವನ್ನು ತಿಳಿಸುತ್ತಾರೆ.

ನಾವು ಮಾಡುವ ಸಾಧನೆಯಿಂದ ನಮ್ಮ ಬದುಕಿಗೊಂದು ಅರ್ಥ ಬರುತ್ತದೆ, ಇದಕ್ಕೆ ಮನಸ್ಸಿನ ಶುದ್ಧತೆ ಮತ್ತು ನಿಶ್ಚಲತೆಯೇ ಮೂಲ ಕಾರಣ, ಮನಸ್ಸಿನ ಶುದ್ಧಿ ಇರದಿದ್ದರೆ ಮಾತಿನ ಶುದ್ಧಿ, ನಡೆಯ ಶುದ್ಧಿ ಎರಡು ಸಾಧ್ಯವಾಗದು, ಮನುಷ್ಯನ ಸಾಧನೆಯಲ್ಲಿ ಪ್ರಾಮಾಣಿಕತೆ, ವೈಚಾರಿಕತೆ ಜೊತೆಗೆ ಧೈರ್ಯ ಮತ್ತು ಛಲಗಳು ಸಹ ಬೇಕು, ಯಾವ ವಿಕಾಸವು ಹಠಾತ್ತನೇ ಒಂದೇ ದಿನದಲ್ಲಿ ಘಟಿಸುವುದಿಲ್ಲ, ಅದಕ್ಕೆ ಕಾಲವೂ ಬೇಕು, ತಾಳ್ಮೆಯೂ ಬೇಕು ಎಂಬ ವಿಚಾರ ರಶ್ಮಿಯನ್ನು ನಮ್ಮೆಲ್ಲರಿಗೂ ತಿಳಿಸುತ್ತಾರೆ,

**ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು**
**ಪರಿಣಾಮವಕ್ಕು ಪದವಕ್ಕು ಕೈಲಾಸ**
**ನೆರೆಮನೆಯಕ್ಕು ಸರ್ವಜ್ಞ!**
**ಹರಪೂಜೆ ಗುರುಸೇವೆ; ವರ ಪುಣ್ಯವಿಲ್ಲದೇ।**
**ಬರಿದೆ ಸುಖಭೋಗವು; ದೊರಕುವುದೇ ಆತ್ಮ॥**
**ಹಣವಿದ್ದಾಗಲೇ ಭಕ್ತಿ; ನೆಣವಿದ್ದಾಗಲೇ ಸೇವಾ।**
**ಗುಣವಿದ್ದಾಗಲೇ ಮಾಡಿ; ಮುಕ್ತಿಪಡೆ ಆತ್ಮ॥**

ಎಂಬ ತತ್ವದಂತೆ ವೀರಣ್ಣನವರು ದಾನಿಗಳಾಗಿ ಸಮಾಜ ಸೇವಾ ಕೈಂಕರ್ಯದಲ್ಲಿ ತೊಡಗಿದ್ದಾರೆ, ಎಷ್ಟೇ ಉನ್ನತ ಮಟ್ಟಕ್ಕೆ ಬೆಳೆದರೂ ಸರಳ-ಸಜ್ಜನರಾಗಿ ಕಾಯಕವೇ ಕೈಲಾಸ ಎಂಬ ತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಇಂದಿಗೂ ತಮ್ಮ ಕೆಲಸದಲ್ಲಿ ಕಾರ್ಯ ಮಗ್ನರಾಗಿದ್ದಾರೆ

ಡಾ.ಅಥಣಿ ವೀರಣ್ಣನವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು ಕೋರುತ್ತಾ, ದೇವರು ಅವರಿಗೆ ಇನ್ನೂ ಹೆಚ್ಚಿನ ಸಕಲ ಸಿರಿ ಸಂಪತ್ತನ್ನು, ಆಯುರಾ ರೋಗ್ಯವನ್ನು ಕರುಣಿಸಲಿ, ಶುಭವಾಗಲಿ ಎಂದು ಮನತುಂಬಿ ಶುಭ ಕೋರುತ್ತೇನೆ.



**- ಜೆಂಬಿಗಿ ಮೃತ್ಯುಂಜಯ,**
ಕನ್ನಡ ಉಪನ್ಯಾಸಕರು, ದಾವಣಗೆರೆ

# ನಾಳೆ ಮಾಳಗೊಂಡನಹಳ್ಳಿಯಲ್ಲಿ ದೇವರ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ

ದಾವಣಗೆರೆ, ಜ. 17- ತಾಲ್ಲೂಕಿನ ಮಾಳಗೊಂಡನಹಳ್ಳಿಯ ಶ್ರೀ ವೆಂಕಟೇಶ್ವರ ಸ್ವಾಮಿ, ಶ್ರೀ ಕೋಟೆ ಆಂಜನೇಯ ಸ್ವಾಮಿ ಹಾಗೂ ಶ್ರೀ ಬೀರಲಿಂಗೇಶ್ವರ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯಕ್ರಮ ನಾಡಿದ್ದು ದಿನಾಂಕ 19 ರ ಭಾನುವಾರ ಬೆಳಿಗ್ಗೆ 9 ಕ್ಕೆ ನಡೆಯಲಿದೆ ಎಂದು ಬಾಪೂಜಿ ವಿದ್ಯಾಸಂಸ್ಥೆ ನಿರ್ದೇಶಕ ಸಂಪನ್ನ ವಿ. ಮುತಾಲಿಕ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶ್ರೀ ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್, ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಮುದೇಗೌಡ್ರು ಗಿರೀಶ್, ವೈ. ರಂಗಪ್ಪ, ಜಿ.ಪಂ. ಮಾಜಿ ಸದಸ್ಯ ಕೆ.ಜಿ. ಬಸವನಗೌಡ್ರು, ಮೇಯರ್ ಕೆ. ಚಮನ್‌ಸಾಬ್, ಕೋಕೋ ಫಾರ್ಮ್ ಮಾಲೀಕ ಆರ್.ಜಿ.ಶ್ರೀನಿವಾಸಮೂರ್ತಿ, ಬಾಪೂಜಿ ವಿದ್ಯಾಸಂಸ್ಥೆ ನಿರ್ದೇಶಕ ಸಂಪನ್ನ ವಿ. ಮುತಾಲಿಕ್, ಜಿ.ಪಂ.ಮಾಜಿ ಸದಸ್ಯೆ ರೇಣುಕಮ್ಮ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ಮಾಳಗೊಂಡನಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಕೆ.ಪರಶುರಾಮ್ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಧಾರ್ಮಿಕ ಕಾರ್ಯಕ್ರಮಕ್ಕೆ ಸಾರ್ವಜನಿಕರು ಆಗಮಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಮಾಧ್ವ ಪ್ರಸಾದ್, ಎ.ಬಿ. ಪ್ರಭಾಕರ್, ಬಿ.ಕೆ. ಪರಶುರಾಮ್, ಚಂದನ್ ಕುಮಾರ್ ಉಪಸ್ಥಿತರಿದ್ದರು.

# ಕೈದಾಳೆ- ಗಿರಿಯಾಪುರ ಗ್ರಾಮಕ್ಕೆ ಸಾರಿಗೆ ಬಸ್ ವ್ಯವಸ್ಥೆ ಸಚಿವರು, ಸಂಸದರಿಗೆ ಗ್ರಾಮಸ್ಥರ ಅಭಿನಂದನೆ



ದಾವಣಗೆರೆ, ಜ.17- ತಾಲ್ಲೂಕಿನ ಕೈದಾಳೆ ಹಾಗೂ ಗಿರಿಯಾಪುರ ಗ್ರಾಮದ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ಅನುಕೂಲಕ್ಕಾಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಸೂಚನೆಯ ಮೇರೆಗೆ ಶಕ್ತಿ ಯೋಜನೆಯಡಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಇದರಿಂದ ಸಂತಸಗೊಂಡ ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಸಚಿವರು ಹಾಗೂ ಸಂಸದರಿಗೆ ಧನ್ಯವಾದ ಅರ್ಪಿಸಿದ್ದಾರೆ.

ಶಾಲಾ-ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಮತ್ತು ನಾಗರಿಕ ಬಂಧುಗಳಿಗೆ ಅನುಕೂಲವಾಗುವಂತೆ ದಿನಕ್ಕೆ ಊರಿನೊಳಗೆ ಎರಡು ಸಾರಿ ಬೆಳಗ್ಗೆ ಮತ್ತು ಸಾಯಂಕಾಲ ಕೆಎಸ್ ಆರ್ ಟಿಸಿ ಬಸ್ ಗಳ ಸಂಚಾರ ವ್ಯವಸ್ಥೆಗೆ ಅನುವು ಮಾಡಿಕೊಡಲಾಯಿತು.

ಮಹಿಳೆಯರು, ವಿದ್ಯಾರ್ಥಿಗಳು ಕೈದಾಳೆ ಗ್ರಾಮಸ್ಥರು ಈ ಶಕ್ತಿ ಯೋಜನೆಗೆ ಸಹಕರಿಸಿದ ಸಾರಿಗೆ ಇಲಾಖೆ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಈ ವೇಳೆ ಗ್ಯಾರಂಟಿ ಯೋಜನೆಯ ಜಿಲ್ಲಾ ಸದಸ್ಯರಾದ ಕೈದಾಳೆ ಶಿವಶಂಕರ್ ಉಪಸ್ಥಿತರಿದ್ದರು.

# ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಗ್ರಾಹಕರ ಸಂವಾದ

ರಾಣೇಬೆನ್ನೂರಿನ ಹೆಸ್ಕಾಂ ವಿದ್ಯುತ್ ಉಪ ವಿಭಾಗ-1 ಕಚೇರಿ ಸಭಾಂಗಣದಲ್ಲಿ ಇಂದು ಮಧ್ಯಾಹ್ನ 3.30 ರಿಂದ 5.30 ರವರೆಗೆ ವಿದ್ಯುತ್ ಗ್ರಾಹಕರ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂಬಂಧಪಟ್ಟ ಗ್ರಾಮೀಣ ಭಾಗದ ಗ್ರಾಹಕರು ಸಭೆಯಲ್ಲಿ ಭಾಗವಹಿಸಿ, ವಿದ್ಯುತ್ ಬಗೆಗಿನ ತಮ್ಮ ಅಹವಾಲನ್ನು ಸಲ್ಲಿಸುವಂತೆ ಕೋರಲಾಗಿದೆ.

**ಗ್ರಾಹಕರ ಸಂವಾದ:** ಹೆಸ್ಕಾಂ ರಾಣೇಬೆನ್ನೂರು ಇವರ ಕಚೇರಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕಾರ್ಯ ಮತ್ತು ಪಾಲನೆ ಉಪ ವಿಭಾಗ-2 ರಲ್ಲಿ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ಗ್ರಾಹಕರ ಸಂವಾದ ಸಭೆ ಹಮ್ಮಿಕೊಳ್ಳಲಾಗಿದೆ. ಹಲಗೇರಿ, ಇಟಗಿ, ತುಮ್ಮಿನಕಟ್ಟೆ, ಚಳಗೇರಿ, ಮೆಡ್ಲೇರಿ ಶಾಖಾ ವ್ಯಾಪ್ತಿಯ ಗ್ರಾಹಕರು ಸಭೆಗೆ ಹಾಜರಾಗಿ ತಮ್ಮ ಸಮಸ್ಯೆಗಳನ್ನು ತಿಳಿಸಬಹುದು.

# ಸಾಲಿಗ್ರಾಮ ಗಣೇಶ ಶೆಣೈಗೆ 'ಜ್ಞಾನ ವಿಭೂಷಣ' ಪ್ರಶಸ್ತಿ

ದಾವಣಗೆರೆ, ಜ. 17- ಬೆಳಗಾವಿಯ ಕಸ್ತೂರಿ ಸಿರಿಗನ್ನಡ ವೇದಿಕೆಯ ಆಶ್ರಯದಲ್ಲಿ ಇದೇ ದಿನಾಂಕ 20 ರಂದು ನಡೆಯುವ ಸಮಾರಂಭದಲ್ಲಿ ಬಹುಮುಖ ಪ್ರತಿಭೆ, ವಿವಿಧ ಸಂಘಟನೆಗಳ ನಿರಂತರ ಕಠಿಣ ಪರಿಶ್ರಮದ ನಾಲ್ಕು ದಶಕಗಳ ಕಾಲ ಶೈಕ್ಷಣಿಕ, ಸಾಮಾಜಿಕ, ಅಧ್ಯಾತ್ಮಗಳ ಕಾಳಜಿಯ ಸಾಧನೆಯನ್ನು ಗುರುತಿಸಿ ಸಾಲಿಗ್ರಾಮ ಗಣೇಶ್ ಶೆಣೈ ಅವರನ್ನು 'ಜ್ಞಾನ ವಿಭೂಷಣ'ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಪ್ರೊ.ಎಲ್.ಹೆಚ್. ಪೆಂಡಾರಿ ತಿಳಿಸಿದ್ದಾರೆ. ನಿರಂತರವಾಗಿ ರಾಜ್ಯ, ರಾಷ್ಟ್ರ ಪ್ರಶಸ್ತಿಗಳನ್ನು ಮುಡಿಗೇರಿಸುತ್ತಿರುವ ಶೆಣೈ ಅವರಿಗೆ ಕಲಾಕುಂಚ, ಯಕ್ಷರಂಗ ಸೇರಿದಂತೆ ವಿವಿಧ ಸಂಘಟನೆಗಳ ಸರ್ವ ಸದಸ್ಯರು, ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

# ಕುರಿ-ಮೇಕೆ ಸಾಕಾಣಿಕೆ ಶಿಬಿರ

ದಾವಣಗೆರೆ, ಜ.17- ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ, ಆಧುನಿಕ ಹೈನುಗಾರಿಕೆ ತರಬೇತಿ ಆಯೋಜಿಸಲಾಗಿದೆ. ಇದೇ ದಿನಾಂಕ 20 ಮತ್ತು 21 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ, 30 ಮತ್ತು 31 ರಂದು ಆಧುನಿಕ ಹೈನುಗಾರಿಕೆ ತರಬೇತಿಯನ್ನು ಆಯೋಜಿಸಿದ್ದು, ವಿವರಕ್ಕೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರ, ದಾವಣಗೆರೆ ಕಚೇರಿ ದೂ.ಸಂ: 08192-233787 ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು ಎಂದು ಪಶು ವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

# ಇಂದು : ನವೋದಯ ಪರೀಕ್ಷೆಯಲ್ಲಿ ಅಕ್ರಮಕ್ಕೆ ಅವಕಾಶ ನೀಡದಿರಿ

ದಾವಣಗೆರೆ, ಜ. 17- ಜವಹಾರ್ ನವೋದಯ ವಿದ್ಯಾಲಯಗಳ ಪ್ರವೇಶ ಪರೀಕ್ಷೆ ನಾಳೆ ಜಿಲ್ಲೆಯ 18 ಕೇಂದ್ರಗಳಲ್ಲಿ ನಡೆಯಲಿದ್ದು, ಯಾವುದೇ ಅಕ್ರಮಗಳಿಗೆ ಅವಕಾಶ ನೀಡಬಾರದು ಹಾಗೂ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ತಾಂಡಾ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಜಿ. ಮಂಜ್ಯಾನಾಯ್ಕ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜವಾಹರ ನವೋದಯ ವಿದ್ಯಾಲಯಗಳು ಕೇಂದ್ರ ಸರ್ಕಾರದ ವತಿಯಿಂದ ನಡೆಸಲಾಗುತ್ತಿರುವ ಉಚಿತ ವಸತಿಯುತ ಶಾಲೆಗಳಾಗಿರುತ್ತವೆ. ನಾಳೆ 6 ನೇ ತರಗತಿ, 9 ನೇ ತರಗತಿ ಮತ್ತು 11 ನೇ ತರಗತಿ ಪ್ರವೇಶ ಪರೀಕ್ಷೆಗಳ ಮುಖಾಂತರ ಮಕ್ಕಳನ್ನು ಆಯ್ಕೆ ಮಾಡಿಕೊಂಡು ವಿದ್ಯಾಭ್ಯಾಸ ನೀಡಲಾಗುತ್ತದೆ.

ಗ್ರಾಮೀಣ ಭಾಗದ 3,4 ಮತ್ತು 5 ನೇ ತರಗತಿ ವಿದ್ಯಾರ್ಥಿಗಳು ಗ್ರಾಮೀಣ ಅಭ್ಯರ್ಥಿಗಳಾಗಿ ಪರೀಕ್ಷೆ ಬರೆಯಲಿದ್ದು, ನಗರದ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯುತ್ತಾರೆ. ಇಲ್ಲಿ ಗ್ರಾಮೀಣ ಶೇ. 75, ನಗರ ಶೇ. 25, ಬಾಲಕರು ಶೇ.67, ಬಾಲಕಿಯರು ಶೇ. 33 ರಷ್ಟು ತೆಗೆದುಕೊಳ್ಳಲಾಗುತ್ತದೆ.

ಪ್ರಸ್ತುತ ನಾಳೆ ನವೋದಯ ಪರೀಕ್ಷೆಯು ದಾವಣಗೆರೆ 8, ಜಗಳೂರು 2, ಚನ್ನಗಿರಿ 4, ಹರಿಹರ 3, ಹೊನ್ನಾಳಿ 3 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಮಲ್ಲಿಕಾರ್ಜುನ್, ಕಿರಣ್ ಕುಮಾರ್, ರಾಕೇಶ್, ಮಹೇಂದ್ರ, ರಾಜೇಶ್ ಉಪಸ್ಥಿತರಿದ್ದರು.

# ಇಂದು 'ಮಕ್ಕಳ ಹಬ್ಬ-2025' ಕಾರ್ಯಕ್ರಮ

ದಾವಣಗೆರೆ ಶ್ರೀ ಗುರುದೇವ ವಿದ್ಯಾಸಂಸ್ಥೆಯ ವಿದ್ಯಾಸಾಗರ ಶಾಲೆ ವತಿಯಿಂದ ಇಂದು ಸಂಜೆ 6 ಗಂಟೆಗೆ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ 'ಮಕ್ಕಳ ಹಬ್ಬ-2025' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಾಹಿತಿ, ಪಾಲಿಕೆ ಮಾಜಿ ಸದಸ್ಯ ಬಾ.ಮ. ಬಸವರಾಜಯ್ಯ ಕಾರ್ಯಕ್ರಮ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಎಸ್. ಬಡದಾಳ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಸಮಿತಿ ಅಧ್ಯಕ್ಷ ಆರ್. ಭರತ್ ಸಿಂಗ್ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ.

ಇದೇ ಸಂದರ್ಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಬಾಲ್ಯ ಜೀವನ ಆಧರಿತ 'ಬೆಳಕು ಹಂಚಿದ ಬಾಲಕ' ಮಕ್ಕಳ ನಾಟಕ ಪ್ರದರ್ಶನಗೊಳ್ಳಲಿದೆ.


## ನನ್ನ ಜೀವನಕ್ಕೆ ಬೆಳಕಾದ ಸರ್ವರಿಗೂ ಹೃದಯಪೂರ್ವಕ ಕೃತಜ್ಞತೆಗಳು...




ನಾನು 75ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ನನಗೆ ಜನ್ಮ ನೀಡಿದ ನನ್ನ ತಂದೆ - ತಾಯಿಗೆ, ಪತ್ರಕರ್ತನಾಗಿ ಸೇವೆ ಸಲ್ಲಿಸಲು ಅನುಕೂಲ ಮಾಡಿಕೊಟ್ಟ ಪತ್ರಿಕೆಗಳ ಸಂಪಾದಕರಿಗೆ (ಸರ್ವ ಶ್ರೀ **ಸಿ.ಕೆ. ಹಳೇಬೀಡು**, ನಗರವಾಣಿ, **ಹೆಚ್.ಎನ್. ಷಡಾಕ್ಷರಪ್ಪ**, ಜನತಾವಾಣಿ, **ಎನ್.ಬಿ. ರುದ್ರಮುನಿ** ಭುವನೇಶ್ವರಿ, **ಕೆ. ಶಾಮರಾವ್**, ಸಂಯುಕ್ತ ಕರ್ನಾಟಕ ಮತ್ತು ಸಂಯುಕ್ತ ಕರ್ನಾಟಕದ ಆಗಿನ ಪ್ರಸರಣಾಧಿಕಾರಿ **ಎ.ಸಿ. ಗೋಪಾಲ್**, ಪತ್ರಕರ್ತರಾಗಿದ್ದ **ಐಗೂರು ಷಣ್ಮುಖಪ್ಪನವರಿಗೆ**, ಮುಖ್ಯವಾಗಿ ನನ್ನ ಜೀವನಕ್ಕೆ ಬೆಳಕು ನೀಡಿದ ಶಾಸಕರಾದ **ಶಾಮನೂರು ಶಿವಶಂಕರಪ್ಪನವರಿಗೆ** ಮತ್ತು ನನ್ನ ಆತ್ಮೀಯ ಗೆಳೆಯರಿಗೆ ವಿಶೇಷವಾಗಿ ನನ್ನ **ಅಣ್ಣ-ತಮ್ಮಂದಿರಿಗೆ**, **ನನ್ನ ಸಹ-ಧರ್ಮಿಣಿ ದಿವಂಗತ ಶ್ರೀಮತಿಗೆ**, ನನ್ನನ್ನು ಅತ್ಯಂತ ಪ್ರೀತಿಯಿಂದ ಸಲಹುತ್ತಿರುವ ನನ್ನ **ಮಕ್ಕಳಿಗೆ**, **ಸೊಸೆಯಂದಿರಿಗೆ**, **ಮೊಮ್ಮಕ್ಕಳಿಗೆ**, ನನ್ನ ಜೀವನದಲ್ಲಿ ಮಗಳಾಗಿ ಬಂದ ನನ್ನ ಪ್ರೀತಿಯ **ಮಗಳಿಗೆ** ಮತ್ತು ಈ ನನ್ನ ಕಷ್ಟ-ಸುಖದ ಜೀವನವನ್ನು ಮಧುರವಾಗಿ, ಕಲಾತ್ಮಕವಾಗಿ ರೂಪಿಸಿಕೊಟ್ಟ ದಯಾಮಯನಾದ ಪರಮಾತ್ಮನು ಸೇರಿದಂತೆ ಸರ್ವರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು...

**ಸಾಂ.ಹಿ. ಉಮಾಶಂಕರ್**
**ದಾವಣಗೆರೆ / ಬೆಂಗಳೂರು. ಮೊ. : 94484 51421**



## ಪುರಸಭಾ ಕಾರ್ಯಾಲಯ
**ಕರ್ನಾಟಕ ಸರ್ಕಾರ**
**ಹರಪನಹಳ್ಳಿ - 583 131, ವಿಜಯನಗರ ಜಿಲ್ಲೆ**

**ದೂರವಾಣಿ ಸಂಖ್ಯೆ : 08398-280258**
e-mail : itstaff_ulb_harapanahalli@yahoo.com - Website : harapanahallitown.mrc.gov.in

ಕ್ರ.ಸಂ:ಪುಸ:ಹ.ಹಳ್ಳಿ/ಸಿಆರ್/ 25/2024-25 ದಿನಾಂಕ : 17.01.2025

### ದರವಾರು ಪ್ರಕಟಣೆ

ಹರಪನಹಳ್ಳಿ ಪುರಸಭೆಯ 2024-2025ನೇ ಸಾಲಿನ ಪುರಸಭೆ ನಿಧಿಯಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿ ನಿಲಯಗಳಿಗೆ ಡೈನಿಂಗ್ ಟೇಬಲ್ ಪೂರೈಸುವುದು, 2023-2024ನೇ ಸಾಲಿನ ಪುರಸಭೆ ನಿಧಿಯ ಶೇಕಡ 5 ರಲ್ಲಿ ವಿಕಲಚೇತನರಿಗೆ ಕಾನೂನು ಅರಿವು ಕಾರ್ಯಕ್ರಮ ಆಯೋಜಿಸುವುದು, ಆಸಕ್ತಿವುಳ್ಳ ಏಜೆನ್ಸಿ/ಎಂಟರ್‌ಪ್ರೈಸಸ್/ಎನ್.ಜಿ.ಓ/ಎಸ್.ಹೆಚ್.ಜಿ ಹಾಗೂ ಇತರೆಯವರು ತಮ್ಮ ಶೀಲ್ ಬಂದ್ ಮಾಡಿದ ಲಕೋಟೆಗಳನ್ನು ಈ ಕೆಳಗೆ ಸಹಿ ಮಾಡಿದವರ ಹೆಸರಿನಲ್ಲಿ ದಿನಾಂಕ : 23.01.2025ರ ಸಂಜೆ 4.30ರೊಳಗಾಗಿ ಸಲ್ಲಿಸಲು ತಿಳಿಸಿದೆ.

| ಕ್ರ.ಸಂ. | ವಿವರ | ದರ ಪ್ರತಿಯೊಂದಕ್ಕೆ |
|---|---|---|
| 01. | ಹಿಂದುಳಿದ ವರ್ಗದ ವಿದ್ಯಾರ್ಥಿ ನಿಲಯಗಳಿಗೆ ಸ್ಟೀಲ್ ಡೈನಿಂಗ್ ಟೇಬಲ್ ಪೂರೈಸುವುದು. | - |
| 02. | ವಿಕಲಚೇತನರಿಗೆ ಕಾನೂನು ಅರಿವು ಕಾರ್ಯಕ್ರಮಕ್ಕೆ (ಊಟ, ಟೀ, 60 ಜನರಿಗೆ, 4 ಸಂಪನ್ಮೂಲ ವ್ಯಕ್ತಿ, ತರಬೇತಿ ಪರಿಕರಣಗಳು, ಪ್ರೊಜೆಕ್ಟರ್, ಛೇರ್, ಟೇಬಲ್ ಮತ್ತು ಇತರೆ) | - |

**ಹೆಚ್ಚಿನ ಮಾಹಿತಿಗಾಗಿ ಪುರಸಭೆ ಆರೋಗ್ಯ ವಿಭಾಗದ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.**

ಸಹಿ/- ಅಧ್ಯಕ್ಷರು, ಪುರಸಭೆ ಹರಪನಹಳ್ಳಿ.

ಸಹಿ/- ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ

# 51 ನೇ ವರ್ಷದ ಪುಟ್ಟರಾಜ ಗವಾಯಿಗಳವರ ಪುರಾಣ ಪ್ರವಚನ ಕಾರ್ಯಕ್ರಮ, ನಡೆದು ಬಂದ ದಾರಿ



ದಾವಣಗೆರೆ ನಗರ ಕರ್ನಾಟಕ ರಾಜ್ಯದ ಧಾರ್ಮಿಕ ಕ್ಷೇತ್ರದ ಕೇಂದ್ರ ಬಿಂದು. ಇಂತಹ ನಗರದಲ್ಲಿ ಸನ್ 1973ನೇ ಇಸ್ವಿಯಲ್ಲಿ ಹೈಸ್ಕೂಲ್ ಮೈದಾನದಲ್ಲಿ ಇದ್ದಂತಹ ಮಹಾಕೂಟೇಶ್ವರ ಡ್ರಾಮಾ ಕಂಪನಿಯಲ್ಲಿ ಪ್ರತಿ ದಿನ ಸಂಜೆ 7 ರಿಂದ 9 ರವರೆಗೆ ಪುರಾಣ ಪ್ರವಚನ ಕಾರ್ಯಕ್ರಮ ನಡೆಯುತ್ತಿತ್ತು. ಪುರಾಣ ಪ್ರವಚನ ಕಾರ್ಯಕ್ರಮವನ್ನು ಪುರಾಣಿಕ ಮಠದ ವೀರಬಸಯ್ಯನವರು ಮತ್ತು ಜಾಲಿಮರದ ಸಂಗಪ್ಪನವರು ನಡೆಸಿಕೊಡುತ್ತಿದ್ದರು.

ಪ್ರಥಮ ಬಾರಿಗೆ ಪುರಾಣ ಪ್ರವಚನವನ್ನು ವೇ|| ರೇವಣಸಿದ್ಧಯ್ಯ ಶಾಸ್ತ್ರಿಗಳು ನಡೆಸುತ್ತಿದ್ದರು. ಈಗ ವಿನೋಬನಗರದ 1ನೇ ಮುಖ್ಯರಸ್ತೆ, ಶಂಭುಲಿಂಗನ ದೇವಸ್ಥಾನದಲ್ಲಿ ಅರ್ಚಕರಾಗಿದ್ದಾರೆ. ಕಾರ್ಯಕ್ರಮ ನಡೆಯುವ ಸಂದರ್ಭದಲ್ಲಿ ಒಂದು ದಿವಸ ವೀರಬಸಯ್ಯನವರು ನಾಳೆ ಈ ಕಾರ್ಯಕ್ರಮಕ್ಕೆ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪುಟ್ಟರಾಜ ಗವಾಯಿಗಳವರು ದಯಮಾಡಿಸುತ್ತಾರೆ. ಅವರಿಗೆ ಎರಡೂ ಕಣ್ಣುಗಳು ಕಾಣಿಸುವುದಿಲ್ಲ. ಆದರೂ ತಬಲಾ, ಹಾರ್ಮೋನಿಯಂ, ವೀಣೆ ಎಲ್ಲವನ್ನೂ ನುಡಿಸುತ್ತಾರೆ ಎಂದು ತಿಳಿಸಿದರು. ಅಂದ ಹಾಗೆ ಮಾರನೇ ದಿನ ಅವರ ದರ್ಶನಕ್ಕಾಗಿ ಭಕ್ತರು ಸಮುದ್ರೋಪಾದಿಯಲ್ಲಿ ನಾಟಕದ ಥಿಯೇಟರ್ ತುಂಬಾ ಸೇರಿದ್ದರು. ಅದರಲ್ಲಿ ನಾನೂ ಒಬ್ಬ ಭಕ್ತ. ಪುಟ್ಟರಾಜರು ದಯಮಾಡಿಸಿದರು. ಪುರಾಣ ಪ್ರವಚನದ ನಂತರ ಗುರುಗಳು ಆಶೀರ್ವಚನ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಏನು ಇದು? ಎಷ್ಟು ಜನ ಸೇರಿದ್ದೀರಿ? ಥಿಯೇಟರಿನ ಬಲಭಾಗದಲ್ಲಿ ಭಾರೀ ಜನಸ್ತೋಮ ಇದೆ ಎಂದು ಹೇಳಿದರು. ಅಲ್ಲಿದ್ದವರಿಗೆಲ್ಲಾ ಆಶ್ಚರ್ಯವಾಯಿತು. ಏನಿದು? ಕಣ್ಣು ಕಾಣುವುದಿಲ್ಲ ಎಂದು ತಿಳಿಸಿದ್ದರು ಆದರೆ ಜನಸ್ತೋಮ ಇರುವುದು ಹೇಗೆ ಗೊತ್ತಾಯಿತು. ಇವರು ಸಾಮಾನ್ಯರಲ್ಲ ಇವರು ಒಬ್ಬ ದೊಡ್ಡ ಯೋಗಿಗಳು ಎಂದು ಭಕ್ತರು ತೀರ್ಮಾನಿಸಿದರು.

ತದನಂತರ ಡ್ರಾಮಾ ಕಂಪನಿ ಮಾಲೀಕರಾದ ಯಲ್ಲಪ್ಪ ಮತ್ತು ಶಂಕರಯ್ಯನವರು ಕಾರಣಾಂತರದಿಂದ ಇಬ್ಭಾಗವಾದರು. ಆಗ ಶಂಕರಯ್ಯನವರು ನಗರದ ಹಳೇ ಭಾಗದಲ್ಲಿರುವ ದೊಗ್ಗಳ್ಳಿ ಕೊಟ್ರಪ್ಪನವರ ಕಾಂಪೌಂಡಿನಲ್ಲಿ ಬನಶಂಕರಿ ಡ್ರಾಮಾ ಕಂಪನಿ ಎಂಬ ಹೆಸರಿನ ನಾಟಕದ ಕಂಪನಿ ಪ್ರಾರಂಭಿಸಿದರು.

ಈ ಡ್ರಾಮಾ ಕಂಪನಿಯಲ್ಲಿ ಪುಟ್ಟರಾಜರು ಪುರಾಣ ಪ್ರವಚನ ಕಾರ್ಯಕ್ರಮ ನಡೆಸುತ್ತಿದ್ದರು. 1975-76ನೇ ಇಸ್ವಿಯಲ್ಲಿ ಪುಟ್ಟರಾಜ ಗುರುಗಳು ಸ್ವತಃ ತಾವೇ ಬರೆದಂತಹ ಶ್ರೀ ಯಡಿಯೂರು ಸಿದ್ಧಲಿಂಗೇಶ್ವರರ ಪುರಾಣ ಪ್ರವಚನ ಕಾರ್ಯಕ್ರಮವನ್ನು 3 ತಿಂಗಳ ಪರ್ಯಂತರ ನಡೆಸಿಕೊಟ್ಟರು. ಕಾರ್ಯಕ್ರಮದ ಮಂಗಳ ಕಾರ್ಯಕ್ರಮ ಎರಡು ದಿನ ನಡೆಯಿತು. ಮೊದಲನೇ ದಿನದ ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ಚಿತ್ರದುರ್ಗದ ಬೃಹನ್ಮಠದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ನಡೆಸಿಕೊಟ್ಟರು. ಎರಡನೇ ದಿನದ ಕಾರ್ಯಕ್ರಮವನ್ನು ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯರು ದಿವ್ಯ ಸಾನ್ನಿಧ್ಯವನ್ನು ವಹಿಸಿ ನಡೆಸಿಕೊಟ್ಟರು. ಇದೇ ಕಾರ್ಯಕ್ರಮದಲ್ಲಿ ಭಕ್ತರಿಂದ ಬಂದ ಕಾಣಿಕೆ ಅಂದಾಜು 65 ಸಾವಿರ ರೂ.ಗಳಾಗಿದ್ದವು. ಆಗ ಪುಟ್ಟರಾಜ ಗುರುಗಳಿಗೆ ಸಂಚಾರಕ್ಕೆ ಒಂದು ಹೊಸ ವಾಹನವನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಅಜ್ಜನವರಿಗೆ ಭಕ್ತಿಯಿಂದ ಅರ್ಪಿಸಿದರು. 1978ರಲ್ಲಿ ಅಜ್ಜನವರು ರೇಣುಕ ಮಂದಿರದಲ್ಲಿ ಸಂಜೆ ಶಿವಾನುಭವಗೋಷ್ಠಿಯನ್ನು ನಡೆಸುತ್ತಿದ್ದರು. ರೇಣುಕ ಮಂದಿರದಲ್ಲಿ ಸಂಜೆ ನಡೆದ ಧಾರ್ಮಿಕ ಸಭೆಯಲ್ಲಿ ದಿವ್ಯ ಸಾನ್ನಿಧ್ಯವನ್ನು ರಂಭಾಪುರಿ ಪೀಠದ 119ನೇ ಜಗದ್ಗುರುಗಳಾದ ಜಗದ್ಗುರು ವೀರಗಂಗಾಧರ ಶಿವಾಚಾರ್ಯರು ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದರು. ಪುಟ್ಟರಾಜ ಗುರುಗಳು ಉಪಸ್ಥಿತರಿದ್ದರು.

ಜಗದ್ಗುರು ವೀರಗಂಗಾಧರ ಶಿವಾಚಾರ್ಯರು ತಮ್ಮ ಆಶೀರ್ವಚನದಲ್ಲಿ ನಾನು ಜಗತ್ತಿನಲ್ಲಿ ಎಲ್ಲರಿಗೂ ಆಶೀರ್ವಾದವನ್ನು ದಯಪಾಲಿಸುತ್ತೇನೆ. ಆದರೆ ಪುಟ್ಟರಾಜ ಗುರುಗಳಿಗೆ ಆಶೀರ್ವಾದವನ್ನು ದಯಪಾಲಿಸುವುದಿಲ್ಲವೆಂದು ತಿಳಿಸಿದರು. ಕಾರಣ ಪುಟ್ಟರಾಜ ಗುರುಗಳು ಸಾಕ್ಷಾತ್ ಶಿವನಿಂದ ಆಶೀರ್ವಾದ ಪಡೆದುಕೊಂಡು ಬಂದಿದ್ದಾರೆಂದು ತಿಳಿಸಿದರು. ಪುಟ್ಟರಾಜ ಗುರುಗಳು ಅನೇಕ ಪವಾಡಗಳನ್ನು ಮಾಡಿರುತ್ತಾರೆ. ಉದಾಹರಣೆ ಒಬ್ಬ ಭಕ್ತರ ಮನೆಯಲ್ಲಿ ಪೂಜೆಗೆ ಕುಳಿತಾಗ ಒಂದು ದೀಪದ ಎಣ್ಣೆ ಕಡಿಮೆಯಾಗಿ ದೀಪ ಸಣ್ಣದಾಗಿ ಉರಿಯುತ್ತಿತ್ತು. ಆಗ ಅಜ್ಜನವರು ಆ ದೀಪದಲ್ಲಿ ಎಣ್ಣೆ ಇಲ್ಲ, ಆ ದೀಪಕ್ಕೆ ಎಣ್ಣೆಯನ್ನು ಹಾಕಿರಿ ಎಂದಾಗ ಅಲ್ಲಿದ್ದವರಿಗೆಲ್ಲಾ ಆಶ್ಚರ್ಯವಾಯಿತು.

ಒಂದು ಸಲ ಅಜ್ಜನವರು ದಾವಣಗೆರೆಯಲ್ಲಿ ಪುರಾಣ ಕಾರ್ಯಕ್ರಮವನ್ನು ಮುಗಿಸಿಕೊಂಡು ಯಡಿಯೂರಿಗೆ ಹೋಗುವ ಸಂದರ್ಭದಲ್ಲಿ ರಾತ್ರಿ ವೇಳೆ ವಾಹನದಲ್ಲಿ ಡೀಸೆಲ್ ಖಾಲಿಯಾಗಿ ವಾಹನ ನಿಂತಿತು. ಆಗ ಅಜ್ಜನವರು ಡ್ರೈವರ್‌ಗೆ ಯಾಕಪ್ಪ ಎಂದು ಕೇಳಿದಾಗ, ಅಜ್ಜನವರೇ ಗಾಡಿಯಲ್ಲಿ ಡೀಸೆಲ್ ಖಾಲಿಯಾಗಿದೆ ಎಂದು ಹೇಳಿದರು. ಸಿದ್ಧಲಿಂಗೇಶ್ವರ ನೋಡಿಕೊಳ್ಳುತ್ತಾನೆ ಎಂದು ತಿಳಿಸಿದರು. ಅದರಂತೆ ರಾತ್ರಿ ವೇಳೆಯಲ್ಲಿ ಒಬ್ಬ ಮನುಷ್ಯ ಬೈಕ್‌ನಲ್ಲಿ ಡೀಸೆಲ್ ಅನ್ನು ಒಂದು ಡಬ್ಬದಲ್ಲಿ ತಂದು ಡ್ರೈವರ್‌ಗೆ ಏನಾಗಿದೆ? ಯಾಕೆ ಹೀಗೆ ನಿಂತಿದ್ದೀರಿ ಎಂದು ಕೇಳಿದರು. ಡೀಸೆಲ್ ಖಾಲಿಯಾಗಿದೆ ಎಂದು ತಿಳಿಸಿದರು. ಆಗ ಆ ಮನುಷ್ಯ ಡೀಸೆಲ್ ಡಬ್ಬಿಯನ್ನು ತಂದು ಕೊಟ್ಟು ಇದನ್ನು ತೆಗೆದುಕೊಳ್ಳಿರಿ ಎಂದು ಹೇಳಿದರು.



ಡೀಸೆಲ್ ಅನ್ನು ಗಾಡಿಗೆ ಹಾಕಿ ತಿರುಗಿ ನೋಡಿದಾಗ ಆ ಮನುಷ್ಯ ಕಾಣಲಿಲ್ಲ. ಆಗ ಅಜ್ಜನವರು ಎಲ್ಲದೂ ಸಿದ್ಧಲಿಂಗೇಶ್ವರನ ಪವಾಡ ಎಂದು ತಿಳಿಸಿದರು.

ಮತ್ತೊಂದು ಪವಾಡ ಏನೆಂದರೆ ಮುರಿಗೆಮ್ಮ ಎಂಬ ಹೆಣ್ಣುಮಗಳು ಅಜ್ಜನವರ ಬಳಿ ಬಂದು ನನಗೆ ಜನಿಸಿದ ಮಕ್ಕಳು ಇದ್ದಕ್ಕಿದ್ದ ಹಾಗೆ ನಿಧನವಾಗುವುವು ಅದಕ್ಕೆ ಪರಿಹಾರ ತಿಳಿಸಿರಿ ಎಂದಾಗ, ಅಜ್ಜನವರು ಐದು ಗುರುವಾರ ಯಡಿಯೂರು ಸಿದ್ಧಲಿಂಗೇಶ್ವರರ ಹೆಸರಿಗೆ ನಂದಾ ದೀಪವನ್ನು ಹಚ್ಚಿರಿ ಎಂದು ತಿಳಿಸಿದರು. ಅದೇ ಪ್ರಕಾರ ಮಾಡಿದಾಗ ಆ ಹೆಣ್ಣು ಮಗಳಿಗೆ ಇಬ್ಬರು ಮಕ್ಕಳಾದರು.

ಸಾವಿರಾರು ಅಂಧ, ಅನಾಥ ಮಕ್ಕಳಿಗೆ ಸಕಲ ಸಂಗೀತ ವಿದ್ಯೆಯನ್ನು ಧಾರೆಯೆರೆದು ಅವರಿಗೆಲ್ಲಾ ಅನ್ನಕ್ಕೆ ದಾರಿ ಮಾಡಿಕೊಟ್ಟಂತಹ ಪುಟ್ಟರಾಜ ಗುರುಗಳು ಸಾಕ್ಷಾತ್ ಅನ್ನಪೂರ್ಣೇಶ್ವರಿಯ ವರಪುತ್ರರು ಎಂದರೆ ತಪ್ಪಾಗಲಾರದು. ಬಾಡಾ ಕ್ರಾಸ್‌ನಲ್ಲಿ ವೀರೇಶ್ವರ ಪುಣ್ಯಾಶ್ರಮವನ್ನು ಸ್ಥಾಪಿಸಿರುತ್ತಾರೆ. ಪ್ರಸ್ತುತ ಈ ಆಶ್ರಮವನ್ನು ಪೂಜ್ಯ ಕಲ್ಲಯ್ಯಜ್ಜನವರು ನಡೆಸಿಕೊಂಡು ಬರುತ್ತಿದ್ದಾರೆ.

ಪುಟ್ಟರಾಜ ಗುರುಗಳ ಪುರಾಣ ಪ್ರವಚನ ಕಾರ್ಯಕ್ರಮದ ನೇತೃತ್ವವನ್ನು ವಹಿಸಿಕೊಂಡು ನಡೆಸಿರುತ್ತಾರೆ. ಉದಾ. ಆರ್.ಜಿ. ಗೌರಿಶಂಕರ್, ಧನ್ನೂರ್ ವೀರಸಂಗಯ್ಯ, ನಿಜಲಿಂಗಪ್ಪ ಕಡೇಕೊಪ್ಪ, ಎ.ಹೆಚ್. ತಿಪ್ಪಯ್ಯ ಸ್ವಾಮಿ, ಗೋಪಾಲಪುರದ ವೀರಭದ್ರಪ್ಪ, ಸೋಮಣ್ಣ, ಅಜ್ಜಂಪುರ ಶೆಟ್ರು ಸುಶೀಲಮ್ಮ ಇನ್ನೂ ಮುಂತಾದವರು ಕಾರ್ಯಕ್ರಮ ನಡೆಸಿಕೊಟ್ಟಿರುತ್ತಾರೆ.

ಪ್ರಸ್ತುತ ಪುರಾಣವು ದೊಗ್ಗಳ್ಳಿ ಕೊಟ್ರಪ್ಪನವರ ಕಾಂಪೌಂಡಿನಿಂದ ಚೌಕಿಪೇಟೆಯಲ್ಲಿರುವ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಈಗಾಗಲೇ ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರುತ್ತದೆ. ಸುಶೀಲಮ್ಮನವರ ನಂತರ ಅವರ ಪುತ್ರರಾದ ಎ.ಎಸ್. ಮೃತ್ಯುಂಜಯ (ಅಜ್ಜಂಪುರ ಮುತ್ತಣ್ಣ) ಇವರ ಸಾರಥ್ಯದಲ್ಲಿ ಪುರಾಣ ಕಾರ್ಯಕ್ರಮವು ನಡೆದುಕೊಂಡು ಬಂದಿರುತ್ತದೆ. ಈ ಕಾರ್ಯಕ್ರಮಕ್ಕೆ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿ ಸೇವಾ ಸಂಘದವರು ಮತ್ತು ಶ್ರೀ ಮುರುಘರಾಜೇಂದ್ರ ಸೇವಾ ಸಂಘದವರು ಸಹಕಾರ ನೀಡುತ್ತಾ ಬಂದಿರುತ್ತಾರೆ.

ಪುಟ್ಟರಾಜ ಗುರುಗಳವರ ಪುರಾಣ ಪ್ರವಚನವು 1973ನೇ ಇಸ್ವಿಯಿಂದ ಪ್ರಾರಂಭವಾಗಿ 2024ನೇ ಇಸ್ವಿಗೆ 51 ವರ್ಷಗಳಾದವು. 51 ನೇ ವರ್ಷದ ಪುರಾಣ ಮಹಾದಾಸೋಹಿ ಕಲ್ಬುರ್ಗಿ ಶರಣ ಬಸವೇಶ್ವರರ ಪುರಾಣ ಕಾರ್ಯಕ್ರಮ ನಡೆಯುತ್ತಿದೆ. ಪುಟ್ಟರಾಜ ಗುರುಗಳಿಗೆ ಭಕ್ತರು ಸಾವಿರಾರು ತುಲಾಭಾರದ ಸೇವೆಯನ್ನು ಅರ್ಪಿಸಿ, ಅವರ ಆಶೀರ್ವಾದಕ್ಕೆ ಪಾತ್ರರಾಗಿದ್ದಾರೆ. ಪೂಜ್ಯ ಕಲ್ಲಯ್ಯಜ್ಜನವರಿಗೂ ಕೂಡ ತುಲಾಭಾರದ ಸೇವೆಯನ್ನು ಭಕ್ತರು ಸಮರ್ಪಿಸಿ, ಅವರ ಆಶೀರ್ವಾದಕ್ಕೂ ಪಾತ್ರರಾಗಿದ್ದಾರೆ. 51 ವರ್ಷಗಳ ಪರ್ಯಂತರವಾಗಿ ಪುರಾಣ ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲಾ ಸದ್ಭಕ್ತರಿಗೂ, ದಾನಿಗಳಿಗೂ ಧನ್ಯವಾದಗಳು.

**- ಎಲ್.ಎಂ.ಆರ್. ಬಸವರಾಜಯ್ಯ, ದಾವಣಗೆರೆ.**

# ಕುಂದುಕೊರತೆಗೆ ಸ್ಪಂದಿಸುವ ಕವಿತೆ ಹೊರಹೊಮ್ಮಲಿ

## ಜಗಳೂರಿನ ಜಿಲ್ಲಾ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಚಂದ್ರಶೇಖರ ತಾಳ್ಯ



ಜಗಳೂರು, ಜ.16- ಕವಿಗಳು ಸಮಾಜದ ಕುಂದುಕೊರತೆಗಳಿಗೆ ಸ್ಪಂದಿಸುವ ಜವಾಬ್ದಾರಿಯುತ ಕವಿತೆಗಳನ್ನು ರಚಿಸಬೇಕು ಎಂದು ಸಾಹಿತಿ ಚಂದ್ರಶೇಖರ ತಾಳ್ಯ ಹೇಳಿದರು.

ಎರಡನೇ ದಿನದ 14ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾಗರೂಕ ಬರವಣಿಗೆಯನ್ನು ಕವಿಗಳು ಮೈಗೂಡಿಸಿಕೊಳ್ಳಬೇಕಿದೆ. ಜಾತಿ ವ್ಯವಸ್ಥೆ ಬಿಗಿಯಾಗಿದ್ದು, ದೇಶದಲ್ಲಿ ಮರ್ಯಾದಾ ಹತ್ಯೆ, ಭ್ರೂಣ ಹತ್ಯೆಗಳು ನಡೆಯುತ್ತಿವೆ. ಇದರಿಂದ ಮನಸ್ಸುಗಳು ವಿಕಾರಗೊಳ್ಳುತ್ತಿವೆ ಎಂದರು.

ಲಿಂಗತಾರತಮ್ಯ, ಜಾತೀಯತೆ, ಕೋಮುವಾದ ಹರಡುವ ದೇಶದಲ್ಲಿ ಸಮುದಾಯ ದೃಷ್ಟಿಯಿಂದ ಕವಿತೆಗಳು ಹೆಚ್ಚು ಹೆಚ್ಚು ಹೊರಹೊಮ್ಮಬೇಕಿದೆ ಎಂದು ಹೇಳಿದರು.

ಗೋಷ್ಠಿಯಲ್ಲಿ 20ಕ್ಕೂ ಅಧಿಕ ಕವಿಗಳು ಸ್ವರಚಿತ ಕವಿತೆಗಳನ್ನು ವಾಚಿಸಿದರು.

ಸಂದರ್ಭದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷ ಎ.ಬಿ. ರಾಮಚಂದ್ರಪ್ಪ, ಚುಟುಕು ಸಾಹಿತ್ಯದ ಜಿಲ್ಲಾಧ್ಯಕ್ಷ ರಾಜಶೇಖರ ಗುಂಡಗಟ್ಟಿ, ಕದಳಿ ಮಹಿಳಾ ವೇದಿಕೆ, ಸಿಡಿಪಿಓ ಮೇಲ್ವಿಚಾರಕಿ ಎಚ್.ವಿ ಶಾಂತಮ್ಮ ಇದ್ದರು.

## ಹೊನ್ನಾಳಿ : ಇಂದು ಬೆಸ್ಕಾಂ ಸಭೆ

ಹೊನ್ನಾಳಿ ಬೆಸ್ಕಾಂ ಉಪವಿಭಾಗದ ಕಚೇರಿ ಆವರಣದಲ್ಲಿ ಇಂದು ಮಧ್ಯಾಹ್ನ 3ರಿಂದ 5.30 ರವರೆಗೆ ಗ್ರಾಹಕರ ಸಂವಾದ ಸಭೆಯನ್ನು ಏರ್ಪಡಿಸಲಾಗಿದೆ.

ಗ್ರಾಹಕರು ತಮ್ಮ ಸ್ಥಾವರಕ್ಕೆ ಸಂಬಂಧಿಸಿದಂತೆ ಕುಂದು-ಕೊರತೆ ಬಗ್ಗೆ ಲಿಖಿತ ದೂರು ನೀಡಿ, ಪರಿಹಾರ ಕಂಡುಕೊಳ್ಳಬಹುದು.

# ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಾರಥಿ ಬಿ.ವಾಮದೇವಪ್ಪ ಅವರೀಗ ಅಮೃತ ಪುರುಷ



ಕನ್ನಡ ನಾಡು-ನುಡಿ, ನೆಲ-ಜಲ, ಕಲೆ-ಸಾಹಿತ್ಯ ಸಂಸ್ಕೃತಿಯ ಸೇವೆಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡು ಇತರರಿಗೆ ಸ್ಫೂರ್ತಿಯ ಸೆಲೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ದಾವಣಗೆರೆ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಸಾರ್ಥಕ 75 ಸಂವತ್ಸರಗಳನ್ನು ಪೂರೈಸಿ 'ಅಮೃತ ಪುರುಷ' ಎನ್ನುವ ಹೆಗ್ಗಳಿಕೆಗೆ ಭಾಜನರಾಗುತ್ತಿದ್ದಾರೆ.

ದಿನಾಂಕ 18.01.1950 ರಂದು ದಾವಣಗೆರೆ ತಾಲ್ಲೂಕಿನ ಹಿರೇತೊಗಲೇರಿ ಗ್ರಾಮದ ಶ್ರೀಮತಿ ಗಂಗಮ್ಮ ಮತ್ತು ಬಿ.ಬಸಪ್ಪ ದಂಪತಿಗಳ ಸುಪುತ್ರನಾಗಿ ಜನಿಸಿದ ವಾಮದೇವಪ್ಪ ಅವರು, ಸಿರಿಗೆರೆ ವಿದ್ಯಾಸಂಸ್ಥೆಯಲ್ಲಿ ಸುದೀರ್ಘವಾಗಿ ಶಿಕ್ಷಕರಾಗಿ, ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡದ ಕೆಲಸ, ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸ ಎಂದೊಡನೇ ಈ 75 ರ ಮಾಗಿದ ಜೀವ 25 ರ ನವ ಯುವಕನಂತಾಗಿಬಿಡುತ್ತಾರೆ.

ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮೂರು ವರ್ಷ ಕಳೆಯುವಷ್ಟರಲ್ಲಿ 4 ಜಿಲ್ಲಾ ಸಮ್ಮೇಳನಗಳನ್ನು ಜಿಲ್ಲೆಯ ವಿವಿಧ ಭಾಗಗಳಲ್ಲಿ ಅರ್ಥಪೂರ್ಣವಾಗಿ ಆಯೋಜಿಸುವ ಮೂಲಕ ತಾನೊಬ್ಬ ಸಮರ್ಥ ಅಧ್ಯಕ್ಷ ಎಂದು ಸಾಬೀತುಪಡಿಸಿದ್ದಾರೆ. ಈ ಅವಧಿಯಲ್ಲಿ ಇವರ ಮಾರ್ಗದರ್ಶನದಲ್ಲಿ 7 ತಾಲ್ಲೂಕು ಸಮ್ಮೇಳನಗಳು ನಡೆದಿವೆ ಎಂದರೆ ಇವರ ಸಂಘಟನಾ ಸಾಮರ್ಥ್ಯ ಎಂಥವರಿಗೂ ಅರ್ಥವಾಗುತ್ತದೆ.

ಆತ್ಮೀಯ ವಲಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳ ಸರದಾರ ಎಂದೇ ಪ್ರೀತಿಯಿಂದ ಕರೆಯಲ್ಪಡುವ ಅವರು, ಜನಾನುರಾಗಿ ಮತ್ತು ಕನ್ನಡ-ಕನ್ನಡಿಗ-ಕರ್ನಾಟಕದ ಹಿತರಕ್ಷಣೆಗೆ ಕಂಕಣ ಬದ್ಧರಾಗಿ ಕೆಲಸ ಮಾಡುವ ಸಾತ್ವಿಕ ಮನಸ್ಸಿನವರು. ಪ್ರತಿಷ್ಠಿತ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಗಾದಿಯನ್ನು ಅಲಂಕರಿಸಿದ್ದರೂ ಅದೊಂದು ಕನ್ನಡದ ಕೆಲಸ ಮಾಡಲು ಸಿಕ್ಕಿರುವ ಸುವರ್ಣಾವಕಾಶ ಎಂದು ಭಾವಿಸಿ ವಿನೀತರಾಗಿ ಕೆಲಸ ಮಾಡುತ್ತಿದ್ದಾರೆ. ಎಂದೂ ಸಹ ತಮ್ಮ ಸರಳ, ಸಜ್ಜನಿಕೆ, ಸೃಜನಶೀಲತೆಯನ್ನು ಬಿಟ್ಟುಕೊಟ್ಟವರಲ್ಲ. ಅತ್ಯಂತ ಕ್ರಿಯಾಶೀಲರಾಗಿ ಸಾಹಿತ್ಯ ಪರಿಷತ್ತನ್ನು ಸಮರ್ಥವಾಗಿ ಮುನ್ನಡೆಸುತ್ತಿರುವ ಅವರೀಗ ಅಮೃತ ಪುರುಷರಾಗಿದ್ದಾರೆ. ಅವರು ಇನ್ನಷ್ಟು ಕನ್ನಡದ ಕೆಲಸ ಮಾಡುವ ಅವಕಾಶವನ್ನು ಕನ್ನಡ ತಾಯಿ ಭುವನೇಶ್ವರಿಯು ಕರುಣಿಸಲಿ ಎನ್ನುವುದೇ ಅವರ ಶಿಷ್ಯ ವರ್ಗ ಮತ್ತು ಅಭಿಮಾನಿಗಳ ಆಶಯ.

**- ಕೆ.ರಾಘುವೇಂದ್ರ ನಾಯರಿ**
ಗೌರವ ಕೋಶಾಧ್ಯಕ್ಷ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ.


**ಸೈಟ್ ಬೇಕಾಗಿದೆ**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ಬಡಾವಣೆಯಲ್ಲಿ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 30x56 North, 60x56 North, 30x45 East, 30x40 North, 30x46 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 50x80 South, 40 ಅಡಿ ರೋಡಿಗಿದೆ, 30x40 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪಕ್ಕ, ಗೀತಂ ಕಾಲೇಜ್ ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x40 ಪೂರ್ವ, 28x30 ಪಶ್ಚಿಮ ಅಕ್ಕ-ಪಕ್ಕ 60 ಅಡಿ ರಸ್ತೆಗೆ 30x40 ಪಶ್ಚಿಮ, 30x50 ಪಶ್ಚಿಮ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಬೈಪಾಸ್ ಪಕ್ಕ, ವಿಶ್ವಚೇತನ ಸ್ಕೂಲ್ ಹಿಂಭಾಗ ಸೈಟುಗಳು ಮಾರಾಟಕ್ಕಿವೆ. 30x55 ಉತ್ತರ, 30x40 ದಕ್ಷಿಣ, ದರ - 3400/-
97421 44715

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಸೈಟ್ ಮಾರಾಟಕ್ಕೆ**
ಕರ್ನಾಟಕ ಗೃಹ ಮಂಡಳಿ (KHB) 40X60 ಉತ್ತರ, ಕಮರ್ಷಿಯಲ್ ಆಗುವಂತಹ 120 ಅಡಿ ರಸ್ತೆಗೆ
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x60 East, 50x50 North, 40x60, 40x60 South ಅಕ್ಕ-ಪಕ್ಕ, 80 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ತಕ್ಷಣ ಬೇಕಾಗಿದ್ದಾರೆ**
ಹೋಲ್‌ಸೇಲ್ ದಿನಸಿ ಅಂಗಡಿಯಲ್ಲಿ ಗುಮಾಸ್ತರು ಕಮ್ ಕ್ಯಾಶಿಯರ್ ಹುದ್ದೆಗೆ ಬೇಕಾಗಿದ್ದಾರೆ. ಮಹಿಳೆಯರಿಗೂ ಆದ್ಯತೆ ನೀಡಲಾಗುವುದು.
94483 40880

**ಹುಡುಗರು ಬೇಕಾಗಿದ್ದಾರೆ**
ಶ್ರೀ ಮಂಜುನಾಥಸ್ವಾಮಿ ಆಟೋಮೊಬೈಲ್ಸ್
ಕೆಲಸ ಮಾಡಲು ಹುಡುಗರು & ಡ್ರೈವರ್‌ಗಳು ಬೇಕಾಗಿದ್ದಾರೆ. ದಾವಣಗೆರೆ.
98800 56262

**WANTED**
Good looking Receptionist/ assistant therapist with good Communication skills,
NAVACHETHANA WELLNESS CENTER
MCC "B" block Davangere.
99726 00713

**ತಕ್ಷಣ ಬೇಕಾಗಿದ್ದಾರೆ**
28 ವರ್ಷದೊಳಗಿನ ದಾವಣಗೆರೆ ನಿವಾಸಿ ನರ್ಸಿಂಗ್/ಪದವೀಧರ ರೆಸೆಪ್ಷನಿಸ್ಟ್/ ಸಹಾಯಕ ಥೆರಪಿಸ್ಟ್ ಬೇಕಾಗಿದ್ದಾರೆ.
ನವಚೇತನ ವೆಲ್‌ನೆಸ್ ಸೆಂಟರ್
ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
99726 00713

**ಮನೆ ಬಾಡಿಗೆಗೆ ಇದೆ**
2 BHK, ಸೋಲಾರ್, ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಆವರಗೆರೆ ಆರ್.ಬಿ. ಬಡಾವಣೆಯಲ್ಲಿ ಹೊಂಡೈ ಶೋರೂಂ ಹಿಂಭಾಗ ಬಾಡಿಗೆಗೆ ಇದೆ.
ಮೊ: 80882 92977

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಮಳಿಗೆಗಳು ಬಾಡಿಗೆಗಿವೆ**
ಶ್ರೀ ಸಿದ್ದೇಶ್ವರ ಕಾಂಪ್ಲೆಕ್ಸ್ #116/2G/2H/68A ಆದರ್ಶ ಶಾಮಿಯಾನ ಹತ್ತಿರ, ತ್ರಿಶೂಲ್ ರಸ್ತೆ, KB ಬಡಾವಣೆ, ದಾವಣಗೆರೆ. ನೆಲಮಹಡಿ 10x11 ಚ.ಅಡಿ, 35x25 ಚ.ಅಡಿ. ಅಳತೆಯ 2 ಮಳಿಗೆಗಳು ಹಾಗೂ 1ನೇ ಮಹಡಿಯಲ್ಲಿ 35x25 ಚ.ಅಡಿ. ಅಳತೆಯ 1 ಮಳಿಗೆ ಬಾಡಿಗೆಗೆ ಇದೆ.
99165 25586

**ಬೇಕಾಗಿದ್ದಾರೆ**
ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ. ಸ್ವವಿವರದೊಂದಿಗೆ ಸಂಪರ್ಕಿಸಿ
ಎ.ಕೆ. ಟ್ರೇಡರ್ಸ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**SMART CITY CABS DAVANAGERE**
Minimum 4 km Rs - 99/-
Above per km Rs - 25/-
waiting charges per hours Rs - 100/-
and 24 service will be available.
08192 255555
94811 79933, 99868 18205

**ಮನೆ ಬಾಡಿಗೆಗೆ ಇದೆ**
2BHK ನೆಲ ಮಹಡಿ, 3BHK 2ನೇ ಮಹಡಿ, ಮುನ್ಸಿಪಲ್ /ಬೋರ್ ವ್ಯವಸ್ಥೆ ಇದೆ. #686, ಶ್ರೀ ರಾಮ ನಿವಾಸ, PJ ಬಡಾವಣೆ 8ನೇ ಮುಖ್ಯ ರಸ್ತೆ, ದಾವಣಗೆರೆ. ಲೂರ್ಡ್ಸ್ ಬಾಯ್ಸ ಶಾಲೆ ಹತ್ತಿರ.
8792662185, 9632555910

**ಸೈಟು ಮಾರಾಟಕ್ಕಿದೆ**
30x40 ಉತ್ತರ, 30x30 ದಕ್ಷಿಣ, ಹೊಸ ಸರ್ ಎಂ.ವಿ ಕಾಲೇಜು ಹಿಂಭಾಗ
77600 70828

**ಸಿಸಿ ಟಿವಿ ಕೆಲಸಕ್ಕೆ ಎಲೆಕ್ಟ್ರೀಷಿಯನ್ಸ್ ಹುಡುಗರು ಬೇಕಾಗಿದ್ದಾರೆ**
R COMPUTERS
ಡೆಂಟಲ್ ಕಾಲೇಜ್ ರಸ್ತೆ, ಹೋಟೆಲ್ ಸರೋವರ ಹತ್ತಿರ, ಎಂಸಿಸಿ ಬಿ ಬ್ಲಾಕ್, ದಾವಣಗೆರೆ-4.
8722113803 9611877204

**WANTED TEACHERS**
B.Sc - 2
BA / B.Sc / B.Com - 1
Computer Teacher - 1
SRP CONVENT
17th Cross Anjaneya Layout, Dvg
95903 99449, 91136 31266

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮನೆ ಬಾಡಿಗೆಗೆ ಇದೆ**
ಡಾಲರ್ಸ್ ಕಾಲೋನಿ, ತಿಮ್ಮಾರೆಡ್ಡಿ ಕಾಲೇಜ್ ಹತ್ತಿರ, ಪಾರ್ಕ್ ಹಿಂಭಾಗದಲ್ಲಿರುವ #545/164, 2 ಬೆಡ್ ರೂಂ , ಅಟ್ಯಾಚ್ ಬಾತ್ ರೂಂ ಮತ್ತು ಇಟಾಲಿಯನ್ ಕಿಚನ್ ಇರುವ 1ನೇ ಮಹಡಿ ಮನೆ ಬಾಡಿಗೆಗೆ ಇದೆ.
99800 96866

**Reputed Footware Company showroom**
Requires Sales Executuve-1 Post.
Qual : SSLC/PUC
LIBERTY SHOES LTD.,
Opp. SS mall, Shamanur Road, Davangere.
+91 73530 31465

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**ಹೋಟೆಲ್ ಫುಡೀಸ್‌ಗೆ ಬೇಕಾಗಿದ್ದಾರೆ**
ವೈಟರ್, ಸ್ಟೀವರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ಪಾರ್ಟ್ ಟೈಂ, ಫುಲ್ ಟೈಂ. ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪ ಹತ್ತಿರ, ದಾವಣಗೆರೆ.
98861 56688

**ಸೈಟ್ ಮಾರಾಟಕ್ಕಿದೆ**
ಉತ್ತರಾಭಿಮುಖ 29.5 x70=2065 feet ಎಸ್.ಎಸ್. ಲೇಔಟ್, ಬಿ ಬ್ಲಾಕ್, ಇಂಡೋರ್ ಸ್ಟೇಡಿಯಂ ಹಿಂಭಾಗ
74119 19668

**ಗೋಡೌನ್ ಬಾಡಿಗೆಗಿದೆ**
ಬಂಬೂ ಬಜಾರ್‌ನ VRL ಟ್ರಾನ್ಸ್ ಪೋರ್ಟ್ ಹಿಂಭಾಗ, 29hp ಪವರ್‌ವುಳ್ಳ 65x35 ಅಡಿ ಗೋಡೌನ್ ಬಾಡಿಗೆಗಿದೆ.
98440 00354

**ಮನೆ ಬಾಡಿಗೆಗೆ ಇದೆ**
1BHK ಗ್ರೌಂಡ್ ಫ್ಲೋರ್ ಮನೆ, ದಾವಣಗೆರೆ ಗಣೇಶ್ ಲೇಔಟ್, ಹೊಸ ಬಸ್ ನಿಲ್ದಾಣದ ಹಿಂಭಾಗ, ಮೆಡ್‌ಪ್ಲಸ್ ಔಷಧಿ ಅಂಗಡಿ ಪಕ್ಕ ಮನೆ ಬಾಡಿಗೆಗೆ ಇದೆ. ರೆಸಿಡೆನ್ಸಿ ಹಾಗೂ ಕಮರ್ಷಿಯಲ್ ಉಪಯೋಗಕ್ಕೆ ಸೌಲಭ್ಯವಿದೆ.
90088 39722

**ಬೇಕಾಗಿದ್ದಾರೆ**
ಚಿಕ್ಕಪೇಟೆ ದೊನ್ನೆ ಬಿರಿಯಾನಿ ಹೋಟೆಲ್‌ನಲ್ಲಿ ಕ್ಲೀನರ್ & ಸಪ್ಲೈಯರ್, ಭಟ್ಟರು ಬೇಕಾಗಿದ್ದಾರೆ.
98448 58461, 7676979162

**ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ**

**ಸೈಟುಗಳು ಮಾರಾಟಕ್ಕಿವೆ**
B.I.E.T. College ರಸ್ತೆ, ಹಾಗೂ ಹೇಮಾವತಿ ಹಾಸ್ಟೆಲ್ ಎದುರು 3,200 ಅಡಿ ಅಳತೆಯ ಕಮರ್ಷಿಯಲ್ Corner ಸೈಟು ಮಾರಾಟಕ್ಕಿದೆ. ಈ ಸೈಟಿನಲ್ಲಿ ಸುಮಾರು ರೂ. 50,000/- ಬಾಡಿಗೆ ಬರುತ್ತಿದೆ ಹಾಗೂ ಎಂ.ಸಿ.ಸಿ. 'ಬಿ' ಬ್ಲಾಕ್‌ನ ಹಾರ್ಟ್ ಹಾಸ್ಪಿಟಲ್ ರಸ್ತೆಗೆ ಪೂರ್ವಮುಖವಾಗಿ 47x60 ಅಡಿ ಅಳತೆ ಇದ್ದು, ಸೊತ್ತಿನ ದಾಖಲೆಯಲ್ಲಿ ಕಡಿಮೆ ಇರುತ್ತದೆ. ದಾಖಲೆಯಲ್ಲಿ ತೋರಿಸಿದ ಅಳತೆಗೆ ವ್ಯಾಪಾರಕ್ಕೆ ಕೊಡಲಾಗುತ್ತದೆ. ಸಂಪರ್ಕಿಸಿ.
Mohan Real Estate Agencies.
97424 34049

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**ಮನೆ ಮಾರಾಟಕ್ಕಿದೆ**
ಸಂಪರ್ಕಿಸಿ :
98866 51322

**ಅಡಿಕೆ ಸಸಿಗಳು ಬೇಕಾಗಿದೆ**
ಎರಡು ವರ್ಷದ ಅಡಿಕೆ ಸಸಿಗಳು ಉತ್ತಮವಾಗಿರುವ 15 ರೂಪಾಯಿ ಒಳಗಿನ ಸಸಿಗಳು ಬೇಕಾಗಿರುತ್ತವೆ.
63661 92616

**WANTED**
Lady Worker for Office Computer Work
91649 23589

**ಮನೆ ಮತ್ತು ರೂಮ್ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರಿನಲ್ಲಿ ಸಿಂಗಲ್ ಬೆಡ್ ರೂಮ್ ಮನೆ ಮತ್ತು ರೂಮ್ ಸಸ್ಯಹಾರಿಗಳಿಗೆ ಬಾಡಿಗೆಗೆ ಇದೆ.
94499 42404, 79751 07721

**ಹೋಟೆಲ್ ಮಳಿಗೆ ಬಾಡಿಗೆಗೆ ಇದೆ**
ಕೊಂಡಜ್ಜಿ ರಸ್ತೆ, ದೇವನಗರಿ ಗ್ಯಾಸ್ ಗೋಡೌನ್ ಎದುರು, ಅಶೋಕ ನಗರ, ದಾವಣಗೆರೆ.
98458 85671

**1946 ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ.
ಸ್ಥಳ : 1946 ಪ್ರಕಾಶ್ ಕಾಫಿ ವರ್ಕ್ಸ್ ದಾವಣಗೆರೆ.
99004 38052, 97401 53513

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**FOR LEASE / RENT**
20000 Sqft of open land
5000 Sqft of Godown with power, water, safety walls available for Industry / Commercial purpose.
97403 10044

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ. 1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ, ಲೈಂಗಿಕ, ದಾಂಪತ್ಯ ಸಮಸ್ಯೆ, ನೀವು ಇಷ್ಟ ಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ :
ಗಾಂಧಿ ಸರ್ಕಲ್, ದಾವಣಗೆರೆ
89716 99826

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್, ಕಿಟಕಿಗೆ ಫೈಬರ್ ವೆಲ್ಕ್ರೊ ಮೆಶ್ ಮತ್ತು ಅಲ್ಯುಮಿನಿಯಂ ಫ್ರೇಮ್ stainless steel ಸೊಳ್ಳೆಮೆಶ್ ಹಾಕಲಾಗುವುದು.
Swapna cushion work
Maharaj pet DVG
98445- 81966

## ಗಾಜಾ : ಕದನಕ್ಕಷ್ಟೇ ವಿರಾಮ, ಜನರ ಸಂಕಷ್ಟಕ್ಕೆ ಅಲ್ಲ

# ದಿಗ್ಬಂಧನ ಮುಂದುವರೆದರೆ ಶತಮಾನ ಉರುಳಿದರೂ ಮರುನಿರ್ಮಾಣ ಅಸಾಧ್ಯ



ಡೀರ್ ಅಲ್ - ಬಲಾ, ಜ.17-ಇಸ್ರೇಲ್ ಹಾಗೂ ಹಮಾಸ್ ಕದನ ವಿರಾಮಕ್ಕೆ ಒಪ್ಪಿರುವ ಹಿನ್ನೆಲೆಯಲ್ಲಿ ಗಾಜಾ ಪಟ್ಟಿಗೆ ಮರಳಲು ಪ್ಯಾಲೆಸ್ತೀನ್ ಜನರು ತವಕಿತರಾಗಿದ್ದಾರೆ. ಆದರೆ, ಗಾಜಾದಲ್ಲಿ ಈಗ ಉಳಿದಿರುವುದಾದರೂ ಏನು ಹಾಗೂ ಗಾಜಾ ಮರು ನಿರ್ಮಾಣ ಸಾಧ್ಯವೇ? ಎಂಬ ಪ್ರಶ್ನೆಗಳು ಕಾಡುತ್ತಿವೆ.

ಇಸ್ರೇಲ್ ಬಾಂಬ್ ದಾಳಿ ಹಾಗೂ ಕಾರ್ಯಾಚರಣೆಗಳ ಕಾರಣದಿಂದಾಗಿ ಗಾಜಾ ನಗರಗಳು ನೆಲಸಮವಾಗಿವೆ. ಕಟ್ಟಡಗಳು ದಾಳಿಗೆ ಸಿಲುಕಿ ದುರ್ಬಲವಾಗಿವೆ ಹಾಗೂ ಎಲ್ಲಾ ಕಡೆ ಅವಶೇಷಗಳು ಹರಡಿವೆ.

ಪ್ರಮುಖ ರಸ್ತೆಗಳನ್ನು ಅಗೆಯಲಾಗಿದೆ. ನೀರು ಹಾಗೂ ವಿದ್ಯುತ್, ಮೂಲಭೂತ ಸೌಕರ್ಯಗಳು ನೆಲಸಮಗೊಂಡಿವೆ. ಬಹುತೇಕ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿಲ್ಲ.

ಗಾಜಾ ಮರು ನಿರ್ಮಾಣ ಸಾಧ್ಯವೇ? ಅಥವಾ ಮರು ನಿರ್ಮಾಣಕ್ಕೆ ಮುಂದಾದರೂ ಅದು ಎಷ್ಟರ ಮಟ್ಟಿಗೆ ಫಲ ನೀಡಲಿದೆ? ಎಂಬ ಪ್ರಶ್ನೆಗಳು ಕಾಡುತ್ತಿವೆ. ಹಂತ ಹಂತವಾಗಿ ಕದನ ವಿರಾಮ ಜಾರಿಗೆ ತರಲು ಹಾಗೂ ಹಮಾಸ್ ಉಗ್ರರ ವಶದಲ್ಲಿರುವ ಇಸ್ರೇಲಿ ನಾಗರಿಕರನ್ನು ಬಿಡುಗಡೆ ಮಾಡಲು ಒಪ್ಪಂದಕ್ಕೆ ಬರಲಾಗಿದೆ.

ಆದರೆ, ಯುದ್ಧದ ನಂತರ ಗಾಜಾ ಆಡಳಿತ ಯಾರು ನೋಡಿಕೊಳ್ಳುತ್ತಾರೆ ಎಂಬುದು ಸ್ಪಷ್ಟವಾಗಿಲ್ಲ. 2007ರಲ್ಲಿ ಹಮಾಸ್ ಅಧಿಕಾರ ವಹಿಸಿಕೊಂಡ ನಂತರ ಗಾಜಾದ ಮೇಲೆ ಇಸ್ರೇಲ್ ಹಾಗೂ ಈಜಿಪ್ಟ್ ದಿಗ್ಬಂಧನ ಹೇರಿದ್ದವು. ಇದರಿಂದಾಗಿ ಗಾಜಾ ಜನರ ಸಂಚಾರಕ್ಕೆ ಅಡ್ಡಿಯಾಗಿದೆ. ಈ ಅಡ್ಡಿಗಳನ್ನು ತೆರವುಗೊಳಿಸುವ ಬಗ್ಗೆಯೂ ಸ್ಪಷ್ಟತೆ ಇಲ್ಲ. ಈ ನಿರ್ಬಂಧಗಳು ಮುಂದುವರೆದರೆ ಗಾಜಾ ಮರು ನಿರ್ಮಾಣಕ್ಕೆ 350ಕ್ಕೂ ಹೆಚ್ಚು ವರ್ಷಗಳು ಬೇಕಾಗಲಿವೆ ಎಂದು ವಿಶ್ವಸಂಸ್ಥೆ ತಿಳಿಸಿದೆ. ಯುದ್ಧ ಅಂತ್ಯಗೊಂಡ ನಂತರವೇ ಗಾಜಾದಲ್ಲಿ ಆಗಿರುವ ಹಾನಿ ಎಷ್ಟು ಎಂಬುದನ್ನು ಅಂದಾಜಿಸಲು ಸಾಧ್ಯವಾಗಲಿದೆ. ಉತ್ತರ ಗಾಜಾದಲ್ಲಿ ಅತಿ ಹೆಚ್ಚಿನ ಹಾನಿಯಾಗಿದೆ.

ಗಾಜಾದಲ್ಲಿರುವ ಶೇಕಡ 69 ರಷ್ಟು ಕಟ್ಟಡಗಳಿಗೆ ಹಾನಿಯಾಗಿದೆ ಎಂದು ವಿಶ್ವಸಂಸ್ಥೆ ಉಪಗ್ರಹಗಳ ಮೂಲಕ ದೊರೆತ ಮಾಹಿತಿಯಿಂದ ತಿಳಿಸಿತ್ತು. 2.45 ಲಕ್ಷ ಮನೆಗಳಿಗೆ ಹಾನಿಯಾಗಿದೆ. ವಿಶ್ವ ಬ್ಯಾಂಕ್ ಅಂದಾಜಿನ ಪ್ರಕಾರ 18.5 ಶತ ಕೋಟಿ ಡಾಲರ್‌ಗಳ ನಷ್ಟವಾಗಿದೆ. ಇದು 2022 ರಲ್ಲಿ ಪಶ್ಚಿಮ ದಂಡೆ ಹಾಗೂ ಗಾಜಾ ಎರಡರ ಒಟ್ಟಾರೆ ಆರ್ಥಿಕ ಉತ್ಪನ್ನವಾಗಿದೆ.

ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದ್ದ ಹಮಾಸ್ 1200ಕ್ಕೂ ಹೆಚ್ಚು ನಾಗರಿಕರನ್ನು ಹತ್ಯೆಗೈದಿತ್ತು ಹಾಗೂ 250 ಜನರನ್ನು ಅಪಹರಿಸಿತ್ತು. ಈ ಕಾರಣದಿಂದಾಗಿ ಸಮರ ಆರಂಭವಾಗಿತ್ತು. ಈ ಸಮರಕ್ಕೆ ಹಮಾಸ್ ಹೊಣೆ ಎಂದು ಇಸ್ರೇಲ್ ಆರೋಪಿಸಿತ್ತು. ಇಸ್ರೇಲ್ ನಡೆಸಿದ ಮರು ದಾಳಿಯಲ್ಲಿ ಪ್ಯಾಲೆಸ್ತೀನಿನ 46,000 ಜನ ಸಾವನ್ನಪ್ಪಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ತಿಳಿಸಿದೆ. ಇವರಲ್ಲಿ ಹೋರಾಟಗಾರರ ಸಂಖ್ಯೆ ಎಷ್ಟು ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಆದರೆ ತಾನು 17,000 ಉಗ್ರರನ್ನು ಹೊಡೆದುರುಳಿಸಿರುವುದಾಗಿ ಇಸ್ರೇಲ್ ಹೇಳುತ್ತಿದೆ. ಇದಕ್ಕೆ ಯಾವುದೇ ಸಾಕ್ಷಿ ಒದಗಿಸಿಲ್ಲ. ಹಮಾಸ್ ವಸತಿ ಪ್ರದೇಶಗಳಲ್ಲಿ ಸುರಂಗ ಹಾಗೂ ರಾಕೆಟ್ ಲಾಂಚರ್ ಗಳನ್ನು ಅಳವಡಿಸಿರುವ ಬಗ್ಗೆ ಇಸ್ರೇಲ್ ಸೈನ್ಯ ಹಲವು ಚಿತ್ರ ಹಾಗೂ ವಿಡಿಯೋಗಳನ್ನು ಬಿಡುಗಡೆ ಮಾಡಿತ್ತು. ಮನೆಗಳು, ಶಾಲೆಗಳು ಹಾಗೂ ಮಸೀದಿಗಳಿಂದಲೂ ಹಮಾಸ್ ದಾಳಿ ನಡೆಸುತ್ತಿದೆ ಎಂದು ತಿಳಿಸಿತ್ತು.

ಗಾಜಾ ಮರು ನಿರ್ಮಾಣಕ್ಕೆ ಮುಂಚೆ ಅವಶೇಷಗಳನ್ನು ತೆರವುಗೊಳಿಸುವುದೇ ದೊಡ್ಡ ಸಾಹಸವಾಗಿದೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ. ಅವಶೇಷಗಳ ಪ್ರಮಾಣ ಗೀಜಾದಲ್ಲಿರುವ ಬೃಹತ್ ಪಿರಮಿಡ್‌ಗಿಂತ 12 ಪಟ್ಟು ಹೆಚ್ಚಾಗಿದೆ. ಪ್ರತಿದಿನ 100 ಲಾರಿಗಳು ನಿರಂತರವಾಗಿ ಕಾರ್ಯನಿರ್ವಹಿಸಿದರೂ ಅವಶೇಷ ತೆರವುಗೊಳಿಸಲು 15 ವರ್ಷಗಳು ಬೇಕಾಗಲಿವೆ.

ಅಲ್ಲದೆ ಅವಶೇಷಗಳಲ್ಲಿ ಸ್ಫೋಟಕ ಹಾಗೂ ಹಾನಿಕಾರಕ ವಸ್ತುಗಳು ಸೇರಿಕೊಂಡಿವೆ. ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಹಲವರು ಮೃತಪಟ್ಟಿದ್ದು ಅವರ ಮೃತದೇಹಗಳು ಅವಶೇಷಗಳಲ್ಲಿ ಸಿಲುಕಿವೆ ಎಂದು ಗಾಜಾ ಆರೋಗ್ಯ ಸಚಿವಾಲಯ ತಿಳಿಸಿದೆ.

ಅವಶೇಷಗಳ ತೆರವು ಹಾಗೂ ಮರು ನಿರ್ಮಾಣಕ್ಕಾಗಿ ಶತಕೋಟಿಗಳ ಡಾಲರ್ ಅಗತ್ಯವಿದೆ. ಗಾಜಾಗೆ ಬೃಹತ್ ಪ್ರಮಾಣದ ಕಟ್ಟಡ ನಿರ್ಮಾಣ ಸಾಮಗ್ರಿ ಹಾಗೂ ಉಪಕಾರ ಉಪಕರಣಗಳನ್ನು ತರಬೇಕಿದೆ. ಇದಕ್ಕೆ ಯಾವ ರೀತಿಯ ವ್ಯವಸ್ಥೆ ಮಾಡಲಾಗುವುದು ಎಂಬ ಸ್ಪಷ್ಟತೆ ಇಲ್ಲ.

ಹಮಾಸ್ ಉಗ್ರರ ವಶದಲ್ಲಿರುವ ನೂರು ಒತ್ತೆಯಾಳುಗಳ ಬಿಡುಗಡೆ ಹಾಗೂ ಗಾಜಾದಿಂದ ಇಸ್ರೇಲ್ ಪಡೆಗಳು ಹಿಂದೆ ಸರಿದ ನಂತರ ಕದನ ವಿರಾಮದ ಅಂತಿಮ ಹಂತ ಆರಂಭವಾಗಲಿದೆ.

ನಂತರದಲ್ಲಿ ಮೂರರಿಂದ ಐದು ವರ್ಷಗಳ ವರೆಗೆ ಮರು ನಿರ್ಮಾಣಕ್ಕೆ ಯೋಚಿಸಲಾಗಿದೆ. ಆದರೆ ಕದನ ವಿರಾಮದ ಕಠಿಣ ಅಂಶಗಳಿಗೆ ಇನ್ನೂ ಸಹಮತ ಮೂಡಬೇಕಿದೆ.

ಗಾಜಾದಲ್ಲಿ ಮೇಲೆ ದಿಗ್ಬಂಧನ ಹೇರಿರುವುದು ದೊಡ್ಡ ಸವಾಲಾಗಿದೆ. ಹಮಾಸ್ ಈ ಭಾಗದಲ್ಲಿ ತನ್ನ ಸೈನಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳುವುದನ್ನು ತಡೆಯಲು ನಿರ್ಬಂಧ ಹೇರಿರುವುದಾಗಿ ಇಸ್ರೇಲ್ ತಿಳಿಸಿದೆ. ಸಿಮೆಂಟ್ ಹಾಗೂ ಲೋಹದ ಕೊಳವೆಗಳನ್ನೂ ಸಹ ಸುರಂಗ ಹಾಗೂ ರಾಕೆಟ್ ನಿರ್ಮಾಣಕ್ಕೆ ಬಳಸಬಹುದಾಗಿದೆ ಎಂದು ಇಸ್ರೇಲ್ ಹೇಳುತ್ತಿದೆ.

ಹಮಾಸ್ ಅಧಿಕಾರದಲ್ಲಿ ಇರದೇ ಇದ್ದರೆ ನಿರ್ಬಂಧ ತೆರವುಗೊಳಿಸಲು ಇಸ್ರೇಲ್ ಆಸಕ್ತಿ ತೋರಬಹುದು. ಆದರೆ ಪರ್ಯಾಯ ಸರ್ಕಾರಕ್ಕೆ ಪ್ರಸಕ್ತ ಯಾವುದೇ ಯೋಜನೆಗಳು ಕಂಡು ಬರುತ್ತಿಲ್ಲ. ಅರಬ್ ದೇಶಗಳ ಬೆಂಬಲದೊಂದಿಗೆ ಪಶ್ಚಿಮದಂಡೆ ಹಾಗೂ ಗಾಜಾ ಆಡಳಿತಕ್ಕೆ ಪ್ಯಾಲೆಸ್ತೀನ್ ಪ್ರಾಧಿಕಾರ ರಚಿಸುವ ಬಗ್ಗೆ ಅಮೆರಿಕ ಹಾಗೂ ಅಂತರರಾಷ್ಟ್ರೀಯ ಸಮುದಾಯಗಳು ಒಲವು ಹೊಂದಿವೆ.

ಆದರೆ ಪ್ಯಾಲೆಸ್ತೀನ್ ದೇಶ ರಚನೆಯನ್ನು ಇಸ್ರೇಲ್ ಸರ್ಕಾರ ವಿರೋಧಿಸುತ್ತಿದೆ. ಗಾಜಾದಲ್ಲಿ ಪಶ್ಚಿಮ ದೇಶಗಳ ಬೆಂಬಲದ ಪ್ರಾಧಿಕಾರ ರಚನೆಯ ಸಾಧ್ಯತೆಯನ್ನು ತಳ್ಳಿ ಹಾಕಿದೆ.

ಆಡಳಿತ ರಹಿತವಾದ ಪ್ರದೇಶಕ್ಕೆ ನೆರವು ನೀಡಲು ಅಂತರರಾಷ್ಟ್ರೀಯ ದಾನಿಗಳು ಒಲವು ತೋರದೇ ಇರಬಹುದು. ಕಳೆದ ಎರಡು ದಶಕಗಳಲ್ಲಿ ಈ ಭಾಗದಲ್ಲಿ 5 ಸಮರಗಳು ನಡೆದಿವೆ. ಹೀಗಾಗಿ ಗಾಜಾ ಮರು ನಿರ್ಮಾಣ ಸುಲಭದ ಹಾದಿಯಲ್ಲ.

## ಜಗಳೂರು: ನೂತನ ಸಿಪಿಐ ಹೆಚ್. ಎಸ್.ರಾಷ್ಟ್ರಪತಿ ಅಧಿಕಾರ ಸ್ವೀಕಾರ



ಜಗಳೂರು, ಜ. 17 - ಪಟ್ಟಣದ ಪೊಲೀಸ್ ಠಾಣೆಯ ನೂತನ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಹೆಚ್.ಎಸ್.ರಾಷ್ಟ್ರಪತಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಸಿಪಿಐ ಶ್ರೀನಿವಾಸ್ ಅವರ ವರ್ಗಾವಣೆಯಿಂದ ಸ್ಥಾನ ತೆರವಾಗಿತ್ತು. ಹೆಚ್. ಎಸ್.ರಾಷ್ಟ್ರಪತಿ ಹಿಂದೆ ಲೋಕಾಯುಕ್ತ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

## ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿಯಾದ ಬಿ.ಹೆಚ್. ವೀರಭದ್ರಪ್ಪ



ದಾವಣಗೆರೆ, ಜ. 17 - ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ಘಟಕದ ಜಿಲ್ಲಾಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೆಂಗಳೂರಿನ ಅವರ ಗೃಹ ಕಚೇರಿಯಲ್ಲಿ ಭೇಟಿ ಮಾಡಿ ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಲು ಅವರಿಗೆ ಮನವಿ ಸಲ್ಲಿಸಿದರು.

## ಇಂದು ಮಕ್ಕಳ ಕಲ್ಯಾಣ ಕಾರ್ಯಕ್ರಮ

ಗೌತಮ ಶಾಖಾ, ದಾವಣಗೆರೆ ಭಾರತ ವಿಕಾಸ ಪರಿಷದ್ ನಿಂದ ದಾವಣಗೆರೆಯ ಮಾಗನೂರು ಬಸಪ್ಪ ಪ್ರೌಢಶಾಲೆಯಲ್ಲಿ ಇಂದು ಬೆಳಿಗ್ಗೆ 10.30ರಿಂದ ಮಕ್ಕಳ ಕಲ್ಯಾಣ ಕಾರ್ಯಕ್ರಮ ನಡೆಯಲಿದೆ. 'ಇಂದಿನ ಮಕ್ಕಳು ಎದುರಿಸುತ್ತಿರುವ ಸವಾಲುಗಳು' ವಿಷಯದ ಬಗ್ಗೆ ಹಿರಿಯ ವ್ಯಾಪಾರ ವಿಶ್ಲೇಷಕರು ಭಾರತ್ ವೊಡೋನ್ ಮಾತನಾಡುವರು.

## ನಂದಿತಾವರೆ ಪಿಎಸಿಎಸ್ ಅಧ್ಯಕ್ಷರಾಗಿ ಎನ್.ಪಿ. ಶಿವನಗೌಡ



ಮಲೇಬೆನ್ನೂರು, ಜ. 17 - ನಂದಿತಾವರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎನ್.ಪಿ. ಶಿವನಗೌಡ ಮತ್ತು ಉಪಾಧ್ಯಕ್ಷರಾಗಿ ಎ.ಕೆ. ನಾಗಪ್ಪ ಇವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಹಕಾರ ಅಭಿವೃದ್ಧಿ ಅಧಿಕಾರಿ ಸುನೀತ ಚುನಾವಣಾಧಿಕಾರಿಯಾಗಿದ್ದರು.

ಸಂಘದ ಎಲ್ಲಾ ನಿರ್ದೇಶಕರು, ನಂದಿತಾವರೆ, ಎಕ್ಕೆಗೊಂದಿ, ಬ್ಯಾಲದಹಳ್ಳಿ ಗ್ರಾಮಸ್ಥರು ಈ ವೇಳೆ ಹಾಜರಿದ್ದು ನೂತನ ಅಧ್ಯಕ್ಷ-ಉಪಾಧ್ಯಕ್ಷರನ್ನು ಅಭಿನಂದಿಸಿದರು. ಸಂಘದ ಸಿಇಓ ಕೆ.ಜಿ.ಬಸಮ್ಮ ಸ್ವಾಗತಿಸಿದರು.

## ಓದುಗರ ಪತ್ರ

### ಕೆಪಿಎಸ್‌ಸಿ ಲೋಪಗಳಿಗೆ ಕಡಿವಾಣ ಬೀಳಲಿ

ಮಾನ್ಯರೇ,

ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ವಿವಿಧ ಖಾಲಿ ಹುದ್ದೆಗಳಿಗೆ ಭರ್ತಿ ಸಂಬಂಧಿಸಿದ ಸ್ಪರ್ಧಾತ್ಮಕ ಪರೀಕ್ಷೆಗಳು ಇತ್ತೀಚೆಗೆ ಲೋಪ ದೋಷಗಳಿಂದ ಕೂಡಿರುವುದು ಅತ್ಯಂತ ಬೇಸರದ ಸಂಗತಿ.

ಸರ್ಕಾರಿ ನೌಕರಿ ಗಿಟ್ಟಿಸಿಕೊಳ್ಳಲೇ ಬೇಕು ಎಂದು ಬಹು ವರ್ಷಗಳಿಂದ ಕಠಿಣ ವಿದ್ಯಾಭ್ಯಾಸ ಮಾಡಿ ಪರೀಕ್ಷೆಗಳನ್ನು ಎದುರಿಸುವ ವಿವಿಧ ಹುದ್ದೆಗಳ ಉದ್ಯೋಗಾಕಾಂಕ್ಷಿಗಳನ್ನು ಇಂದು ಗೊಂದಲಪೂರಿತ ಪ್ರಶ್ನೆಗಳು ಹಾಗೂ ಭಾಷಾಂತರದ ದೋಷಗಳು ವಿಚಲಿತರನ್ನಾಗುವಂತೆ ಮಾಡಿವೆ.

ಉದ್ಯೋಗದ ಕನಸಿನ ಬೆನ್ನೇರಿ ನಾಡಿನ ಲಕ್ಷಾಂತರ ನಿರುದ್ಯೋಗಿಗಳು ಬರೆಯುವ ಪರೀಕ್ಷೆಗಳು ಪಾರದರ್ಶಕ ಹಾಗೂ ವಿಶ್ವಾಸಾರ್ಹವಾಗಿರಬೇಕಾಗುತ್ತದೆ. ಆದರೆ ವಿವಿಧ ಆಯಾಮಗಳ ಮೂಲಕ ಪರೀಕ್ಷೆಗಳನ್ನು ನಡೆಸಿ ನೇಮಕಾತಿ ಮಾಡುವ ಸಾಂವಿಧಾನಿಕ ಅಧಿಕಾರ ಹೊಂದಿರುವ ಲೋಕಸೇವಾ ಆಯೋಗದ ಇತ್ತೀಚಿನ ಕಾರ್ಯವೈಖರಿಗಳು ಉದ್ಯೋಗಾಕಾಂಕ್ಷಿಗಳ ಮತ್ತು ಸಾರ್ವಜನಿಕವಾಗಿ ಟೀಕೆಗಳಿಗೆ ಗುರಿಯಾಗುತ್ತಿರುವುದು ಅತ್ಯಂತ ವಿಷಾದದ ಸಂಗತಿ.

ಈಗಲಾದರೂ ಕರ್ನಾಟಕ ಲೋಕಸೇವಾ ಆಯೋಗವು ತನ್ನ ತಪ್ಪುಗಳನ್ನು ಸರಿಮಾಡಿಕೊಳ್ಳುವುದರ ಜೊತೆಗೆ ಲೋಪಸೇವಾ ಆಯೋಗ ಎಂಬ ಹಣೆಪಟ್ಟಿಯನ್ನು ಕಳಚಿಕೊಂಡು ತನ್ನ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ದೃಷ್ಟಿಯಲ್ಲಿ ವಿಶ್ವಾಸ ಗಳಿಸಿಕೊಳ್ಳಬೇಕಾಗಿದೆ.

- ಎಲ್.ಜಿ. ಮಧುಕುಮಾರ್, ಅಧ್ಯಕ್ಷರು,
ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಚನ್ನಗಿರಿ.

# ಕೆಪಿಸಿಸಿ ಅಧ್ಯಕ್ಷ ಬದಲಾವಣೆ ಪ್ರಶ್ನೆಯೇ ಇಲ್ಲ

**ಗೌಪ್ಯ ಸಭೆ, ಔತಣಕೂಟ ನಡೆಸದಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ತಾಕೀತು**

**ಸ್ಥಳೀಯ ಸಂಸ್ಥೆಗಳ ಚುನಾವಣೆ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್**

ಬೆಂಗಳೂರು, ಜ.17 - ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ಡಿ.ಕೆ.ಶಿವಕುಮಾರ್ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದು ಪಕ್ಷದ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸ್ಪಷ್ಟಪಡಿಸಿದ್ದಾರೆ.

ಪಕ್ಷ ಮತ್ತು ಸರ್ಕಾರಕ್ಕೆ ಸಂಬಂಧಿಸಿದಂತೆ ಯಾವುದೇ ಗೌಪ್ಯ ಸಭೆ ಅಥವಾ ಔತಣಕೂಟಗಳನ್ನು ಸಚಿವರು ಮತ್ತು ಮುಖಂಡರು ಇನ್ನು ಮುಂದೆ ನಡೆಸಬಾರದು ಎಂದು ತಾಕೀತು ಮಾಡಿದ್ದಾರೆ.

ನೀವು ಯಾವುದೇ ಸಭೆಗಳನ್ನು ಮಾಡುವುದಾದರೆ, ಅದನ್ನು ಪಕ್ಷದ ಕಚೇರಿಯಲ್ಲೇ ಮಾಡಿ, ಪ್ರತ್ಯೇಕ ಸಭೆಗಳನ್ನು ಮಾಡುವುದರಿಂದ ತಪ್ಪು ಸಂದೇಶಗಳು ಹೋಗುತ್ತದೆ. ಶಿವಕುಮಾರ್ ಅವರನ್ನು ಅಧ್ಯಕ್ಷ ಸ್ಥಾನದಿಂದ ಸದ್ಯಕ್ಕೆ ಬದಲಾಯಿ ಸುವ ಪ್ರಸ್ತಾವ ವರಿಷ್ಠರ ಮುಂದಿಲ್ಲ. ಅಧ್ಯಕ್ಷರ ಬದಲಾವಣೆ ಕುರಿತು ಹೇಳಿಕೆಗಳನ್ನು ನೀಡಿದ ಸಚಿವ ಸತೀಶ್ ಜಾರಕಿಹೊಳಿ ಸೇರಿದಂತೆ ಯಾರಿಗೂ ನೋಟಿಸ್ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು.

ಎಲ್ಲರೂ ಪಕ್ಷದ ನಿಯಮಗಳಿಗೆ ಕಟಿಬದ್ಧರಾಗಿ ರುತ್ತಾರೆ, ನಮ್ಮ ಪಕ್ಷದಲ್ಲಿ ಹೊರಗಿನವರು ಅನಗತ್ಯ ಗೊಂದಲ ಸೃಷ್ಟಿಸುವ ಪ್ರಯತ್ನ ನಡೆಸಿದ್ದಾರೆ ಎಂದು ದೂರಿದರು.

ನಮಗೆ ಮುಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಎದುರಾಗಲಿವೆ, ಅವುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಶಿವಕುಮಾರ್ ಸೇರಿದಂತೆ ಇತರೆ ಮುಖಂಡರ ನಾಯಕತ್ವದಲ್ಲೇ ನಡೆಸುತ್ತೇವೆ ಎನ್ನುವ ಮೂಲಕ ಮುಖ್ಯಮಂತ್ರಿ ಬಣಕ್ಕೆ ಸೇರಿದ ಸಚಿವರುಗಳಿಗೆ ಸುರ್ಜೇವಾಲಾ ಸ್ಪಷ್ಟ ಸಂದೇಶ ನೀಡಿದರು.


ಸುರ್ಜೇವಾಲಾ ಹೇಳಿಕೆ ಬೆನ್ನಲ್ಲೇ ಶಿವಕುಮಾರ್ ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಯಾವುದೇ ಹುದ್ದೆಗೆ ಅಂಟಿಕೊಂಡು ಕೂತಿಲ್ಲ, ಪಕ್ಷ ಏನು ಹೇಳುತ್ತದೋ ಅದನ್ನು ಮಾಡಿಕೊಂಡಿದ್ದೇನೆ ಎಂದಿದ್ದಾರೆ.

ಶಿವಕುಮಾರ್ ಅವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಬೇಕೆಂದು ಸಿದ್ದರಾಮಯ್ಯ ಬಣಕ್ಕೆ ಸೇರಿದ ಸಚಿವರಾದ ಡಾ.ಜಿ. ಪರಮೇಶ್ವರ್, ಡಾ.ಎಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ ಅವರುಗಳು ವರಿಷ್ಠರ ಮೇಲೆ ಒತ್ತಡ ಹೇರಿದ್ದರು, ಅಷ್ಟೇ ಅಲ್ಲದೆ, ಬಹಿರಂಗ ಹೇಳಿಕೆ ನೀಡಿ ಎಐಸಿಸಿ ನಾಯಕರ ಕೆಂಗಣ್ಣಿಗೂ ಗುರಿಯಾಗಿದ್ದರು.

ಸುರ್ಜೇವಾಲಾ ಅವರು, ಶಿವಕುಮಾರ್ ಅವರನ್ನು ಸಮರ್ಥಿಸಿಕೊಳ್ಳುತ್ತಿದ್ದಂತೆ ಮಹದೇವಪ್ಪ, ಪರಮೇಶ್ವರ್ ಅವರ ಮನೆಗೆ ತೆರಳಿ ಒಂದು ಗಂಟೆಗೂ ಹೆಚ್ಚು ಕಾಲ ಗೌಪ್ಯ ಮಾತುಕತೆ ನಡೆಸಿದರು.

ಈ ಬಗ್ಗೆ ಉಭಯ ನಾಯಕರು ಮಾಧ್ಯಮಕ್ಕೆ ಏನನ್ನೂ ತಿಳಿಸಿಲಿಲ್ಲ, ಮಾತುಕತೆಯ ವಿವರವೂ ಲಭ್ಯವಾಗಿಲ್ಲ.

## ಕೆಯುಡಬ್ಲ್ಯುಜೆಯಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ದತ್ತಿ ನಿಧಿ ಪ್ರಶಸ್ತಿ ಸ್ಥಾಪನೆಗೆ ಮುಂದಾದ ಆದಿಚುಂಚನಗಿರಿ ಮಠ



ಬೆಂಗಳೂರು, ಜ. 17 - ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಆದಿಚುಂಚನಗಿರಿ ಮಠದ ವತಿಯಿಂದ ದತ್ತಿ ನಿಧಿ ಪ್ರಶಸ್ತಿ ಸ್ಥಾಪಿಸಲು ಮಠದ ಪೀಠಾಧ್ಯಕ್ಷರಾದ ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರು ಮುಂದಾಗಿದ್ದಾರೆ.

ತುಮಕೂರಿನಲ್ಲಿ ನಡೆಯಲಿರುವ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ನೀಡಲು ಆದಿಚುಂಚನಗಿರಿ ಮಠಕ್ಕೆ ಹೋಗಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡ ಬ್ಲ್ಯುಜೆ) ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ಜೊತೆಗೆ ಈ ನಿಟ್ಟಿನಲ್ಲಿ ಚರ್ಚೆ ನಡೆಸಿ ತಮ್ಮ ಇಚ್ಛೆ ವ್ಯಕ್ತಪಡಿಸಿದ್ದರು. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ನೆನಪಿನಲ್ಲಿ ಚುಂಚಶ್ರೀ ಪ್ರಶಸ್ತಿ ಸ್ಥಾಪಿಸಲು 10 ಲಕ್ಷರೂ. ಠೇವಣಿ ಇಡುವುದಾಗಿ ತಿಳಿಸಿರುವುದನ್ನು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಸ್ವಾಗತಿಸುತ್ತದೆ. ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ ಆಶಯ ದಂತೆ ಠೇವಣಿ ಇಟ್ಟ ಬಳಿಕ ಪ್ರತಿ ವರ್ಷವೂ ಸಮ್ಮೇಳನದಲ್ಲಿ ಸಾಧಕ ಹಿರಿಯ ಪತ್ರಕರ್ತರೊಬ್ಬರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕೆಯುಡಬ್ಲ್ಯುಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ತಿಳಿಸಿದ್ದಾರೆ.

## ಕೆ.ಎನ್. ಹಳ್ಳಿ ಪಿಎಸಿಎಸ್ ಅಧ್ಯಕ್ಷರಾಗಿ ಶಾರದಮ್ಮ ಉಪಾಧ್ಯಕ್ಷರಾಗಿ ರಿಯಾಜ್ ಅಹಮದ್

ಮಲೇಬೆನ್ನೂರು, ಜ. 17 - ಕಡಾರನಾಯ್ಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಗುಬ್ಬಿ ಶಾರದಮ್ಮ ಮತ್ತು ಉಪಾಧ್ಯಕ್ಷರಾಗಿ ರಿಯಾಜ್ ಅಹಮದ್ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮದ ಮುಖಂಡರಾದ ಗುಬ್ಬಿ ರಂಗನಾಥ್ ಮತ್ತು ವಿ.ಕುಬೇಂದ್ರಪ್ಪ ಅವರ ನೇತೃತ್ವದಲ್ಲಿ ಈ ಆಯ್ಕೆ ನಡೆದಿದ್ದು, ಸಂಘದ ಎಲ್ಲಾ ನೂತನ ನಿರ್ದೇಶಕರು ಅವಿರೋಧ ಆಯ್ಕೆಗೆ ಸಹಕರಿಸಿದರು. ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ವೆಂಕಟೇಶ್ವರರಾವ್ ಅವರು ಚುನಾವಣಾಧಿಕಾರಿಯಾಗಿದ್ದರು. ಸಂಘದ ಸಿಇಓ ಎನ್. ತಿಪ್ಪೇಶಿ ಸ್ವಾಗತಿಸಿ, ವಂದಿಸಿದರು.

## ನಗರದಲ್ಲಿ ನಾಳೆ ಸರ್ಕಾರಿ ನಿವೃತ್ತ ನೌಕರರ ಕ್ರೀಡಾಕೂಟ

ದಾವಣಗೆರೆ, ಜ. 17 - ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದಿಂದ ಗಣರಾಜ್ಯೋತ್ಸವದ ಪ್ರಯುಕ್ತ ನಾಡಿದ್ದು ದಿನಾಂಕ 19 ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿರುವ ಬಾಪೂಜಿ ಪ್ರೌಢ ಶಾಲಾ ಮೈದಾನದಲ್ಲಿ ಸರ್ಕಾರಿ ನಿವೃತ್ತ ನೌಕರರಿಗೆ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾ ಅಧ್ಯಕ್ಷ ಕೆ. ಜಿ. ಭರತರಾಜ್ ತಿಳಿಸಿದ್ದಾರೆ.

## ಚಳ್ಳಕೆರೆ : ಶಿಥಿಲಗೊಂಡ ಮಳಿಗೆಗಳು ತೆರವು ಮಾಡಲು ಬಾಡಿಗೆದಾರರಿಗೆ ನೋಟಿಸ್

ಚಳ್ಳಕೆರೆ, ಜ. 17- ಇಲ್ಲಿನ ನಗರಸಭೆ ವ್ಯಾಪ್ತಿಗೆ ಬರುವ ಬಾಡಿಗೆದಾರರಿಗೆ ನೋಟಿಸ್ ನೀಡಿ ಹತ್ತು ದಿನಗಳಾದರೂ ಮಳಿಗೆಗಳನ್ನು ಖಾಲಿ ಮಾಡಿಲ್ಲ. ಲೋಕೋಪಯೋಗಿ ಇಲಾಖೆ ವರದಿ ನೀಡಿದ ಪ್ರಕಾರ ಮಳಿಗೆಗಳು ಸುಮಾರು ವರ್ಷಗಳ ಕಾಲ ಬಾಡಿಗೆ ಇದ್ದು, ಮಾಳಿಗೆ ಬೀಳುವ ಸ್ಥಿತಿಯಲ್ಲಿವೆ. ನ್ಯಾಯಾಲಯದ ನಿರ್ದೇಶನದಂತೆ ಬಾಡಿಗೆದಾರರನ್ನು ಖಾಲಿ ಮಾಡಿಸಿ ಮಳಿಗೆಗಳನ್ನು ನೆಲಸಮಗೊಳಿಸಿ, ಹೊಸ ಕಟ್ಟಡ ನಿರ್ಮಿಸುವ ಉದ್ದೇಶವಿದೆ.

ವಿದ್ಯುತ್ ಸ್ಥಗಿತಗೊಳಿಸಿ ಬಾಡಿಗೆದಾರರಿಗೆ ಮೂರು ದಿನ ಕಾಲಾವಕಾಶ ನೀಡಲಾಗುವುದು. ಖಾಲಿ ಮಾಡದಿದ್ದರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಪೊಲೀಸರ ಸಮ್ಮುಖದಲ್ಲಿ ಮಾಳಿಗೆ ಖಾಲಿ ಮಾಡಿಸಲಾಗುವುದು ಎಂದು ನಗರಸಭಾ ಪೌರಾಯುಕ್ತ ಜಗರೆಡ್ಡಿ ಪತ್ರಿಕೆಯೊಂದಿಗೆ ಗೆ ಮಾತನಾಡುತ್ತಾ ತಿಳಿಸಿದರು.

ಮಳಿಗೆಗಳಲ್ಲಿ ಸುಮಾರು 50 ವರ್ಷಗಳ ಕಾಲ ವ್ಯಾಪಾರ ಮಾಡಿಕೊಂಡಿರುವವರು ಕೇವಲ 500-1000 ರೂ. ಬಾಡಿಗೆ ಪಾವತಿ ಮಾಡುತ್ತಿದ್ದಾರೆ. ಕೆಲವು ಬಾಡಿಗೆದಾರರು ಮೃತಪಟ್ಟಿದ್ದಾರೆ. ಬೇರೆಯವರಿಗೆ ಬಾಡಿಗೆ ಕೊಟ್ಟು 15-20 ಸಾವಿರ ರೂ. ಹಣ ಪಡೆಯುತ್ತಿದ್ದಾರೆ. ಇದರಿಂದ ನಗರಸಭೆಗೆ ನಷ್ಟ ಉಂಟಾಗುತ್ತದೆ. ಮಳಿಗೆಗಳನ್ನು ಖಾಲಿ ಮಾಡಿಸಿ ನಗರಸಭೆ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಇಲ್ಲಿನ ಸಂಘ-ಸಂಸ್ಥೆ ಮತ್ತು ಸ್ಥಳೀಯ ಹೋರಾಟಗಾರರು ಮತ್ತು ಹೋರಾಟ ಮಾಡಿದ ಸಂಘ-ಸಂಸ್ಥೆಗಳ ಕಾರ್ಯಕರ್ತರು ಬಾಡಿಗೆದಾರ ಖಾಲಿ ಮಾಡದ ಕಾರಣ ವಿದ್ಯುತ್ ಕಡಿತಕ್ಕೆ ಹರ್ಷ ವ್ಯಕ್ತಪಡಿಸಿದ್ದಾರೆ.

## ಇಂದು ವಿದ್ಯುತ್ ಗ್ರಾಹಕರ ಸಂವಾದ

ಬೆಸ್ಕಾಂ ನಗರ ಉಪ ವಿಭಾಗ-1 ರ ವತಿಯಿಂದ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ಗ್ರಾಹಕರ ಸಂವಾದ ನಡೆಯಲಿದೆ. ನಗರ ಉಪ ವಿಭಾಗ-1 ರ ವ್ಯಾಪ್ತಿಗೆ ಬರುವ ಗ್ರಾಹಕರು ತಮ್ಮ ಅಹವಾಲುಗಳೇನಾದರೂ ಇದ್ದಲ್ಲಿ ಮಧ್ಯಾಹ್ನ 3 ರೊಳಗೆ ಹಾಜರಾಗಬಹುದು.

MATRUCHAYA HEALTH CARE
(Mother & child care Hospital)
2nd cross siddaveerappa Layout, Shamanuru Road, Dvg
HOSPITAL STAFF VACANCY
1) Senior Nurses (GNM) - 3
2) Junior Nurses (GNM) - 3
3) OT Nurses - 2 , 4) Pharmacist - 2
5) Lab Technician - 1
Salary based on Eligibility & Exp.
Apply with Biodata, Degree Certificate & Addr. Proof.
Accomadation Available
Contact no. 78298 08443, 97427 62462

## ನಗರದಲ್ಲಿ ನಾಳೆ ಚಿರಂತನ ಉತ್ಸವದಲ್ಲಿ ನೃತ್ಯ-ಸಂಗೀತ

ದಾವಣಗೆರೆ, ಜ. 17- ಚಿರಂತನ ಅಕಾಡೆಮಿ ವತಿಯಿಂದ ನಾಡಿದ್ದು ದಿನಾಂಕ 19 ರ ಭಾನುವಾರ ಸಂಜೆ 5.30 ಕ್ಕೆ ನಗರದ ಶಿವಯೋಗ ಮಂದಿರದ ಆವರಣದಲ್ಲಿ 'ಚಿರಂತನ ಉತ್ಸವ' ದಲ್ಲಿ ನೃತ್ಯ, ಸಂಗೀತ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಕಾಡೆಮಿಯ ಅಧ್ಯಕ್ಷ ದೀಪ ಎನ್. ರಾವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ದಾವಣಗೆರೆಯಲ್ಲಿ ಕಳೆದ 24 ವರ್ಷಗಳಿಂದ ಸತತವಾಗಿ ಸಾಂಸ್ಕೃತಿಕ ಸೇವೆ ಸಲ್ಲಿಸುತ್ತಿರುವ ಚಿರಂತನ ಸಂಸ್ಥೆಯ ನೂರಕ್ಕೂ ಹೆಚ್ಚು ಕಲಾವಿದರು ಹಾಗೂ ಬೆಂಗಳೂರಿನಿಂದ ಆಗಮಿಸುತ್ತಿರುವ 20ಕ್ಕೂ ಹೆಚ್ಚು ಕಲಾವಿದರು ಸಾಂಸ್ಕೃತಿಕ ರಸದೌತಣ ನೀಡಲಿದ್ದಾರೆಂದರು.

ಅಂದು ಕಿರುತೆರೆ ಹಾಗೂ ನೃತ್ಯ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದಿರುವ ಬೆಂಗ ಳೂರಿನ ಡಾ. ಸಂಜಯ್ ಶಾಂತಾರಾಮರ ಶಿವ ಪ್ರಿಯ ತಂಡ ಶಿವನ ತಾಂಡವದ ವಿವಿಧ ಮುಜುಲುಗಳಾದ 'ಆನಂದ ತಾಂಡವ', 'ರುದ್ರತಾಂಡವ' ಮುಂತಾದವುಗಳನ್ನು ರೋಮಾಂಚನ, ಭವ್ಯ ನೃತ್ಯ ಸಂಯೋಜನೆಯಲ್ಲಿ 20 ಕಲಾವಿರದು ಪ್ರಸ್ತುತಪಡಿಸಲಿದ್ದಾರೆ.

ಕರುನಾಡ ವೈಭವ ನೃತ್ಯ ರೂಪಕದಲ್ಲಿ ಕರ್ನಾಟಕದ ಪರಂಪರೆಯನ್ನು ಪ್ರತಿನಿಧಿಸುವ ನೃತ್ಯಗಳ ಪ್ರಸ್ತುತಯಿದ್ದು, ವಿಶೇಷವಾಗಿ ಭೂತಕೋಲ ವನ್ನು ಪ್ರಸ್ತುತಪಡಿಸಲಾಗುತ್ತಿದೆ. ವಿದುಷಿ ರಕ್ಷಾ ರಾಜಶೇಖರ್ ನೃತ್ಯ ವಿಲಾಸದಲ್ಲಿ ಭಕ್ತಿಯ ವಿವಿಧ ರೂಪಕಗಳನ್ನು ಅಭಿನಯಿಸಲಿದ್ದಾರೆ. ಇಂಪಾದ ವಾದ್ಯ ಸಂಗೀತವು ಪ್ರೇಕ್ಷಕರನ್ನು ತಣಿಸಲಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಚಲವಾದಿ, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ದೂಡಾ ಆಯುಕ್ತ ತಿಮ್ಮಣ್ಣ ಹುಲ್ಮನಿ, 8 ಬಾರಿ ರಾಷ್ಟ್ರಪ್ರಶಸ್ತಿ ಪಡೆದಿರುವ ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ, ದಾವಣಗೆರೆ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್, ವೀಣಾ ವಾದಕರಾದ ರೇವತಿ ಕಾಮತ್ ಭಾಗವಹಿಸಲಿದ್ದಾರೆ. ಡಾ. ಸಂಜಯ್ ಶಾಂತಾರಾಮ್ ಅವರಿಗೆ 'ಚಿರಂತನ ರಾಜ್ಯ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಪನ್ನ ಮುತಾಲಿಕ್, ಅಲಕಾನಂದ ರಾಮದಾಸ್, ರಕ್ಷಾ ರಾಜಶೇಖರ್ , ವೆಂಕಟೇಶ್ ಉಪಸ್ಥಿತರಿದ್ದರು.

## ಕುಂಬಳೂರಿನಲ್ಲಿ ಇಂದು ಬೀರಪ್ಪನ ಹೊರಗುಡಿ ಉದ್ಘಾಟನೆ

ಮಲೇಬೆನ್ನೂರು, ಜ.17- ಕುಂಬಳೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಬೀರದೇವರ ಹೊರಗುಡಿಯ ಉದ್ಘಾಟನಾ ಕಾರ್ಯಕ್ರಮಗಳು ನಾಳೆ ದಿನಾಂಕ 18ರ ಶನಿವಾರ ಮತ್ತು ದಿನಾಂಕ 19ರ ಭಾನುವಾರ ಜರುಗಲಿವೆ. ಶನಿವಾರ ಸಂಜೆ ಗ್ರಾಮದ ಎಲ್ಲಾ ದೇವತೆಗಳನ್ನು ಪರಸ್ಥಳ ಗೂಡು ಕಟ್ಟು ಬೀರದೇವರುಗಳ ಸಮ್ಮುಖದಲ್ಲಿ ಗಂಗೆ ಪೂಜೆ ನೆರವೇರಿಸಿದ ಬಳಿಕ ಬೀರದೇವರ ಹೊರಗುಡಿಗೆ ಎಲ್ಲಾ ದೇವರುಗಳನ್ನು ಕರೆ ತರಲಾಗುವುದು. ಭಾನುವಾರ ಬ್ರಾಹ್ಮೀ ಮುಹೂರ್ತದಲ್ಲಿ ಬೀರ ದೇವರಿಗೆ ಅಭಿಷೇಕ, ಹೋಮ, ಬಿಲ್ವಾರ್ಚನೆ ನಂತರ ಬೆಳಿಗ್ಗೆ 11 ರಿಂದ ದೊಡ್ಡ ಎಡೆ ಮಹಾಪೂಜೆ ನೆರವೇರಲಿದೆ. ಮಧ್ಯಾಹ್ನ 12.30 ರಿಂದ ಅನ್ನ ಸಂತರ್ಪಣೆ ನಡೆಯಲಿದೆ.

## ನಗರದಲ್ಲಿ ಇಂದು ಪ್ರತಿಭಟನೆ

ಜೀವನಪೂರ್ತಿ ಇಡೀ ಮನುಕುಲಕ್ಕೆ ಹಾಲುಣಿಸಿ, ಪೋಷಿಸುವ ಪೂಜ್ಯ ಗೋಮಾತೆಯ ಕೆಚ್ಚಲನ್ನೇ ಕತ್ತರಿಸಿ ವಿಕೃತಿ ಮೆರೆದ ಮತಾಂಧರ ದುಷ್ಕೃತ್ಯ ಖಂಡಿಸಿ, ಗೋ ಸಂರಕ್ಷಣಾ ಸಂವರ್ಧನಾ ಸಮಿತಿಯಿಂದ ನಗರದ ಜಯದೇವ ವೃತ್ತದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಶಿವ ಸಹಕಾರಿ ಬ್ಯಾಂಕ್ ನಿಯಮಿತ
ಆಡಳಿತ ಕಛೇರಿ, ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ. 577 001.
ಫೋ. ನಂ. 08192 256107, ಮೊ.ನಂ. 94498 19322

ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ

ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ : ಸಿಒ 237 ಸಿಎಲ್‌ಎಸ್ 2024, ಬೆಂಗಳೂರು, ದಿನಾಂಕ : 30.11.2024ರಂದು ಹೊರಡಿಸಿರುವ ಆದೇಶದಂತೆ 2025-26ನೇ ಸಾಲಿಗೆ ಯಶಸ್ವಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆಯ ನೋಂದಾವಣೆ ಪ್ರಕ್ರಿಯೆಯು ದಿನಾಂಕ : 31.12.2024 ರಿಂದ ಪ್ರಾರಂಭವಾಗಿರುತ್ತದೆ. ನಮ್ಮ ಬ್ಯಾಂಕಿನ ಸದಸ್ಯರುಗಳು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಸದಸ್ಯರ ಐಡಿ ಕಾರ್ಡ್, ಆಧಾರ್ ಕಾರ್ಡ್, ರೇಷನ್ ಕಾರ್ಡ್ ಮತ್ತು ಇತ್ತೀಚಿನ 2 ಪಾಸ್‌ಪೋರ್ಟ್ ಸೈಜ್ ಭಾವಚಿತ್ರಗಳನ್ನು ಸಲ್ಲಿಸತಕ್ಕದ್ದು. ಒಂದು ಕುಟುಂಬದಲ್ಲಿ ನಾಲ್ಕು ಸದಸ್ಯರಿದ್ದಲ್ಲಿ ರೂ. 1000/- ಹಾಗೂ ಪ್ರತಿ ಹೆಚ್ಚುವರಿ ಸದಸ್ಯರಿಗೆ ರೂ. 200/- ಗಳಂತೆ ವಾರ್ಷಿಕ ವಂತಿಕೆ ಪಾವತಿಸಿ ನೋಂದಾವಣೆ ಮಾಡಿಕೊಳ್ಳುವುದು. ನೋಂದಾವಣೆ ಮಾಡಿಕೊಳ್ಳಲು ಕೊನೆಯ ದಿನಾಂಕ : 31.01.2025 ಆಗಿರುತ್ತದೆ.

ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ ಅವಧಿಯು ದಿನಾಂಕ : 01.04.2025 ರಿಂದ ದಿನಾಂಕ : 31.03.2026ರವರೆಗೆ ಜಾರಿಯಲ್ಲಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪ್ರಧಾನ ಕಛೇರಿ ಮತ್ತು ನಮ್ಮ ಶಾಖೆಗಳನ್ನು ಸಂಪರ್ಕಿಸಲು ತಿಳಿಸಿದೆ.

ಸಹಿ/- ಶ್ರೀ ಎಂ.ಬಿ. ಸಂಗಮೇಶ್ವರಗೌಡರು, ಅಧ್ಯಕ್ಷರು
ಸಹಿ/- ಶ್ರೀ ಐಗೂರು ಚಂದ್ರಶೇಖರ, ಉಪಾಧ್ಯಕ್ಷರು
ಸಹಿ/- ಶ್ರೀ ಮಂಜುನಾಥ ರೇವಣ್ಕರ್, ಪ್ರಭಾರಿ ಪ್ರಧಾನ ವ್ಯವಸ್ಥಾಪಕರು




# ಸಿರಿಧಾನ್ಯದ ಆಹಾರದಿಂದ ಆರೋಗ್ಯ ವೃದ್ಧಿ

## ಸಿರಿಧಾನ್ಯ ನಡಿಗೆ ಜಾಥಾಕ್ಕೆ ಚಾಲನೆ ನೀಡಿದ ಪಿ.ಎನ್. ಲೋಕೇಶ್

ದಾವಣಗೆರೆ, ಜ. 17- ಕಲಬೆರಕೆ ರಹಿತ ಮತ್ತು ಆರೋಗ್ಯವಂತರಾಗಿರಲು ಸಿರಿಧಾನ್ಯ ದಿಂದ ತಯಾರಿ ಸಿದ ಆಹಾರವನ್ನು ನಮ್ಮ ದೈನಂದಿನ ಉಪಹಾರ, ಊಟದ ಪದ್ಧತಿಯಲ್ಲಿ ಅಳವಡಿಸಿಕೊಳ್ಳುವುದರಿಂದ ಆರೋಗ್ಯವಂತ ರಾಗಿ ಬದುಕಬಹುದೆಂದು ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್ ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಕೃಷಿಕ ಸಮಾಜ, ಕೃಷಿ ಪರಿಕರ ಮಾರಾಟಗಾರರ ಸಂಘ, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಇತರೆ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿಲಾಗಿದ್ದ ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ಸಿರಿಧಾನ್ಯ ನಡಿಗೆ ಆರೋಗ್ಯದ ಕಡೆಗೆ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಿರಿಧಾನ್ಯಗಳಾದ ನವಣೆ, ಆರಕ, ಊದಲು, ಕೊರಲೆ, ಸಾಮೆ, ಬರಗು ಬಳಕೆಯಿಂದಾಗುವ ಮಹತ್ವ ಕುರಿತು ಜಾಗೃತಿ ಹೆಚ್ಚಿದ್ದು ಸಿರಿಧಾನ್ಯ ಬಳಕೆಯೂ ಕೂಡ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ ವಿವಿಧ ಕಾರ್ಯಕ್ರಮಗಳ ಮುಖಾಂತರ ರೈತರಿಗೆ ಸಿರಿಧಾನ್ಯಗಳನ್ನು ಬೆಳೆಯಲು ಉತ್ತೇಜಿಸುತ್ತಿದೆ ಎಂದರು.

ಸಿರಿಧಾನ್ಯಗಳಿಂದ ವಿವಿಧ ಖಾದ್ಯಗಳನ್ನು ತಯಾರಿಸುವ ಬಗೆಯ ಕುರಿತು ಜಾಗೃತಿ ಮೂಡಿಸಲು ಸಿರಿಧಾನ್ಯ ಪಾಕಸ್ಪರ್ಧೆ, ಸಿರಿಧಾನ್ಯ ಜಾಥಾ ಹಾಗೂ ಇದೇ ಜನವರಿ 23 ರಿಂದ 25 ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಂತರರಾಷ್ಟ್ರೀಯ ವಾಣಿಜ್ಯ ಮೇಳ, ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು ಆಯೋಜಿಸ ಲಾಗಿದ್ದು, ನಾವೆಲ್ಲರೂ ಇದರ ಸದುಪಯೋಗ ವನ್ನು ಪಡೆದುಕೊಳ್ಳೋಣ ಎಂದರು.

ಜಿ.ಪಂ. ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ ಮಾತನಾಡಿ, ಇತ್ತೀಚಿಗೆ ಜಂಕ್ ಫುಡ್ ಉಪಯೋಗಿಸುವುದರಿಂದ ಚಿಕ್ಕ ವಯಸ್ಸಿನಲ್ಲಿಯೇ ಆರೋಗ್ಯ ಕೆಡುತ್ತಲಿದೆ. ಸಿರಿಧಾನ್ಯಗಳ ಬಳಕೆಯಿಂದ ಆರೋಗ್ಯವನ್ನು ಸುಧಾರಿಸಿಕೊಳ್ಳಬಹುದು. ಇದರ ಬೆಳೆಯನ್ನೂ ಸಹ ಅತಿ ಕಡಿಮೆ ವೆಚ್ಚದಲ್ಲಿ ಬೆಳೆಯಬಹುದಾಗಿದ್ದು, ಬೆಳೆದಂತಹ ರೈತರಿಗೆ ಸಹಾಯಧನವನ್ನು ನೀಡಲಾಗುತ್ತಿದೆ ಎಂದರು.

ಸಿರಿಧಾನ್ಯ ನಡಿಗೆ ಜಾಥಾ ನಗರದ ಜಯದೇವ ವೃತ್ತದಿಂದ ಪ್ರಾರಂಭವಾಗಿ ಪಿ.ಬಿ. ರಸ್ತೆ ಮುಖಾಂತರ, ಎ.ವಿ.ಕೆ. ಕಾಲೇಜು ರಸ್ತೆ, ರಾಂ ಅಂಡ್ ಕೋ ವೃತ್ತ, ಚರ್ಚ್‌ರಸ್ತೆ ಮೂಲಕವಾಗಿ ಸಾಗಿ ಗುಂಡಿ ವೃತ್ತದಲ್ಲಿ ಮಾನವ ಸರಪಳಿ ರಚಿಸುವ ಮೂಲಕ ಮುಕ್ತಾಯಗೊಂಡಿತು.

ಜಾಥಾ ನಡಿಗೆ ಯುದ್ದಕ್ಕೂ ಸಿರಿಧಾನ್ಯ ಕುರಿತು ಘೋಷಣೆಗಳನ್ನು ಹಾಗೂ ಸಿರಿಧಾನ್ಯಕ್ಕೆ ಸಂಬಂಧಿಸಿದ ಹಾಡುಗಳು ಹಾಗೂ ಭಿತ್ತಿ ಚಿತ್ರಗಳು ಹಾಗೂ ಪತ್ರಗಳ ಮುಖಾಂತರ ಜಾಗೃತಿಯನ್ನು ಮೂಡಿಸಲಾಯಿತು.

ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ತಹಶೀಲ್ದಾರ್ ಅಶ್ವತ್ಥ್, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ತೋಟಗಾರಿಕೆ ಉಪ ನಿರ್ದೇಶಕರು, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳು, ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷರು ಕೃಷಿ ಅಧಿಕಾರಿಗಳು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಇಂದು ಪಿಜೆ ಬಡಾವಣೆ ಗುರು ಸಾರ್ವಭೌಮರ ಕವಚ ಉತ್ಸವ

ದಾವಣಗೆರೆ: ನಗರದ ಪಿ.ಜೆ. ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರ



ಸ್ವಾಮಿ ಮಠದಲ್ಲಿ ಇಂದು ಸಂಜೆ 4.30ಕ್ಕೆ ಮೆರವಣಿಗೆಯ ಮೂಲಕ ಅನೇಕ ಭಜನಾ ಮಂಡಳಿಗಳ ಸಮ್ಮುಖದಲ್ಲಿ ಕವಚ ಉತ್ಸವ ಏರ್ಪಾಡಾಗಿದೆ. ನಂತರ ರಾಯರ ಮಠದಲ್ಲಿ ಶ್ರೀಮತಿ ಶೋಭಾ ಶಿವಾನಂದ ರಾಯ್ಕರ್ ಮತ್ತು ಶ್ರೀ ಲಲಿತಾ ಭಜನಾ ಮಂಡಳಿ ಸ್ನೇಹ ಬಳಗದಿಂದ ಭಜನೆ ಮತ್ತು ಸಹಸ್ರ ನಾಮಾವಳಿ ನಡೆಯಲಿದೆ. ನಂತರ ಲಘು ಪ್ರಸಾದ ವಿತರಣೆ ವ್ಯವಸ್ಥೆ ಇರುತ್ತದೆ. ನಾಳೆ ಭಾನುವಾರ ಬೆಳಿಗ್ಗೆ 6 ಗಂಟೆಗೆ ಶ್ರೀ 1008 ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಅಮೃತ ಹಸ್ತದಿಂದ ಕವಚ ಸಮರ್ಪಣೆ ನಡೆಯಲಿದೆ.

## ಆರ್.ಐ.ಎನ್.ಎಲ್. ಪುನಶ್ಚೇತನಕ್ಕೆ 11,140 ಕೋಟಿ ರೂ.

ನವದೆಹಲಿ, ಜ.17- ಸಾಲದ ಹೊರೆಯಲ್ಲಿರುವ ರಾಷ್ಟ್ರೀಯ ಇಸ್ಪಾಟ್ ನಿಗಮ ನಿಯಮಿತ (ಆರ್.ಐ.ಎನ್.ಎಲ್.) ಪುನಃಶ್ಚೇತನಕ್ಕಾಗಿ ಕೇಂದ್ರ ಸಂಪುಟ 11,140 ಕೋಟಿ ರೂ. ನೀಡಲು ಸಮ್ಮತಿಸಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. 10,300 ಕೋಟಿ ರೂ.ಗಳನ್ನು ಷೇರು ಬಂಡವಾಳವಾಗಿ ಹಾಗೂ 1,040 ಕೋಟಿ ರೂ.ಗಳನ್ನು ಬಂಡವಾಳ ಸಾಲವಾಗಿ ನೀಡಲಾಗುವುದು.



ಚಿತ್ರ: ರಫೀಕ್, ಜನತಾವಾಣಿ

## ಚೋಟುದ್ದ ದೇಹ.. ಮಾರುದ್ದ ಬಾಲ...!

ಹರಿಹರ ತಾಲ್ಲೂಕು ಕೊಂಡಜ್ಜಿ ಕೆರೆ ಸಮೀಪ ಕಂಡು ಬಂದ ಚೋಟುದ್ದ ದೇಹ, ಮಾರುದ್ದ ಬಾಲದ ಹಕ್ಕಿ ಇದು. ಇದನ್ನು ಬಾಲದಂಡೆ ಹಕ್ಕಿ ಅಥವಾ ಇಂಡಿಯನ್ ಪ್ಯಾರಡೈಸ್ ಫ್ಲೈಕ್ಯಾಚರ್ ಎನ್ನಲಾಗುತ್ತದೆ.

ಆಕರ್ಷಕ ಬಣ್ಣ ಮತ್ತು ತನ್ನ ದೇಹಕ್ಕಿಂತ ಎರಡು ಪಟ್ಟು ಉದ್ದದ ಓಲಾಡುವ ಬಾಲದಿಂದಾಗಿ ಇದು ಪಕ್ಷಿ ವೀಕ್ಷಕರನ್ನು ಆಕರ್ಷಿಸುತ್ತದೆ. ಇವು ಪ್ರಧಾನವಾಗಿ ಶ್ರೀಲಂಕಾ ಮತ್ತು ಮ್ಯಾನ್ಮಾರ್ ಸೇರಿದಂತೆ, ಭಾರತೀಯ ಉಪಖಂಡದಾದ್ಯಂತ ಕಂಡುಬರುತ್ತವೆ. ದಟ್ಟವಾದ ಕಾಡು, ಸಸ್ಯವರ್ಗದ ಉದ್ಯಾನವನಗಳಲ್ಲಿ ಹೆಚ್ಚಾಗಿ ವಾಸಿಸುತ್ತವೆ.

## ವಚನಾಮೃತ ಬಳಗದಿಂದ ಸಂಕ್ರಾಂತಿ ಆಚರಣೆ






ದಾವಣಗೆರೆ, ಜ. 17- ವಚನಾಮೃತ ಬಳಗದಿಂದ ಮಂಗಳವಾರ ಸಂಕ್ರಾಂತಿ ಹಬ್ಬ ಆಚರಿಸಲಾಯಿತು.

ಸುಗ್ಗಿ ಕಾಲದಲ್ಲಿ ರೈತರು ಬೆಳೆದ ಬೆಳೆಗಳನ್ನು ಪೂಜಿಸುವಂತೆಯೇ ಕಾಳು ಕಡಿ, ಭತ್ತದ ರಾಶಿಯನ್ನು, ಕಬ್ಬಿನ ತೆನೆಯನ್ನು ಪೂಜಿಸಲಾಯಿತು. ರೊಟ್ಟಿ, ಬುತ್ತಿ, ಪಲ್ಯ, ಚಟ್ನಿ ಪುಡಿ ಸೇರಿದಂತೆ ವಿವಿಧ ಖಾದ್ಯಗಳ ಭೋಜನವನ್ನು ಬಳಗದ ಸದಸ್ಯರು ಸವಿದರು. ಬಳಗದ ಅಧ್ಯಕ್ಷೆ ಸೌಮ್ಯ ಸತೀಶ್ ಧಾರವಾಡ, ಸರಿತಾ ರಮೇಶ್, ದೀಪಾ ದೇವರಾಜ್, ಶಿಲ್ಪ ಷಡಕ್ಷರಿ ಜ್ಯೋತಿ ಬಾದಾಮಿ, ಸುಮಾ, ಜ್ಯೋತಿ ರಾಜೇಶ್, ನಿವೇದಿತಾ, ನಳಿನಿ, ಪ್ರೀತಿ, ಸರೋಜ, ಗೀತಾ, ಸೀಮಾ, ಸುಧಾ, ನಾಗರತ್ನ , ದೀಪ, ಅನನ್ಯ, ಸೌಜನ್ಯ, ಸಂಗೀತ, ಶ್ರುತಿ ಇತರರು ಭಾಗವಹಿಸಿದ್ದರು.

## ಬಿಜೆಪಿ ಮಂಡಲಗಳಿಗೆ ನೂತನ ಅಧ್ಯಕ್ಷರುಗಳ ಆಯ್ಕೆ





ದಾವಣಗೆರೆ, ಜ. 17 - ಭಾರತೀಯ ಜನತಾ ಪಾರ್ಟಿ 2025ರ ಸಂಘಟನಾ ಪರ್ವ ಕಾರ್ಯದಲ್ಲಿ ದಾವಣಗೆರೆ ಉತ್ತರ ಮತ್ತು ಮಾಯಕೊಂಡ ಮಂಡಲಗಳಿಗೆ ಸಾಮಾನ್ಯ ಸದಸ್ಯತ್ವ, ಸಕ್ರಿಯ ಸದಸ್ಯತ್ವ ಮತ್ತು ಭೂತ್ ಸಮಿತಿ ರಚನೆ ಮಾಡಲಾಯಿತು. ಸಂಬಂಧಪಟ್ಟ ಮಂಡಲಗಳಲ್ಲಿ, ಮಂಡಲದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ನೇತೃತ್ವದಲ್ಲಿ ಕ್ಷೇತ್ರದ ಪ್ರಮುಖರು, ಹಿರಿಯರ ಜೊತೆ ಸಮಾಲೋಚಿಸಿ, ನೂತನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯನ್ನು ನಡೆಸಿ, ಜಿಲ್ಲಾ ಚುನಾವಣಾ ಅಧಿಕಾರಿ ಹೆಚ್.ಟಿ.ಭೈರಪ್ಪನವರ ಆದೇಶದಂತೆ ದಾವಣಗೆರೆ ಉತ್ತರಕ್ಕೆ ತಾರೇಶ್ವರನಾಯ್ಕ ಕೆ. ಮತ್ತು ಮಾಯಕೊಂಡಕ್ಕೆ ಬಿ.ಜಿ. ಸಚಿನ್ ನೇಮಕಗೊಂಡಿದ್ದಾರೆ.

# ಗುಣಮಟ್ಟದ ಶಿಕ್ಷಣದ ಜೊತೆ ಸಂಸ್ಕಾರವೂ ಮುಖ್ಯ

**ನಿಂಚನ ಪಬ್ಲಿಕ್ ಸ್ಕೂಲ್ ವಾರ್ಷಿಕೋತ್ಸವದಲ್ಲಿ ಡಿಡಿಪಿಐ ಜಿ.ಕೊಟ್ರೇಶ್**

ದಾವಣಗೆರೆ, ಜ. 17- ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕೂಡ ಅಷ್ಟೇ ಮುಖ್ಯ ಎಂದು ಡಿಡಿಪಿಐ ಜಿ. ಕೊಟ್ರೇಶ್ ಹೇಳಿದರು.

ಶುಕ್ರವಾರ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ನಿಂಚನ ಪಬ್ಲಿಕ್ ಸ್ಕೂಲ್ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಮಕ್ಕಳಿಗೆ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜೊತೆಗೆ ಉತ್ತಮ ರೀತಿಯ ಸಂಸ್ಕಾರವನ್ನು ನಿಡೀದಾಗ ಮಕ್ಕಳು ಭವಿಷ್ಯದಲ್ಲಿ ಸದೃಢ ಸಮಾಜ ನಿರ್ಮಾಣ ಮಾಡುವಲ್ಲಿ ಸಹಕಾರಿಯಾಗಲಿದೆ ಎಂದರು.

ಮಕ್ಕಳಿಗೆ ಶಾಲೆಗಳಲ್ಲಿ ನೀಡುವ ಶಿಕ್ಷಣದಷ್ಟೇ ಮನೆಗಳಲ್ಲಿ ಪೋಷಕರು ಉತ್ತಮ ಸಂಸ್ಕಾರದ ಪಾಠ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಪೋಷಕರ ಪಾತ್ರ ಕೂಡ



ಮಹತ್ವದ್ದಾಗಿರುತ್ತದೆ ಎಂದು ಹೇಳಿದರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, ಮಕ್ಕಳಿಗೆ ಬಾಲ್ಯದಿಂದಲೇ ನಾಡು ನುಡಿ ಬಗ್ಗೆ ಸದಭಿರುಚಿ ಬರುವ ರೀತಿಯಲ್ಲಿ ನಾಡಾಭಿಮಾನ, ಭಾಷಾಭಿಮಾನ ಕಲಿಸಬೇಕಾಗಿದೆ. ಆಧುನೀಕರಣ, ತಂತ್ರಜ್ಞಾನ, ಜಾಗತೀಕರಣದಲ್ಲಿ ಬಹುಭಾಷೆ ಕೂಡ ಅವಶ್ಯ. ಆದರೆ, ಮೊದಲು ಕನ್ನಡ ಭಾಷೆಗೆ ಆದ್ಯತೆ ನೀಡಬೇಕಾಗುತ್ತದೆ ಎಂದರು.

ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ಪುಷ್ಪಲತಾ ಮಾತನಾಡಿ, ಪಠ್ಯದ ಜೊತೆಯಲ್ಲಿ ಪಠ್ಯೇತರ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಶಿಕ್ಷಣ ನೀಡಿದಾಗ ಮಕ್ಕಳ ಕಲಿಕೆ ಉತ್ತಮವಾಗಲಿದೆ ಎಂದರು.

ಸಮಾರಂಭದಲ್ಲಿ ಸಂಪನ್ಮೂಲ ಅಧಿಕಾರಿಗಳಾದ ಬಿ.ಎಂ.ಚೌಡಪ್ಪ, ಭರತ್ ಎಂ. ಮಾತನಾಡಿದರು. ಈ ಸಂದರ್ಭದಲ್ಲಿ ಸಂಸ್ಥಾಪಕ ಅಧ್ಯಕ್ಷ ಎಸ್. ನಿಂಗಪ್ಪ, ಶೈಕ್ಷಣಿಕ ನಿರ್ದೇಶಕರಾದ ಶ್ರುತಿ ಇನಾಮ್ದಾರ್, ಮ್ಯಾನೇಜಿಂಗ್ ಡೈರೆಕ್ಟರ್ ರವಿಕುಮಾರ್, ಪತ್ರಕರ್ತ ಚನ್ನವೀರಯ್ಯ, ಪ್ರಾಂಶುಪಾಲ ಸಂತೋಷ್ ಕುಮಾರ್ ಉಪಸ್ಥಿತರಿದ್ದರು. ವಾರ್ಷಿಕೋತ್ಸವದಲ್ಲಿ ಶಾಲಾ ಮಕ್ಕಳು ವರ್ಣ ರಂಜಿತ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.

## 'ಸಿರಿ ಕನ್ನಡ' ಹೋಮ

ಸಿರಿ ಕನ್ನಡ ವಾಹಿನಿಯ ಸಹಯೋಗದಲ್ಲಿ ಇಂದು ಬೆಳಿಗ್ಗೆ 8 ಕ್ಕೆ ಹದಡಿ ರಸ್ತೆ ಐಟಿಐ ಕಾಲೇಜು ಆವರ ಣದಲ್ಲಿರುವ ಶ್ರೀ ಚೌಡೇಶ್ವರಿ ದೇವ ಸ್ಥಾನ ಸರ್ವಾಭಿವೃದ್ಧಿ ಹೋಮ ಹಮ್ಮಿ ಕೊಳ್ಳಲಾಗಿದೆ. ಡಾ. ಶ್ರೀಲಕ್ಷ್ಮಿ ಶ್ರೀನಿವಾಸ ಗುರೂಜಿ ಅವರ ಸಾರಥ್ಯದಲ್ಲಿ ನಡೆಯ ಲಿರುವ ಈ ಹೋಮದಲ್ಲಿ 'ಭೂವರಾಹ' ಮತ್ತು 'ಮೃತ್ಯುಂಜಯ, ಎರಡು ವಿಶೇಷ ವಾದ ಹೋಮಗಳು ನಡೆಯಲಿವೆ.

**ಬೇಕಾಗಿದ್ದಾರೆ**


**ನಮ್ಮ ಶೋ ರೂಮ್‌ನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.**

**ಶಾಂತಲಾ** ದಿ ವೆಡ್ಡಿಂಗ್ ಮಾಲ್......

ಚಾಮರಾಜ್ ಪೇಟೆ, ದಾವಣಗೆರೆ. ಮೊ : 96861 95327

# ಬ್ರಹ್ಮಾಕುಮಾರೀಸ್‌ನಲ್ಲಿ ಇಂದು ಸ್ಮೃತಿ ದಿನ

ಅಂತರ ರಾಷ್ಟ್ರೀಯ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸ್ಥಾಪಕ ರಾದ ಪ್ರಜಾಪಿತ ಬ್ರಹ್ಮಾ ಅವರ ಸ್ಮೃತಿ ದಿನಾಚರಣೆ ಇಂದು ನಡೆಯಲಿದೆ.



ಪ್ರಜಾಪಿತ ಬ್ರಹ್ಮಾ ಅವರ ಪೂರ್ವಾಶ್ರಮದ ಹೆಸರು ದಾದಾ ಲೇಖರಾಜ ಎಂದಾಗಿದ್ದು, ಬ್ರಹ್ಮಾಕುಮಾರೀಸ್ ಸಂಸ್ಥೆ ಸ್ಥಾಪನೆ ಮೂಲಕ ಪ್ರಜಾಪಿತ ಬ್ರಹ್ಮಾ ಎಂದಾಗಿದೆ. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ನಿರಾಕಾರ ಪರಮ ಪಿತ ಪರಮಾತ್ಮನಿಂದ ಪ್ರಜಾಪಿತ ಬ್ರಹ್ಮಾರವರ ಸಾಕಾರ ಮಾಧ್ಯಮದ ಮೂಲಕ 1937ರಲ್ಲಿ ಸ್ಥಾಪಿಸಲ್ಪಟ್ಟಿತು.

ಇದೀಗ ಈ ಸಂಸ್ಥೆಯು ತನ್ನ 8500 ಶೈಕ್ಷಣಿಕ ಸೇವಾ ಕೇಂದ್ರಗಳ ಮೂಲಕ 132 ದೇಶಗಳಲ್ಲಿ ಈಶ್ವ ರೀಯ ಜ್ಞಾನ ಮತ್ತು ಸಹಜ ರಾಜಯೋಗ ಶಿಕ್ಷಣವನ್ನು ಕಲಿಸುವುದರ ಮೂಲಕ ವಿಶ್ವದಲ್ಲಿ ಶಾಂತಿ ಸ್ಥಾಪನೆ ಮಾಡಲು ಸೇವಾ ನಿರತವಾಗಿದೆ. ಪ್ರಜಾ ಪಿತ ಬ್ರಹ್ಮಾ ಬಾಬಾರವರ ಮೂಲಕ ಸ್ವಯಂ ಪರಮಾತ್ಮನೇ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ನೀಡುತ್ತಿರುವ ಅಧ್ಯಾತ್ಮಿಕ ಶಿಕ್ಷಣ ಲಕ್ಷಾಂತರ ಜನರಿಗೆ ನವ ಜೀವನ ನೀಡಿದೆ. ಇದು ಕೇವಲ ಒಬ್ಬರ ಅನುಭವವಲ್ಲದೇ, ಸುಮಾರು 11 ಲಕ್ಷ ನಿತ್ಯ ವಿದ್ಯಾರ್ಥಿಗಳ ಅನುಭವವಾಗಿದೆ.

ಪ್ರಜಾಪಿತ ಬ್ರಹ್ಮಾರವರು 1969, ಜನವರಿ 18 ರಂದು ಸ್ಥೂಲ ಶರೀರವನ್ನು ತ್ಯಜಿಸಿ ಸೂಕ್ಷ್ಮ ಶರೀರ ಧಾರಿಯಾಗಿ ಇಂದಿಗೂ ಈಶ್ವರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಈ ದಿನವನ್ನು ಬ್ರಹ್ಮಾಕುಮಾರೀಸ್ ಸಂಸ್ಥೆಯು ವಿಶ್ವಶಾಂತಿ ದಿನವನ್ನಾಗಿ ವಿಶ್ವಾದ್ಯಂತ ಎಲ್ಲಾ ಈಶ್ವರೀಯ ವಿಶ್ವ ವಿದ್ಯಾಲಯಗಳಲ್ಲಿ ಆಚರಿಸಲಾಗುತ್ತಿದೆ ಎಂದು ಸಂಸ್ಥೆಯ ದಾವಣಗೆರೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ವಿವರಿಸಿದ್ದಾರೆ.

## ಜಿಗಳಿಯಲ್ಲಿ ಸಂಭ್ರಮದ ಮುತ್ತೈದೆ ಹುಣ್ಣಿಮೆ ಮಹೋತ್ಸವ ಸಂಭ್ರಮ



ಮಲೇಬೆನ್ನೂರು ಜ, 17 : ಜಿಗಳಿ ಗ್ರಾಮದ ಶ್ರೀ ಚಂದ್ರಗುತ್ಯಮ್ಮದೇವಿ ದೇವಸ್ಥಾನದಲ್ಲಿ ಶುಕ್ರವಾರ ಮುತ್ತೈದೆ ಹುಣ್ಣಿಮೆ ಮಹೋತ್ಸವವು ಸಂಭ್ರಮದಿಂದ ಜರುಜರುಗಿತು.

ವಿವಿಧ ಪೂಜೆ, ಮಹಾಮಂಗಳಾರತಿ ಬಳಿಕ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

## ಬೆಂಗಳೂರಿನಲ್ಲಿ ಅಮೆರಿಕದ ಕಾನ್ಸುಲೇಟ್ ಕಚೇರಿ ಉದ್ಘಾಟನೆ

ಬೆಂಗಳೂರು, ಜ.17- ಬೆಂಗ ಳೂರಿನಲ್ಲಿ ಅಮೆರಿಕದ ಕಾನ್ಸುಲೇಟ್ ಕಚೇರಿಯನ್ನು ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗ್ಯಾರ್‌ಸೆಟಿ ಉದ್ಘಾಟಿಸಿದರು.

ನಗರದ ಜೆ.ಡಬ್ಲ್ಯು ಮ್ಯಾರಿಯೇಟ್ ಹೋಟೆಲ್‌ನಲ್ಲಿ ಕಚೇರಿ ಆರಂಭವಾಗಿದ್ದು, ಭಾರತ ದಲ್ಲಿರುವ ಅಮೆರಿಕದ 5ನೇ ಕಾನ್ಸು ಲೇಟ್ ಎನಿಸಿದೆ. ಉದ್ಘಾಟನಾ ಕಾರ್ಯಕ್ರಮ ದಲ್ಲಿ ಉಪ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಭಾಗಿಯಾಗಿದ್ದರು. ಈ ಕಚೇರಿಯು ಆರಂಭದಲ್ಲಿ ಅಮೆರಿಕ ಪ್ರಜೆಗಳ ಸಹಾಯ ಮತ್ತು ಇತರ ಸೇವೆಗಳ ಕೇಂದ್ರವಾಗಿ ಕೆಲಸ ಮಾಡಲಿದೆ.

|| ಶ್ರೀ ಹಿರೇಲಿಂಗೇಶ್ವರ ಸ್ವಾಮಿ ಪ್ರಸನ್ನ ||

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**

ದಿ. ಗೌಡ್ರು ಸೂರಪ್ಪನವರ ಮಗನಾದ ಶ್ರೀ ಎಸ್. ಮೋಹನ್‌ಕುಮಾರ್, ಹಿರೇಗಂಗೂರು, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಇವರು ಮಾಡುವ ವಿಜ್ಞಾಪನೆಗಳು.




ಆತ್ಮೀಯರೇ,
ದಿನಾಂಕ : 09.01.2025ನೇ ಗುರುವಾರ ಬೆಳಿಗ್ಗೆ 10.40ಕ್ಕೆ ನನ್ನ ಧರ್ಮಪತ್ನಿ
**ಶ್ರೀಮತಿ ಆರ್. ಸುವರ್ಣಮ್ಮ**
ಮಾಜಿ ಉಪಾಧ್ಯಕ್ಷರು, ಜಿ.ಪಂ. ದಾವಣಗೆರೆ.
ಇವರು ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ
**ಕೈಲಾಸ ಸಮಾರಾಧನೆಯನ್ನು**
ಶ್ರೀ ಮ.ನಿ.ಪ್ರ. ಮಹಾಂತ ರುದ್ರೇಶ್ವರ ಸ್ವಾಮಿಗಳು, ವಿರಕ್ತಮಠ, ಹೆಬ್ಬಾಳು ಇವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 19.01.2025ನೇ ಭಾನುವಾರ ಬೆಳಿಗ್ಗೆ 10.32ಕ್ಕೆ ಮೃತರ ಸ್ವಗೃಹ ಹಿರೇಗಂಗೂರು ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುವ

ಇಂತಿ ದುಃಖತಪ್ತರು : ಶ್ರೀ ಎಸ್. ಮೋಹನ್‌ಕುಮಾರ್, Ex. D.S. AIBSNLPWA ಮತ್ತು ಮಕ್ಕಳು ದಿ. ಶ್ರೀಮತಿ ಸಾಂತಮ್ಮ, ದಿ. ಶ್ರೀ ಸೂರಪ್ಪಗೌಡ್ರು ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ದೊಡ್ಡ ಮರಿಯಪ್ಪರ ವಂಶಸ್ಥರು, ಸಣ್ಣ ಮರಿಯಪ್ಪರ ವಂಶಸ್ಥರು, ರಾಮಣ್ಣರ ವಂಶಸ್ಥರು ಹಾಗೂ ಗ್ರಾಮಸ್ಥರು, ಹಿರೇಗಂಗೂರು ಮತ್ತು ಬಂಧು-ಮಿತ್ರರು. 91647 09456, 94822 44044, 98423 71088

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

**ಸಾಂ.ಹಿ. ಉಮಾಶಂಕರ್ 75ನೇ ವಸಂತಕ್ಕೆ ಪಾದಾರ್ಪಣೆ : ಶುಭಾಶಯಗಳು**




ನಮ್ಮ ತಂದೆ
**ಶ್ರೀ ಸಾಂ.ಹಿ. ಉಮಾಶಂಕರ್**
ಇದೇ 18.01.2025 ರಂದು 75ನೇ ವಂಸತಕ್ಕೆ (ಡೈಮಂಡ್ ಜುಬ್ಲಿ) ಪಾದಾರ್ಪಣೆ ಮಾಡುತ್ತಿದ್ದಾರೆ. ತಂದೆಯವರಿಗೆ ಇನ್ನಷ್ಟು ಆರೋಗ್ಯ, ಆಯಸ್ಸು ದಯಪಾಲಿಸಲು ದೇವರಲ್ಲಿ ಪ್ರಾರ್ಥಿಸುತ್ತೇವೆ....

ಮಕ್ಕಳು : ಸಿದ್ದೇಶ್, ಸೀಮನ್ಸ್, ಬೆಂಗಳೂರು, ಕ್ಯಾಂಪ್ ತೈವಾನ್
ಮಧುಕೇಶ್, ಬಿ.ಇ.ಎಲ್., ಬೆಂಗಳೂರು.
ವಿನಯ್, ಮರ್ಸಿಡೀಸ್ ಬೆಂಜ್, ಬೆಂಗಳೂರು.
ಮತ್ತು ಸೊಸೆಯಂದಿರು, ಮೊಮ್ಮಕ್ಕಳು. ಫೋ. : 9448451421




KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas